
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 10 | ಸಂಚಿಕೆ 2 | ಜನವರಿ 10, 2016 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com










ಜನತೆಯೊಡನೆ ಜೀವಂತ ಸಂಪರ್ಕ ಇರುವ

ಕ್ರಾಂತಿಕಾರಿ ಪಕ್ಷ ಕಟ್ಟೋಣ

ಫ್ರೀ ಬೇಸಿಕ್ಸ್ 'ಫ್ರೀ'ನೂ ಇಲ್ಲ, 'ಬೇಸಿಕ್ಕೂ' ಇಲ್ಲ



ಒಡನಾಡಿ ಪ್ರಸನ್ನರೊಂದಿಗೆ ಒಡನಾಟ

ಪರಿಷತ್ ಫಲಿತಾಂಶದ ಅರ್ಥ

ವೆನುಜುವೇಲಾ ಸೋಲು



ಒಡನಾಡಿಯೊಂದಿಗಿನ ಒಡನಾಟ

ಎಸ್.ವೈ. ಗುರುಶಾಂತ್

ಈ ಸಾವು ನ್ಯಾಯವೇ? !
ಈ ಪ್ರಶ್ನೆ ಶೂಲದಂತೆ ಮತ್ತೇ ಮತ್ತೇ ಇರಿಯುತ್ತದೆ.

ಹುಟ್ಟಿದ ಎಲ್ಲರೂ, ಎಲ್ಲವೂ ಸಾಯಲೇಬೇಕು, ನಿಜ. ಇದು ನಿಸರ್ಗ ಸಹಜ, ಆದರೆ ಸಾವು ಅಕಾಲಿಕ, ಅನಿರೀಕ್ಷಿತವಾದರೆ? ಅದು ಎಲ್ಲಿಲ್ಲದ ಆಘಾತ! ಅನ್ಯಾಯದೆದುರು ಸಿಡಿದೇಳುವ, ನ್ಯಾಯಕ್ಕಾಗಿ ಬಡಿದಾಡುವ, ಸದಾ ಮಾನವೀಯತೆಯ ತುಡಿತದಲ್ಲಿ ಮಿಡಿವ ಹೃದಯವೊಂದು ಪಟ್ಟನೇ ಬಡಿತ ನಿಲ್ಲಿಸಿ ಬಿಟ್ಟರೇ!

ಡಿಸೆಂಬರ್ 23 ರಂದು (2015) ನಮ್ಮೆಲ್ಲರನ್ನು ಅಗಲಿದ ನನ್ನ ದೀರ್ಘಕಾಲದ ಒಡನಾಡಿ ಪ್ರಸನ್ನ ವಾಯು ವಿಹಾರಕ್ಕೆ ಹೋದಾಗ ಹೃದಯ ಸ್ಥಂಬನದಿಂದ ಕೊನೆಯುಸಿರೆಳೆದ ಅಘಾತ ಭರಿಸಲಾಗುತ್ತಿಲ್ಲ. ಆತನ ವಯಸ್ಸು 50 ದಾಟಿರಲಿಲ್ಲ. ಲೋಕದ ಕಣ್ಣಳತೆಯಲ್ಲಿ ಇನ್ನೂ ಮಧ್ಯ ವಯಸ್ಕ, ಆದರೆ ಕಮ್ಯೂನಿಸ್ಟ್ ಚಳುವಳಿಯಲ್ಲಿ ಈತನದು ಹದಿಹರೆಯ. ಇಷ್ಟರೊಳಗೆ ಕಾಮ್ರೇಡ್ 'ಪ್ರಸನ್ನ' ಎಲ್ಲರ ಮನದೊಳಗೆ ನೆಲೆಯಾದ. ದುಡಿಯುವ ವರ್ಗದ ಚಳುವಳಿಯಲ್ಲಿ, ಸಮಸಮಾಜದ ಆಶಯಕ್ಕಾಗಿ ಸಾಮಾಜಿಕ ಬದಲಾವಣೆಯ ಸಶಕ್ತ ಮೂಂಚೂಣಿಯಾದ ಕಮ್ಯುನಿಸ್ಟ್ ಆಂದೋಲನದಲ್ಲಿ ಹಂತ, ಹಂತವಾಗಿ ಮೇಲಕ್ಕೆ ಬೆಳೆದ. ರಾಷ್ಟ್ರದ ಚಳುವಳಿಯ ನಾಯಕತ್ವದ ಭಾಗವಾದ. ಜಗದ ಹಲವು ವೇದಿಕೆಗಳಲ್ಲಿ ಶ್ರಮಜೀವಿಗಳ ಹಕ್ಕು ಪ್ರತಿಪಾದಿಸಿದ.

ಆ ದಿನಗಳು..

ಸಂಗಾತಿ ಪ್ರಸನ್ನ ಅವರೊಂದಿಗಿನ ನನ್ನ ಒಡನಾಟದ ನಂಟು ಅತ್ಯಂತ ದೀರ್ಘ. ಆತ ಬಳ್ಳಾರಿಯಲ್ಲಿ ಪಿಯುಸಿ ವಿದ್ಯಾರ್ಥಿಯಾಗಿರುವಾಗಿನಿಂದ ಅಂದರೆ 1981 ರಿಂದ ಇಲ್ಲಿಯವರೆಗೂ. ನಾನು ಮಾರ್ಕ್ಸ್‌ವಾದಿ ಚಿಂತನೆಗೆ ಆಕರ್ಷಿತನಾದುದು 1978 ರಲ್ಲಿ, ಪಿಯುಸಿ ವಿದ್ಯಾರ್ಥಿಯಾಗಿರುವಾಗ. ಆಗ ಒಂದು ಅಧ್ಯಯನ ವೃಂದವಾಗಿ, ಬಳಿಕ ಸಮುದಾಯ, ಬಂಡಾಯ ಸಾಹಿತ್ಯ ಚಳುವಳಿ ರೂಪುಗೊಳ್ಳುವ ಪ್ರಕ್ರಿಯೆಯ ಭಾಗವಾಗಿದ್ದೆ. ತದನಂತರ 1980 ರಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಹೊಸಪೇಟೆಯಲ್ಲಿ ಆರಂಭಗೊಂಡಿತು. ಜಿಲ್ಲೆಯಲ್ಲಿ 1980, 81 ಹಾಗೂ 82 ಎಸ್.ಎಫ್.ಐ ಅತ್ಯಂತ ಕಷ್ಟಕರ ದಿನಗಳನ್ನು ಎದುರಿಸಿದ ವರುಷಗಳು. 1980 ರಲ್ಲಿ ಹೊಸಪೇಟೆಯಲ್ಲಿ ವಿಜಯನಗರ ಕಾಲೇಜ್‌ನಲ್ಲಿ ಎಸ್.ಎಫ್.ಐ. ಆರಂಭಗೊಂಡ ದಿನಗಳಿಂದಲೂ ಸಂಘಟನೆ ಬೆಳೆಯದಂತೆ, ದಮನಿಸಲು ಸ್ಥಾಪಿತ ಹಿತಾಸಕ್ತಿಗಳ ಸತತ ಯತ್ನ. ಅದಕ್ಕೆ ಪೊಲೀಸರ ಮಿಲಾಖತ್. ಹೀಗಾಗಿ 1980 ರಲ್ಲಿ ಹಾಗೂ 1981 ರಲ್ಲಿ ಮುಖ್ಯ ಕಾರ್ಯಕರ್ತರು ಮತ್ತು ಹಿತೈಷಿಗಳ ಮೇಲೆ ಅಮಾನವೀಯ ಕ್ರೌರ್ಯ ನಡೆಸಿ ಸಂಘಟನೆಯನ್ನು ಬಗ್ಗು ಬಡಿಯಲು ಪ್ರಯತ್ನಿಸಲಾಯಿತು. 1980 ರಲ್ಲಿ ಎಸ್.ಎಫ್.ಐ. ನಾಯಕತ್ವದಲ್ಲಿ ಕಾಲೇಜಿನ ಪ್ರಶ್ನೆಗಳಿಗಾಗಿ ಹೋರಾಟ ನಡೆಸಲಾಯಿತು. ಅದೇ ಸಂದರ್ಭದಲ್ಲಿ ರಾಜ್ಯದಲ್ಲಿ ಗುಂಡೂರಾಯರ ಸರ್ಕಾರದ ದಮನದ ವಿರುದ್ಧ ಪ್ರತಿಭಟನೆಗಳು ಭುಗಿಲೆದ್ದ ಹಿನ್ನೆಲೆಯಲ್ಲಿ ಶಾಲಾ ಕಾಲೇಜಿಗೆ ಒಂದು ವಾರದ ರಜಾ ಘೋಷಿಸಲಾಗಿತ್ತು. ಬೆಂಗಳೂರಿನಲ್ಲಿ ರಾಜ್ಯಪಾಲರ ಮನೆ ಮುಂದೆ ಪ್ರತಿಭಟನೆ ಮುಗಿಸಿ 20ನೇ ಆಗಸ್ಟ್ ಹೊಸಪೇಟೆಗೆ ಜಂಬಯ್ಯನಾಯಕ್ ವಾಪಾಸಾಗುತ್ತಿದ್ದಂತೆ ಹುಸೇನ್ ತಂಬ್ರಳ್ಳಿ, ಎಂ. ಜಬಯ್ಯನಾಯಕ್‌ರನ್ನು ಬಂಧಿಸಿ ಪೊಲೀಸರು ಬಡಿದರು. 1981 ರಲ್ಲಿ ವಿಜಯನಗರ ಕಾಲೇಜಿನ ಕನ್ನಡ ಅಧ್ಯಾಪಕರಾದ ಪ್ರೊ. ಎಸ್.ಎಸ್. ಹಿರೇಮಠ್ ರವರನ್ನು ದುರುದ್ದೇಶಪೂರ್ವಕವಾಗಿ ವರ್ಗಾವಣೆ ಮಾಡಿದ್ದನ್ನು ವಿರೋಧಿಸಿ ಪ್ರತಿಭಟನೆ ನಡೆಯಿತು. ಭಾಗವಹಿಸಿದ ಅಂದಿನ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಎಸ್. ಆರ್. ಆರಾಧ್ಯರನ್ನು ಒಳಗೊಂಡು ಹಿತೈಷಿಗಳಾಗಿದ್ದ ರತನ್‌ಸಿಂಗ್, ಬಿ.ವೆಂಕೋಬ ನಾಯಕ್, ಯುಮನಪ್ಪ ರವರನ್ನು ಪೋಲೀಸರು ಠಾಣೆಯಲ್ಲಿ ಹಣಿದರು. ವಿಶೇಷವಾಗಿ, ಆರಾಧ್ಯರನ್ನು ಗುರಿಯಾಗಿಸಿ ಇಡೀ ಮೈಯ ಒಂದಿಚೂ ಬಿಡದೇ ಲಾಠಿ, ಬೂಟುಗಳಿಂದ (ಸ್ವತಃ ಅಂದು ಪ್ರೊಬೆಷನರಿ DYSP ಯಾಗಿ ಬಂದಿದ್ದ ಎಂ. ವಿಷ್ಣುಮೂರ್ತಿ (IPS) ಅಮಾನವೀಯವಾಗಿ ಬಡಿದಿದ್ದರು. ಇದಾದ ನಂತರವೂ ಎಸ್.ಎಫ್.ಐ ಮತ್ತು ಸಮುದಾಯಕ್ಕೆ ಸೇರದಂತೆ ಭಯ ಹುಟ್ಟಿಸಲಾಗುತ್ತಿತ್ತು. ಹೀಗೆ ದೌರ್ಜನ್ಯ ತಾರಕ್ಕೇರಿತ್ತು. ಬಳ್ಳಾರಿ ಜಿಲ್ಲೆಯಲ್ಲಿ SFI ಬೆಳೆಯದಂತೆ ತಡೆಯುವ ದಮನದ ವಿರುದ್ಧ ಪ್ರತಿರೋಧ ಒಡ್ಡಲೇಬೇಕು, ಅದಕ್ಕಾಗಿ ಬಾಂಬೆಯಲ್ಲಿ ನಡೆಯಲಿರುವ ಅಖಿಲ ಭಾರತ ಸಮ್ಮೇಳಕ್ಕೆ ಪೂರ್ವಭಾವಿಯಾಗಿ ರಾಜ್ಯ ಸಮಾವೇಶವನ್ನು ಹೊಸಪೇಟೆಯಲ್ಲೇ ಸಂಘಟಿಸಬೇಕೆಂದು ಗಂಗಾವತಿಯಲ್ಲಿ ಸೇರಿದ್ದ ಎಸ್.ಎಫ್.ಐ. ನ ರಾಜ್ಯ ಸಮಿತಿ ಸಭೆ 1981ರಲ್ಲಿ ನಿರ್ಧರಿಸಿದಂತೆ ನಾವು ತಯಾರಿ ಆರಂಭಿಸಿದ್ದೆವು.

ಎಸ್.ಎಫ್.ಐ. ರಾಜ್ಯ ಸಮಾವೇಶ

ಇದೇ ಅವಧಿಯಲ್ಲಿ ಬಳ್ಳಾರಿಯಲ್ಲಿ 1981 ರಲ್ಲಿ ಅಲ್ಲಿನ ನಮ್ಮ ಹಿತೈಷಿಗಳಾದ ಪ್ರದೀಪ್ ಕುಮಾರ್ ಬೆಳಗಲ್ ಮುಂತಾದವರ ಮುತುವರ್ಜಿಯಿಂದ ವಿದ್ಯಾರ್ಥಿಗಳ ಸಭೆ ನಡೆದು ಸದಸ್ಯತ್ವ ಆರಂಭಗೊಂಡಿತು. ಇದರ ಮೊದಲ ಕೆಲಸವೆಂದರೆ ಹೊಸಪೇಟೆಯ ರಾಜ್ಯ ಸಮಾವೇಶದ ಪ್ರಚಾರಕ್ಕಾಗಿ ಗೋಡೆ ಬರಹ ಬಳ್ಳಾರಿಯಲ್ಲಿ ಮಾಡುವುದು. ಅದರಂತೆ ರಾತ್ರಿ ಗೋಡೆ ಬರಹ ಮಾಡುತ್ತಿದ್ದ ಐದು ಜನ ವಿದ್ಯಾರ್ಥಿಗಳ ಈ ತಂಡವನ್ನು ಮಧ್ಯರಾತ್ರಿಯಲ್ಲಿ ಪೊಲೀಸರು ಬಂಧಿಸಿ ಗ್ರಾಮೀಣ ಠಾಣೆಗೆ ಕರೆದೊಯ್ದು ಚೆನ್ನಾಗಿ ಹೊಡೆದರು. ಇದು ರಾಜ್ಯ ಮಟ್ಟದ ಸುದ್ದಿಯೂ ಆಯಿತು, ದಬ್ಬಾಳಿಕೆಯ ವಿರುದ್ಧವೂ ಪ್ರತಿಭಟಿಸಿದೆವು.

ಈ ಮೊದಲ ತಂಡದಲ್ಲಿದ್ದವರೇ ಎಸ್.ಪ್ರಸನ್ನಕುಮಾರ್, ಸಿ.ರಘುನಾಥ್, ಬಿಂದು ಮಾಧವ, ಮಧುಸೂಧನ್ ಕಾಡ್ಲೂರು ಇತರರು. ಇದಕ್ಕೆ ನೇತೃತ್ವ ಪ್ರಸನ್ನನದೇ. ಈ ಘಟನೆಯಿಂದಾಗಿ ಅವರಲ್ಲೂ, ನಮ್ಮಲ್ಲೂ ಸವಾಲನ್ನು ಎದುರಿಸುವ ದೃಢ ಸಂಕಲ್ಪ ಮತ್ತಷ್ಟು ಗಟ್ಟಿಯಾಯಿತು. ರಾಜ್ಯ ಸಮಾವೇಶದ ತಯಾರಿ ಬಿರುಸುಗೊಳಿಸಿದೆವು. ಇದನ್ನು ವಿಫಲಗೊಳಿಸಿ ಹಾಳು ಮಾಡಲು ಪೊಲೀಸರು ಹೊಸಪೇಟೆಯಾದ್ಯಂತ ಸೆಕ್ಷನ್ 35 ಹೇರಿ, ಸಮಾವೇಶ ರದ್ದುಗೊಳಿಸಲು ಆದೇಶಿದರು. ಇದನ್ನು ಪ್ರತಿಭಟಸಿ ಅಖಿಲ ಭಾರತ ಅ ಧ್ಯಕ್ಷರಾಗಿದ್ದ ಕಾಂ. ಎಂ.ಎ. ಬೇಬಿ ಕಾಂ. ಎಸ್.ಆರ್. ಆರಾಧ್ಯ ಮತ್ತು ನಾನು ಎಸ್.ಪಿ. ಯವರನ್ನು ಕಾಣಲು ಬಳ್ಳಾರಿಗೆ ಹೋದೆವು. ಅವರಿಬ್ಬರು ಒಳಗೆ ಹೋದಾಗ ಹೊರಗೆ ನಾನು ಕಾವಲು ವೀಕ್ಷಕ. ಆಗ ಪ್ರಸನ್ನ ಬೇಬಿಯವರನ್ನು ಕರೆದು ತರಲು ಗುಂತಕಲ್‌ಗೆ ಆರಾಧ್ಯರೊಂದಿಗೆ ತೆರಳಿದ ನೆನಪು. ಬಳಿಕ ಹೊಸಪೇಟೆ ಮತ್ತು ಇತರೆ ಭಾಗಗಳ ಸಂಗಾತಿಗಳು ಅವಿಶ್ರಾಂತವಾಗಿ ಶ್ರಮಿಸಿದರು. ಅಂತೂ ಸವಾಲಿನ ನಡುವೆ ರಾಜ್ಯ ಸಮಾವೇಶ ಯಶಸ್ವಿಯಾಯಿತು. ಅಂದು ನಡೆದ ಪ್ರತಿ ಕಲಾಪಗಳು, ಮೆರವಣಿಗೆ, ಬಹಿರಂಗ ಸಭೆ ಐತಿಹಾಸಿಕ, ಅವಿಸ್ಮರಣೀಯ.

ಹೇಗೆಲ್ಲಾ ಪೊಲೀಸರು ದೌಜ್ಯನ ನಡೆಸಿ ನಮ್ಮ ಚಳುವಳಿಯ ಬೆಳವಣಿಗೆಯನ್ನು ತಡೆಯಲು ಪ್ರಯ ತ್ನ ನಡೆಸಿದರೂ ಅದು ಸಾಧ್ಯವಾಗಲೇ ಇಲ್ಲ. ಒಂದೊಂದು ದೌಜನ್ಯ ನಡೆದ ಬಳಿಕ ಮತ್ತೊಂದು ತಾಲೂಕುಗಳಿಗೆ ವಿಸ್ತಾರಗೊಂಡಿತು. ಹಿರೇಮಠ್ ರವರ ವರ್ಗಾವಣೆಯಾದಂತೆ ಆ ಊರುಗಳಲ್ಲಿ ಎಸ್.ಎಫ್.ಐ. ಮತ್ತು ಪ್ರಗತಿಪರ ಸಂಘಟನೆಗಳು ಆರಂಭಗೊಂಡವು. ಹೂವಿನ ಹಡಗಲಿ, ಹರಪನಹಳ್ಳಿ, ಹಗರಿಬೊಮ್ಮನಹಳ್ಳಿಯತ್ತ ಎಸ್.ಎಫ್.ಐ. ಕುಡಿ ಚಾಚಿತು. ಹೀಗೆ ಎಸ್.ಎಫ್.ಐ. ಸಂಘನೆಗೆ ಜಿಲ್ಲಾ ಸ್ವರೂಪ ಬರ ತೊಡಗಿತು. ಆಗ 1982ರಲ್ಲಿ ಹೊಸಪೇಟೆಯಲ್ಲಿ ಸಮಾವೇಶ ನಡೆದು ಒಂದು ಜಿಲ್ಲಾ ಸಂಘಟನಾ ಸಮಿತಿ ರಚನೆಯಾಗಿ ಕಾಂ.ಕೆ. ಶಾಂತಕುಮಾರಿ ಸಂಚಾಲಕಿಯಾಗಿ, ನಾನು ಸಹ ಸಂಚಾಲಕನಾಗಿ ಜವಾಬ್ದಾರಿ ಪಡೆದೆವು. ಆಗಲೇ ನೆಲೆಗೊಂಡಿದ್ದ ಸಮುದಾಯ, ಬಂಡಾಯ ಸಾಹಿತ್ಯ ಸಂಘಟನೆ ಜೊತೆಗೆ 1982 ಡಿ.ವೈ. ಎಫ್.ಐ. (ಮೊದಲು ಡಿ.ವೈ.ಓ ಅಂತಾ) ಹುಲುಗಪ್ಪ ಗುಜ್ಜಲ್, ಜಂಬಯ್ಯನಾಯಕ್, ತಾಯಪ್ಪನಾಯಕ್, ರಾಮಚಂದ್ರ ನಾವಡ ಮುಂತಾದವರು ವಹಿಸಿದ್ದರು.

ಸಮರಶೀಲ ವಿದ್ಯಾರ್ಥಿ ನಾಯಕ

1981 ರಲ್ಲಿ ಬಳ್ಳಾರಿಯಲ್ಲಿ ಪ್ರಸನ್ನರಿದ್ದ ತಂಡ ಸದಸ್ಯತ್ವ ನೊಂದಣಿ, ಅದ್ಯಯನ ವೃಂದ, ಕಾಲೇಜಿನ ಸಮಸ್ಯೆಗಳ ವಿರುದ್ದ ಹೋರಾಟ, ವಿವಿಧ ಸ್ಪರ್ಧೆಗಳ ಮುಂತಾದವುಗಳ ಮೂಲಕ ಚಳುವಳಿ ವಿಸ್ತರಿಸಿತು. ಈ ತಂಡ ಬೆಳಯುತ್ತಲೇ ಉಮೇಶ್, ಸುರೇಶ್, ಎ.ಜಿ. ಗಂಗಾಧರ, ಯರಿಸ್ವಾಮಿ ಮುಂತಾದವರು ಸೇರಿದರು. ಇದು ಬೆಳೆಯುತ್ತಾ ಹೋಯಿತು. ಇವರ ತಾತ್ವಿಕ ತಿಳವಳಿಕೆ, ಕ್ರಿಯಾಶೀಲತೆಗಳಿಂದ ಉಪನ್ಯಾಸಕರು, ವಕೀಲರೂ, ವಿವಿಧ ನೌಕರರು ಹಿತೈಷಿಗಳಾದರು.

ವೀರಶೈವ ಕಾಲೇಜಿನಲ್ಲಿ ವಿವಿಧ ವಿಧ್ಯಾರ್ಥಿ ಗುಂಪುಗಳೂ ಇವರ ಸನಿಹಕ್ಕೆ ಬಂದರು. ಇದನ್ನು ಸಹಿಸದ ಕೆಲ ಗುಂಪುಗಳು ಗೂಂಡಾಗಿರಿ ಮಾಡಲು ಬಂದು ಸರಿಯಾಗಿ ಏಟುಗಳನ್ನು ತಿಂದರು. ಇದರಲ್ಲಿ ಪ್ರಸನನ್ನ ನೇರ ನುಗ್ಗುವ ಗುಣದಿಂದಾಗಿ ಅನೇಕರು ತಂಟೆಗೆ ಬರದೇ ದೂರ ಉಳಿದರು. ಹೀಗಿತ್ತು ಪ್ರಸನ್ನನ ಧೈರ್ಯ. ಇವರ ನೇತೃತ್ವದಲ್ಲಿ ಎಸ್.ಎಫ್.ಐ. ಅನೇಕ ಮಹತ್ವದ ದಾಖಲೆಯ ಹೋರಾಟಗಳನ್ನು ನಡೆಸಿತು. 1984 ರ ಜುಲೈನಲ್ಲಿ ಆರಂಭಗೊಂಡ ಅಲ್ಲಿಪುರ ವಿಧ್ಯಾರ್ಥಿಗಳ ಹಾಸ್ಟೆಲ್ ಹೋರಾಟ. ಅಲ್ಲಿನ ಪ್ರಶ್ನೆಗಳನ್ನು ಎತ್ತಿಕೊಂಡ ಕೂಡಲೇ ಅಲ್ಲಿನ ಆಡಳಿತ ಮತ್ತು ಪೊಲೀಸರು ಜೊತೆ–ಗೂಡಿ ಕುತಂತ್ರ ಮಾಡಿದರು. ಈ ನಾಯಕರಾರೂ ಅಲ್ಲಿಗೆ ಬರದಂತೆ ನಿಷೇಧ ಹೇರಿದರು. ಆದರೂ ಕತ್ತಲೆಯಲ್ಲಿ ವಿಧ್ಯಾರ್ಥಿಗಳನ್ನು ಕಂಡು ಧೈರ್ಯ ತುಂಬಿ ಸಮಸ್ಯೆಗಳು ಮತ್ತು ಅವ್ಯವಹಾರಗಳ ವಿರುದ್ದ ಜಾಗೃತಗೊಳಿಸಿ ಹೋರಾಟ ಮುಂದುವರಿಸಲಾಯಿತು. ಇದನ್ನರಿತ ಪೊಲೀಸರು ವಿಧ್ಯಾರ್ಥಿಗಳಂತೆ ಸೋಗು ಹಾಕಿ ಇವರನ್ನು ಕರೆಸಿಕೊಂಡು ಬಂಧಿಸಿ ಠಾಣೆಗೆ ಒಯ್ದು ದೌರ್ಜನ್ಯ ನಡೆಸಿದರು. ಇದರಲ್ಲಿ ಪ್ರಸನ್ನ, ಸಿ ರಘುನಾಥ್, ಎ.ಜಿ. ಗಂಗಾಧರ, ಯರಿಸ್ವಾಮಿ ಕಂಬಳಿಮಠ ಮುಂತಾದ ವರಿಗೆ ತುಂಬಾ ಏಟುಗಳಾದವು. ಜಿಲ್ಲೆಯಲ್ಲಿ ಪ್ರತಿಭಟನೆಗಳಾದ ಬಳಿಕ ಇವರನ್ನು ಬಿಡಲಾಯಿತು. ಆದರೆ ಗಂಗಾಧರ್ (ಗಾಂಧಿ) ರವರ ಕೈಯನ್ನು ಸಬ್ ಇನ್ಸೆಪ್ಟರ್ ತಿರುವಿದ್ದರಿಂದ ತೋಳಿನ ಜಾಯಿಂಟ್ ತಪ್ಪಿತು. ಹೀಗೆ ಗಾಯಾಳುಗಳನ್ನು ಪ್ರಸನ್ನ ಅವರ ಮನೆಗೆ ಕರೆ ತಂದಿದ್ದ. ಇದನ್ನು ಕಂಡ ಪ್ರಸನ್ನರ ತಾಯಿ ಶ್ರೀಮತಿ ಲಕ್ಷ್ಮಿದೇವಮ್ಮ ಮಮ್ಮಲ ಮರುಗಿ ಪೊಲೀಸರಿಗೆ ಶಾಪ ಹಾಕಿ ಉಪಚರಿಸಿದಳು. ಮುಂದೆ ಅವರು ಚಳುವಳಿಯಲ್ಲಿ ತೊಡಗಿ ಎಲ್ಲರ ಪ್ರೀತಿಯ 'ತಾಯಿಯಾಗಿ ಬೆಳಗಿದಳು.

ವಿಶೇಷವೆಂದರೆ ಇವರನ್ನು ಹೊಡೆದಿದ್ದ ಎಸ್.ಐ (ಸುಭಾಷ್ ಗುಡಿಮನಿ) ವಿರುದ್ದವೇ ಪ್ರಸನ್ನ, ರಘು ಮತ್ತಿತರರು ಆತನಿಗೇ ದೂರು ನೀಡಿ ಎಫ್.ಐ.ಆರ್ ಹಾಕಲೇಬೇಕೆಂದು ಪಟ್ಟು ಹಿಡಿದು ಪೊಲೀಸ್ ಠಾಣೆಯಲ್ಲಿ ಧರಣಿ ನಡೆಸಿದ್ದು. ಇಂತಹ ಹಲವಾರು ಹೋರಾಟಗಳ ಕಂತೆಗಳೇ ಇವೆ.


ಅದರಲ್ಲಿ ಡಿ.ವೈ.ಎಫ್.ಐ. ನೇತೃತ್ರದಲ್ಲಿ ತಿಂಗಳು ಗಟ್ಟಲೇ ನಡೆದ ಮಹಾನಂದಿಕೊಟ್ಟಂ ಸ್ಲಂ ವಾಸಿಗಳ ಧೀರೋದ್ದಾತ ಹೋರಾಟ. (ರೌಡಿಸಂ ಎದುರಿಸಿ). 'ವಿಜಯನಗರ ಉಕ್ಕು ಕರ್ನಾಟಕದ ಹಕ್ಕು' ಗಾಗಿ ನಡೆದ ಜಿಲ್ಲಾ ಜಾಥಾ ಸಂದರ್ಭದಲ್ಲಿ 10 ಸಾವಿರ ವಿಧ್ಯಾರ್ಥಿಗಳು ಹಾಗೂ ಯುವಜನರಿಂದ ಜಿಲ್ಲಾಧಿಕಾರಿಗಳ ಕಛೇರಿ ಮುತ್ತಿಗೆ–ಲಾಠಿಚಾರ್ಜು ಘರ್ಷಣೆ. ಬಂಡಿ ಮೋಟು, ಅಂದ್ರಾಳು ಹೋರಾಟಗಳು ಸ್ಮರಣಿಯ. ಅಂದ್ರಾಳುವಿನ ಡಿವೈಎಫ್ಐ ನಾಯಕ ಗಂಗಾಧರ ಹುತಾತ್ಮನಾದದ್ದೂ ಮರೆಯದ ಗಟನೆ.

ಹೀಗೆ ಸಂಘಟನೆಯ ಮುಂಚೂಣಿಯಲ್ಲಿ ಪ್ರಸನ್ನ ತೊಡಗಿಸಿ ಕೊಂಡರು. ಎಸ್.ಎಫ್.ಐ. ನ ಮೊದಲ ಜಿಲ್ಲಾ ಸಮ್ಮೇಳನ 1983 ಜನವರಿ 9, 10ರಂದು ಹರಪನಹಳ್ಳಿಯಲ್ಲಿ ನಡೆದು ನಾನು ಜಿಲ್ಲಾ ಕಾರ್ಯದರ್ಶಿಯಾಗಿ, ಆಯ್ಕೆಯಾಗಿದ್ದೆ. 2ನೇ ಜಿಲ್ಲಾ ಸಮ್ಮೇಳನ ಬಳ್ಳಾರಿಯಲ್ಲಿ 1983ರ ಸಪ್ಟಂಬರ್‌ನಲ್ಲಿ ನಡೆದು ಕಾಂ ಪ್ರಸನ್ನ ಅದ್ಯಕ್ಷರಾಗಿ ನಾನು ಕಾರ್ಯದರ್ಶಿಯಾಗಿ ಕಾಂ. ವಿ.ಎಸ್. ಕೋದಂಡರಾಮ್ ಖಜಾಂಚಿಯಾಗಿ ಜಿಲ್ಲಾ ಸಮಿತಿ ಆಯ್ಕೆಯಾಯಿತು. ಈ ತಂಡದ ಕಾರ್ಯ ವಿಧಾನ ಅದರ ಸೈದಾಂತಿಕ ಸಂಘಟನಾ ಬಲವು ಉಲ್ಲೇಖನೀಯ. ಅತ್ಯಂತ ಶಿಸ್ತುಬದ್ಧ ಕಾರ್ಯನಿರ್ವಹಣೆ, ಸಾಮೂಹಿಕ ನಿರ್ಧಾರಗಳು–ವೈಯುಕ್ತಿಕ ಹೊಣೆಗಾರಿಕೆ, ಸ್ವಯಂ ವಿಮರ್ಶೆ–ವಿಮರ್ಶೆ, ವಿವಿಧ ಪ್ರಶ್ನೆಗಳ ಆಧಾರದಲ್ಲಿ ವಿವಿಧ ವಿಭಾಗಗಳ ವಿದ್ಯಾರ್ಥಿಗಳ ಹೋರಾಟ ಕಟ್ಟುವಲ್ಲಿ,

ಪುಟ 4 ಕ್ಕೆ

ªÀiÁvÉAzÀgÉ EzÀÄ

ಶ್ರೀಮಂತರು ಬಡವರನ್ನು ಸುಲಿದಾಗ ಅದನ್ನು 'ಬಿಸಿನೆಸ್' ಎನ್ನುತ್ತಾರೆ. ಬಡವರು ಅದರ ವಿರುದ್ಧ ಪ್ರತಿರೋಧ ತೋರಿದರೆ, ಅದನ್ನು 'ಹಿಂಸಾಚಾರ' ಎನ್ನುತ್ತಾರೆ'.



– ಮಾರ್ಕ್ ಟ್ವೈನ್
(ಪ್ರಸಿದ್ಧ ಅಮೆರಿಕನ್ ವ್ಯಂಗ್ಯ ಬರಹಗಾರ)

ವಿಧಾನ ಪರಿಷತ್ ಚುನಾವಣೆ ಫಲಿತಾಂಶದ ಅರ್ಥ ಏನು?

ಸಂಪಾದಕೀಯ

ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ನಡೆಯುವ ಚುನಾವಣೆಗಳ ಫಲಿತಾಂಶ ಪ್ರಕಟವಾಗಿದೆ. ಪಕ್ಷಗಳ ಬಲಾಬಲ ದೃಷ್ಟಿಯಿಂದ ಹೆಚ್ಚು ಕಡಿಮೆ ಯಥಾಸ್ಥಿತಿ ಮುಂದುವರೆದಿದೆ. ಚುನಾವಣೆ ನಡೆದ 25 ಸ್ಥಾನಗಳಲ್ಲಿ ಕಾಂಗ್ರೆಸ್ ವಿಜೇತರ ಸಂಖ್ಯೆ 12 ರಿಂದ 13 ಕ್ಕೇರಿದೆ. ಆದರೆ ಚಿತ್ರದುರ್ಗದ ಪಕ್ಷೇತರ ಸದಸ್ಯ ರಘು ಆಚಾರ್ ಈ ಬಾರಿ ಕಾಂಗ್ರೆಸ್ ಟಿಕೆಟಿನಿಂದ ಗೆದ್ದಿರುವುದರಿಂದ ಕಾಂಗ್ರೆಸ್ ತನ್ನ ಸ್ಥಾನಗಳನ್ನು ಉಳಿಸಿಕೊಂಡಿದೆ ಎಂದಷ್ಟೇ ಹೇಳಬಹುದು. ಬಿಜೆಪಿ, ಜೆಡಿ(ಎಸ್)ಗಳು ತಲಾ ಒಂದು ಸ್ಥಾನ ಕಳೆದುಕೊಂಡು ಅನುಕ್ರಮವಾಗಿ 6 ಮತ್ತು 4 ಸ್ಥಾನ ಪಡೆದುಕೊಂಡಿವೆ. ಪಕ್ಷೇತರರ ಸಂಖ್ಯೆ 1 ರಿಂದ 2 ಕ್ಕೇರಿದೆ. ಪಕ್ಷೇತರರಲ್ಲಿ ಬಿಜಾಪುರದ ಯತ್ನಾಳ್ ಬಿಜೆಪಿ ಬಂಡಾಯ ಅಭ್ಯರ್ಥಿ. ಬೆಳಗಾವಿಯ ವಿವೇಕರಾವ್ ಪಾಟೀಲ್ ಗೆದ್ದ ಇನ್ನೊಬ್ಬ ಪಕ್ಷೇತರ.

ಬಿಜೆಪಿ ಮತ್ತು ಜೆಡಿ(ಎಸ್)ಗಳು ನಿರೀಕ್ಷಿಸಿದ್ದಕ್ಕಿಂತ ಕಡಿಮೆ ಸೀಟು ಗಳಿಸಿದ್ದು ಮಾತ್ರವಲ್ಲ, ಹಿರಿಯ ನಾಯಕರ ಭದ್ರಕೋಟೆ ಎಂದು ಹೇಳಲಾದ ಪ್ರಮುಖ ಕ್ಷೇತ್ರಗಳಲ್ಲಿ ಮುಖಭಂಗ ಅನುಭವಿಸಿವೆ. ಬಿಜೆಪಿ ಅಭ್ಯರ್ಥಿ ಶಿವಮೊಗ್ಗದಲ್ಲಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದು ಯಡಿಯೂರಪ್ಪ ಮತ್ತು ಈಶ್ವರಪ್ಪ ಇಬ್ಬರಿಗೂ ತೀವ್ರ ಮುಖಭಂಗವಾಗಿದೆ. ಬಿಜೆಪಿ ಬಂಡಾಯ ಅಭ್ಯರ್ಥಿ ಹಾಗೂ ಉಚ್ಚಾಟಿತ ಯತ್ನಾಳ್ ಜಯ ಸಹ ಪಕ್ಷಕ್ಕೆ ತೀವ್ರ ಮುಖಭಂಗ. 15 ಸೀಟು ಗಳಿಸುತ್ತೇವೆ ಎಂದಿದ್ದ ಜಗದೀಶ ಶೆಟ್ಟರ್, ಕಾಂಗ್ರೆಸಿಗಿಂತ ಹೆಚ್ಚು ಸೀಟು ಗಳಿಸುತ್ತೇವೆ ಎಂದಿದ್ದ ಯಡಿಯೂರಪ್ಪ ತಮ್ಮ ಮಾತು ನುಂಗಿಕೊಳ್ಳಬೇಕಾಗಿದೆ. ಕಾಂಗ್ರೆಸ್ ಬಿಜೆಪಿಗಿಂತ ಒಂದು ಸ್ಥಾನ ಹೆಚ್ಚು ಗಳಿಸಿದರೂ ಕೂಡಾ ರಾಜಕೀಯ ಸನ್ಯಾಸ ಸ್ವೀಕರಿಸುತ್ತೇನೆ ಎಂದು ಸವಾಲು ಹಾಕಿದ್ದ ಈಶ್ವರಪ್ಪ ಅಂತೂ ಮುಖಭಂಗ ಮಾತ್ರವಲ್ಲ, ತೀವ್ರ ಲೇವಡಿಗೆ ಒಳಗಾಗಿದ್ದಾರೆ.

ಜೆಡಿ(ಎಸ್) ಭದ್ರಕೋಟೆ ಹಾಗೂ ಅಜೇಯ ರೆಕಾರ್ಡು ಇದ್ದ ಹಾಸನದಲ್ಲಿ ಸೋತಿದ್ದು ದೇವೆಗೌಡ ಕುಟಂಬಕ್ಕೆ ದೊಡ್ಡ ಮುಖಭಂಗ. ಇನ್ನೊಂದು ಗಟ್ಟಿ ನೆಲೆಯಾಗಿದ್ದ ಬೆಂಗಳೂರು ಗ್ರಾಮೀಣದಲ್ಲೂ ಕುಮಾರಸ್ವಾಮಿಯವರಿಗೆ ಮುಖಭಂಗ. ಮುಖಭಂಗಕ್ಕೆ ಒಳಗಾದವರು ಬಿಜೆಪಿ ಮತ್ತು ಜೆಡಿ(ಎಸ್)ಗಳು ಮಾತ್ರವಲ್ಲ, ಕಾಂಗ್ರೆಸ್‌ನ ಹಲವು ಪ್ರಮುಖ ನಾಯಕರು ಸ್ವಕ್ಷೇತ್ರಗಳಲ್ಲಿ ತಮ್ಮ ಆಯ್ಕೆಯ ಅಭ್ಯರ್ಥಿಗಳನ್ನು ಗೆಲ್ಲಿಸಲಾಗದೆ ಮುಖಭಂಗ ಎದುರಿಸಿದ್ದಾರೆ. ಕಲಬುರ್ಗಿಯಲ್ಲಿ ಖರ್ಗೆ, ತುಮಕೂರಿನಲ್ಲಿ ಡಾ.ಪರಮೇಶ್ವರ್, ಕೋಲಾರದಲ್ಲಿ ಮೊಯ್ಲಿ–ಮುನಿಯಪ್ಪ ಇವರಿಗೂ ಕಾಂಗ್ರೆಸ್ ಸೋಲಿನಿಂದ ಮುಖಭಂಗವಾಗಿದೆ. ಕಾಂಗ್ರೆಸ್ ಬಂಡಾಯ ಅಭ್ಯರ್ಥಿಗಳು ಯಾರೂ ಗೆದ್ದಿಲ್ಲ ಎಂಬುದಷ್ಟೇ ಕಾಂಗ್ರೆಸಿಗೆ ಸಮಾಧಾನದ ವಿಷಯ.

ಹೀಗೆ ಮೂರೂ ಪ್ರಮುಖ ಪಕ್ಷಗಳಿಗೂ, ಪ್ರಮುಖ ನಾಯಕರಿಗೂ ಮುಖಭಂಗ ಆಗುವುದರ ಅರ್ಥ ಏನು?   ಒಟ್ಟಾರೆಯಾಗಿ ವಿಧಾನ ಪರಿಷತ್ ಚುನಾವಣೆ ಫಲಿತಾಂಶಗಳ ರಾಜಕೀಯ ಅರ್ಥ ಏನು? ಈ ಪ್ರಶ್ನೆಗಳಿಗೆ ಉತ್ತರ ಕೊಡಲು ಪ್ರಯತ್ನಿಸುವ ಮೊದಲು ಇದಕ್ಕೆ ರಾಜಕೀಯ ಅರ್ಥ ಇದೆಯೆ? ವಿಧಾನ ಪರಿಷತ್ತಿಗೆ ಅರ್ಥ ಇದೆಯೇ? ಎಂಬ ಪ್ರಶ್ನೆ ಸಹ ಏಳುತ್ತದೆ.

ವಿಧಾನ ಪರಿಷತ್ ನೇರವಾಗಿ ಜನರಿಂದ ಚುನಾಯಿತವಾದದ್ದಲ್ಲ. ಪರೋಕ್ಷವಾಗಿ ಕೆಲವು ವಿಶಿಷ್ಟ 'ಕ್ಷೇತ್ರ'ಗಳಿಂದ ಆಯ್ಕೆಯಾದ ಸದಸ್ಯರಿಂದ ಆದದ್ದು. ಇದರಲ್ಲಿ ಮೂರನೇ ಒಂದು ಭಾಗ ವಿಧಾನ ಸಭೆ, ಮೂರನೇ ಒಂದು ಭಾಗ ಸ್ಥಳೀಯ ಸಂಸ್ಥೆಗಳಿಂದ ಮತ್ತು ಉಳಿದ ಮೂರನೇ ಒಂದು ಭಾಗ ಶಿಕ್ಷಕರ, ಪದವೀಧರರ ಕ್ಷೇತ್ರಗಳಿಂದ ಚುನಾಯಿತವಾದದ್ದು ಹಾಗೂ ನಾಮನಿರ್ದೇಶನದಿಂದ ತುಂಬಿದ್ದು. ಸಂವಿಧಾನದಲ್ಲೇ ಇದನ್ನು ರಾಜ್ಯದ ಇಚ್ಛೆಗೆ ಬಿಡಲಾಗಿದೆ. ಬಹುಸಂಖ್ಯಾತ ರಾಜ್ಯಗಳಲ್ಲಿ ವಿದಾನ ಪರಿಷತ್ತು ಅಸ್ತಿತ್ವದಲ್ಲಿ ಇಲ್ಲ. ಈಗ ಕೇವಲ ಏಳು ರಾಜ್ಯಗಳಲ್ಲಿ ವಿಧಾನ ಪರಿಷತ್ತು ಇದೆ. ಹಲವು ರಾಜ್ಯಗಳಲ್ಲಿ 1967ರ ಹೊತ್ತಿಗೆ ಇದ್ದಿದ್ದ ವಿಧಾನ ಪರಿಷತ್ತುಗಳನ್ನು ಕೊನೆಗೊಳಿಸಲಾಯಿತು. ಎರಡು ರಾಜ್ಯಗಳಲ್ಲಿ ವಿಧಾನ ಪರಿಷತ್ತು ಪುನಃ ಅಸ್ತಿತ್ವಕ್ಕೆ ತರುವ ಪ್ರಯತ್ನ ನಡೆದಿದೆ. ಪರೋಕ್ಷವಾಗಿ ಚುನಾಯಿತವಾದ ವಿಧಾನ ಪರಿಷತ್ತಿನ ಅಗತ್ಯ ಇಲ್ಲ. ಅವು ಅನಗತ್ಯ ಸಾರ್ವಜನಿಕ ಹಣ ಪೋಲು ಮಾಡುತ್ತವೆ. ಆಳುವ ವರ್ಗದ ಪಕ್ಷಗಳ ಸೋತ, ನಿವೃತ್ತ ಮತ್ತು ಪ್ರಭಾವಿ ಸದಸ್ಯರಿಗೆ ಹಿಂದಿನ ಬಾಗಿಲಿನಿಂದ ಶಾಸಕರ ಸ್ಥಾನ ಕೊಡುವ ಪ್ರಯತ್ನ. ಇದು ಸಿಪಿಐ(ಎಂ) ಮತ್ತು ಹೆಚ್ಚಿನ ಎಡ ಪಕ್ಷಗಳ ನಿಲುವು.

ಈ ಹಿನ್ನೆಲೆಯಲ್ಲಿ ಈಗಿನ ವಿಧಾನ ಪರಿಷತ್ತಿನ ಚುನಾವಣೆಗಳ ಫಲಿತಾಂಶವನ್ನು ಗಮನಿಸಬೇಕು. ಸ್ಥಳೀಯ ಸಂಸ್ಥೆಗಳ (ಗ್ರಾಮ ಪಂಚಾಯತ್ ಸದಸ್ಯರು ಬಹುಸಂಖ್ಯಾತರಾಗಿರುವ) ಸದಸ್ಯರು ಮತದಾರರಾಗಿರುವ ವಿಧಾನ ಪರಿಷತ್ತಿನ (ಮೂರನೇ ಒಂದು ಭಾಗದ) ಈ ಚುನಾವಣೆ ಜನರ ಅಭಿಪ್ರಾಯವನ್ನು ಪ್ರತಿನಿಧಿಸುವುದಕ್ಕೆ ಇದ್ದಿದ್ದರಲ್ಲಿ ಹೆಚ್ಚು ಹತ್ತಿರ ಬರುವಂತಹುದು. ಆದರೆ ಚುನಾವಣೆಯಲ್ಲಿ ಧಾರಾಳವಾಗಿ (ಹಿಂದೆಂದಿಗಿಂತಲೂ ಹೆಚ್ಚು – ಪ್ರತಿಯೊಬ್ಬರಿಗೆ 1 ಲಕ್ಷದ ವರೆಗೆ!) ಹಣ, ಚಿನ್ನ, ಬಾಂಡುಗಳು, ಉಡುಗೊರೆಗಳು ಮುಂತಾದ 'ಹಾರ್ಡ್ ಪವರ್' ಮಾತ್ರವಲ್ಲ, ಆಣೆ–ಭಾಷೆಗಳಂತಹ 'ಸಾಫ್ಟ್–ಪವರ್'ಗಳನ್ನೂ ಬಳಸಲಾಗಿದೆ ಎಂದು ಹೇಳಲಾಗಿದೆ. ಇದು ಆಳುವ ಕಾಂಗ್ರೆಸ್ ಬಗ್ಗೆ ಬಿಜೆಪಿ, ಜೆಡಿ(ಎಸ್)ಗಳ ಆಪಾದನೆ ಮಾತ್ರವಲ್ಲ, ಮೂರೂ ಪಕ್ಷಗಳು ಭ್ರಷ್ಟ ವಿಧಾನಗಳಲ್ಲಿ ತೊಡಗಿವೆ ಎಂದು ಇತರ ಮೂಲಗಳಿಂದ ವರದಿಗಳು ಬಂದಿವೆ. ಸ್ಥಳೀಯ ಸಂಸ್ಥೆ ಸದಸ್ಯರೇ ಇಂತಹ ವಿಧಾನ ಬಳಸಿ ಆಯ್ಕೆಯಾದವರೇ ಹೆಚ್ಚು ಎಂದು ನೆನಪಿಸಿಕೊಂಡು ಇದು ಎಷ್ಟು ಪ್ರಾತಿನಿಧಿಕ ಎಂದು ಅಂದಾಜು ಮಾಡಬೇಕು. ಸ್ಥಳೀಯ ಸಂಸ್ಥೆಗಳ ಸದಸ್ಯರಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಹಿಳಾ ಸದಸ್ಯರಿದ್ದೂ 8 ಮಹಿಳಾ ಅಭ್ಯರ್ಥಿಗಳಲ್ಲಿ ಒಬ್ಬ ಮಹಿಳೆ ಸಹ ಗೆದ್ದಿಲ್ಲ ಎಂಬುದೇ ಸಾಕು.

ಆದರೂ ಈ ಫಲಿತಾಂಶಗಳು ಸೀಮಿತ ರೀತಿಯಲ್ಲಾದರೂ ಏನು ಹೇಳುತ್ತಿವೆ ಎಂದು ನೋಡಬಹುದು. ಬಿಜೆಪಿ ಬಗ್ಗೆ 2014ರ ಲೋಕಸಭಾ ಚುನಾವಣೆಯಲ್ಲಿ ಕಂಡು ಬಂದ ಉತ್ಸಾಹ, 'ಹವಾ' ಇಲ್ಲ ಅಥವಾ ಪೂರ್ತಿ ಇಳಿದು ಹೋಗಿದೆ. ಕೊಡಗು, ಚಿಕ್ಕಮಗಳೂರು ಮುಂತಾದ ಕಡೆ ಬಿಜೆಪಿಯ 'ಧ್ರುವೀಕರಣ'ದ ಹಳೆಯ ಫಾರ್ಮುಲಾ 'ಕ್ಲಿಕ್' ಆಗದಿದ್ದರೆ ಬಹುಶಃ ಬಿಜೆಪಿ ಇನ್ನಷ್ಟು ಹಿನ್ನಡೆ ಕಾಣುತ್ತಿತ್ತು. ಜೆಡಿ(ಎಸ್) ಬಗೆಗೂ ಜನಕ್ಕೆ ತೀವ್ರ ಭ್ರಮ ನಿರಸನ ಆಗುತ್ತಿದೆ. ಕಾಂಗ್ರೆಸ್ ಆಳ್ವಿಕೆಯ ಬಗೆಗೂ ಭಾರಿ ಉತ್ಸಾಹ, ಭರವಸೆಗಳೂ ಕಂಡು ಬರುತ್ತಿಲ್ಲ ಎಂದು ಹೇಳಬಹುದೇನೋ?

ಮೂರೂ ಪಕ್ಷಗಳ ಪ್ರಮುಖ ಸೋಲುಗಳನ್ನು (ಗೆಲುವುಗಳಲ್ಲ) ಗಮನಿಸಿದರೆ ತೀವ್ರ ಆಂತರಿಕ ಕಲಹಗಳು, ವ್ಯಕ್ತಿಗತ ಪೈಪೋಟಿಗಳನ್ನು ನೋಡಬಹುದು. ಹಲವು ಕಡೆ ಇದು ಪಕ್ಷದ ಗಡಿಗಳನ್ನು ಮೀರಿ 'ನನ್ನ ವೈರಿಯ ವೈರಿ ಮಿತ್ರ' ಎಂಬ ಫಾರ್ಮುಲಾಗೂ ಕಾರಣವಾಗಿದೆ. ಬೆಳಗಾವಿ ಪಕ್ಷೇತರನ ಜಯಭೇರಿಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳ ಒಂದು ಬಣ ಮಹತ್ವದ ಪಾತ್ರ ವಹಿಸಿದೆ ಎಂಬುದು ಗಮನಾರ್ಹ. ಐದು ದ್ವಿ–ಸದಸ್ಯ ಕ್ಷೇತ್ರಗಳಲ್ಲಿ ಹೆಚ್ಚಿನ ಕಡೆ ಕಾಂಗ್ರೆಸ್–ಬಿಜೆಪಿ ಎರಡೂ ಒಂದೇ ಅಭ್ಯರ್ಥಿ ಹಾಕಿದ 'ರಕ್ಷಣಾ ಆಟ'ದ ಹಿಂದೆ ಇದ್ದಿದ್ದೂ ಇದೇ ಅಂಶ. ಮೂರೂ ಪಕ್ಷಗಳಲ್ಲಿ ಗೆದ್ದವರು ಅದೇ ಶಿಕ್ಷಣ, ರೀಯಲ್ ಎಸ್ಟೇಟ್, ಮತ್ತು ಕೈಗಾರಿಕಾ ಉದ್ಯಮಿಗಳು ಅಥವಾ ಅವರ ಪ್ರತಿನಿಧಿಗಳು. ಪಕ್ಷಗಳ ನೀತಿ, ಸಿದ್ಧಾಂತಗಳಿಗಿಂತ ಈ ವ್ಯಕ್ತಿಗಳ, ಶಕ್ತಿಗಳ ಹಿತಾಸಕ್ತಿಗಳೇ ಮುಖ್ಯವಾಗಿವೆ. ಪರಿಷತ್ತು ಇರುವುದು ವಿವಿಧ ಕ್ಷೇತ್ರಗಳ ಪರಿಣತರ, ಅನುಭವಿಗಳ, ಮೇಧಾವಿಗಳ, ಹಿರಿಯರ ಮೌಲಿಕ ಸಲಹೆಗಾಗಿ ಎಂಬ ಸಂವಿಧಾನದ ಸದಾಶಯ, ಈ ಬಾರಿಯ ಚುನಾಯಿತರ ಹಿನ್ನೆಲೆ ನೋಡಿದರೆ ಕೈಗೂಡಲಾರದ್ದು, ಆದ್ದರಿಂದ ಪರಿಷತ್ತು ಮುಂದುವರೆಸುವುದು ಅರ್ಥಹೀನ ಎಂದನಿಸುತ್ತದೆ.

ಇದರರ್ಥ ರಾಜ್ಯದ ರಾಜಕೀಯದಲ್ಲಿ ಈ ಫಲಿತಾಂಶಕ್ಕೆ ಮಹತ್ವವಿಲ್ಲ, ಅದರ ಪರಿಣಾಮವಿಲ್ಲ ಎಂದಲ್ಲ. ವಿಧಾನ ಪರಿಷತ್ತಿನಲ್ಲಿ ಪಕ್ಷಗಳ ಬಲಾಬಲ ಗನಾರ್ಹವಾಗಿ ಬದಲಾಗದ್ದರಿಂದ, ಮತ್ತು ನಿಕಟ ಭವಿಷ್ಯದಲ್ಲಿ ಬದಲಾಗುವ ಸಾಧ್ಯತೆ ಇಲ್ಲದ್ದರಿಂದ ಕಾಂಗ್ರೆಸ್ ಸರಕಾರ ವಿರೋ ಧ ಪಕ್ಷಗಳನ್ನು ನಿರ್ಲಕ್ಷಿಸುವಂತಿಲ್ಲ. ಕಾಂಗ್ರೆಸ್ ಒಳಗಿನ ಹಗ್ಗ ಜಗ್ಗಾಟದಲ್ಲಿಯೂ ಸಿದ್ದರಾಮಯ್ಯನವರಿಗೆ ತಾತ್ಕಾಲಿಕವಾದರೂ ವಿರಾಮ ದೊರಕಿದೆ. ಮುಂಬರುವ ಪಂಚಾಯತ್ ಚುನಾವಣೆಗಳಲ್ಲಿ ಯಾವ ಪಕ್ಷವೂ (ಪಕ್ಷದ ಯಾವ ಬಣವೂ!) ಭಾರೀ ಆತ್ಮವಿಶ್ವಾಸ ಅಥವಾ ಭರವಸೆಯಿಂದ ಬೀಗುತ್ತಾ ಜನರ ಬಳಿಗೆ ಹೋಗುವಂತಿಲ್ಲ. ಅಷ್ಟರ ಮಟ್ಟಿಗೆ ಈ ಫಲಿತಾಂಶ ಅರ್ಥಪೂರ್ಣವೇ!

60 ವರ್ಷಗಳ ಹಿಂದೆ

ರಾಜ್ಯೋತ್ಸವ ವಿಶೇಷಾಂಕದಲ್ಲಿ 1956ರ ಜನಶಕ್ತಿ ರಾಜ್ಯೋತ್ಸವ ವಿಶೇಷಾಂಕದ ಲೇಖನಗಳನ್ನು ಹಾಕಿದೆವು. ಅದಕ್ಕಾಗಿ 1956ರ ಜನಶಕ್ತಿ ನೋಡುತ್ತಿದ್ದಾಗ ಪ್ರತಿವಾರ 60 ವರ್ಷಗಳ ಹಿಂದಿನ 'ಜನಶಕ್ತಿ'ಯ ನೆನಪು ಮಾಡಿಕೊಳ್ಳಬಾರದೇಕೆ ಎಂದು ಹೊಳೆಯಿತು. ಈ ವಾರದಿಂದ ಅದು ನಿಮ್ಮ ಮುಂದಿದೆ.

ಹಾಗೆ ನೋಡಿದಾಗ ಗಮನ ಸೆಳೆದದ್ದು 'ಕಾರ್ಪೊರೇಶನ್ ಚುನಾವಣೆ ಮುಂದೆ ಹಾಕಿರುವುದು ಕಾನೂನು ಬದ್ಧವಲ್ಲ! ಹೈಕೋರ್ಟಿನಲ್ಲಿ ರಿಟ್ ಅರ್ಜಿ' ಎಂಬತಲೆಬರಹ. 'ಕಾಂಗ್ರೆಸ್‌ತನ್ನ ಒಳಜಗಳಗಳನ್ನು ಪರಿಹರಿಸಿಕೊಳ್ಳಲು ಈ ಕುತಂತ್ರವನ್ನು ನಡೆಸಿರುವುದಾಗಿ' ಮತ್ತು 'ಸರಕಾರದ ಆಜ್ಞೆಯಲ್ಲಿ ಕ್ಷೇತ್ರಗಳ ಪುನರ್ವಿಂಗಡಣೆ ಆಗಬೇಕಾಗಿರುವುದರಿಂದ ಸಮರ್ಪಕ ಕಾರಣವಲ್ಲ' ಎಂದು ಅರ್ಜಿದಾರರು ತಿಳಿಸಿದ್ದಾರೆ ಎಂದು ವರದಿ ಹೇಳುತ್ತದೆ. ಕಾಂಗ್ರೆಸು, ಅದರ ಒಳಜಗಳಗಳು, ಅ–ಪ್ರಜಾಸತ್ತಾತ್ಮಕ ಬುದ್ಧಿ, ಅದಕ್ಕೆ ಕಮ್ಯುನಿಸ್ಟ್ ಪಕ್ಷದ ಪ್ರತಿರೋಧ–ಎಲ್ಲಾ 60 ವರ್ಷಗಳಷ್ಟು ಹಳೆಯದು! ಅರ್ಜಿದಾರರು ಯಾರು ಎಂದಿರಾ? (ಅವಿಭಜಿತ) ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಗಳಾದ ಕಾ. ಸೂರ್ಯನಾರಾಯಣರಾವ್. ಇಡೀ ವರದಿ ಜನಶಕ್ತಿ ವೆಬ್ ಸೈಟಿನಲ್ಲಿದೆ. ಓದಿ.

ಇದಲ್ಲದೆ ಈ ಸಂಚಿಕೆಗಳಲ್ಲಿ ಕೆ.ಜಿ.ಎಫ್. ಗಣಿರಾಷ್ಟ್ರೀಕರಣ, ಮದ್ರಾಸು ಪ್ರಾಂತ್ಯದ ಸರಕಾರಿ ನೌಕರರ ವೇತನವನ್ನು ಇಡೀ ರಾಜ್ಯದ ನೌಕರರಿಗೆ ಜಾರಿ ಮಾಡಬೇಕೆಂಬ ಒತಾಯ, 1957 ಚುನಾವಣೆಗೆ ತಯಾರಿ, ಜೀವ ವಿಮಾ ನೌಕರರ ಮುಷ್ಕರ, ಚೌ ಎನ್ ಲಾಯ್ ಭಾರತ ಭೇಟಿ, ಈಜಿಪ್ಟ್ ಮೇಲೆ ಬ್ರಿಟಿಶ್–ಫ್ರೆಂಚ್ ದಾಳಿ – ಇತ್ಯಾದಿ ಆಸಕ್ತಿಕಾರಕ ವರದಿಗಳೂ ಇವೆ.

ಜನಶಕ್ತಿ ವೆಬ್ ಸೈಟು **(janashakthi.co.in)** ಆರಂಭವಾಗಿದೆ. ಅದರಲ್ಲಿಏನಿದೆ? ವೆಬ್ ಸೈಟ್‌ವಾರಕ್ಕೊಮ್ಮೆ ಬರುವ ಜನಶಕ್ತಿಯ ಪ್ರಿಂಟ್ ಆವೃತ್ತಿಯ ಬರಹಗಳನ್ನಂತೂ ನೆಟ್‌ನಲ್ಲಿ ಸಿಗುವಂತೆ ಮಾಡುತ್ತದೆ. ಎರಡು ಪ್ರಿಂಟ್ ಆವೃತ್ತಿಗಳ ನಡುವೆ ಪ್ರಮುಖ ವಿದ್ಯಮಾನಗಳಿಗೂ ಸ್ಪಂದಿಸುತ್ತದೆ. ಪ್ರಮುಖ ಸುದ್ದಿ ಮಾಹಿತಿಗಳನ್ನು ಕೊಡುತ್ತದೆ. ಹಾಗೆನೇ ನಮಗೆ ಬರುವ ಸುದ್ದಿ, ಮಾಹಿತಿ, ಲೇಖನ ಎಲ್ಲವನ್ನೂ ನಮ್ಮ 16 ಪುಟಗಳ ಮಿತಿಯಲ್ಲಿ ಕೊಡಲು ಸಾಧ್ಯವಾಗುತ್ತಿಲ್ಲ. ವಿಶೇಷ ಸಂಚಿಕೆಯಿಂದಾಗಿ ಮತ್ತು ಅಂಚೆಯ ತಾಂತ್ರಿಕ ಕಾರಣಗಳಿಂದ ಒಂದು ಸಂಚಿಕೆ ತಾರದೆನೂ ಬರಹಗಳು ಪ್ರಕಟವಾಗದೆ ಉಳಿದಿವೆ. ಅಂತಹವನ್ನು ವೆಬ್ ಸೈಟಿಗೆ ಹಾಕಲು ಆರಂಭಿಸಿದ್ದೇವೆ. ಕೆಲವನ್ನು ಚುಟುಕಾಗಿ ಪ್ರಿಂಟ್ ಆವೃತ್ತಿಯಲ್ಲಿ ಹಾಕಿ ಪೂರ್ಣ ಬರಹವನ್ನು ವೆಬ್ ಸೈಟಿನಲ್ಲಿ ಹಾಕುತ್ತೇವೆ. ಇವುಗಳಲ್ಲಿ ಹಲವು ಜನಶಕ್ತಿ ಫೇಸ್ ಬುಕ್ ಪುಟದಲ್ಲೂ ಪ್ರಕಟವಾಗುತ್ತವೆ. ಇಂತಹವನ್ನು ಈ ಸಂಚಿಕೆಯಿಂದ ಆರಂಭಿಸಿ ಪತ್ರಿಕೆಯಲ್ಲೂ ನಮೂದಿಸುತ್ತೇವೆ. ಇದು

ಜನಶಕ್ತಿ
ಕನ್ನಡ ವಾರಪತ್ರಿಕೆ

janashakthi.co.in

ಜನಶಕ್ತಿ ವೆಬ್ ಸೈಟಿನಲ್ಲಿ ಏನಿದೆ?

ನಮ್ಮಓದುಗರಿಗೆಇನ್ನೂ ಹೆಚ್ಚಿನ ಸಕಾಲಿಕ ಸುದ್ದಿ, ವರದಿ, ಲೇಖನಗಳನ್ನು ಒದಗಿಸಲು ಸಹಾಯ ಮಾಡುತ್ತದೆ ಮತ್ತು ಓದುಗರ ವಲಯವನ್ನು ವಿಸ್ತರಿಸುತ್ತದೆ.

ಈ ವಾರ ವೆಬ್ ಸೈಟಿನಲ್ಲಿ ಹಾಕಿರುವ ಬರಹಗಳು:

* ಚಂಡೀಗಡ ವಿಮಾನ ನಿಲ್ದಾಣಕ್ಕೆ ಭಗತ್ ಸಿಂಗ್ ಹೆಸರು ಕೈಬಿಡುವ ಸರಕಾರದ ನಿರ್ಣಯದ ವಿರುದ್ಧ ಬೃಂದಾಕಾರಟ್ ಲೇಖನ;
* ಸರಕಾರದಿಂದ ಒಳ್ಳೆಯ ದಿನ ಕಿತ್ತುಕೊಳ್ಳಬೇಕಾಗಿದೆ : ಸೀತಾರಾಂ ಯೆಚುರಿ ಲೇಖನ;
* ದಕ್ಷಿಣ ಕನ್ನಡದ ಪ್ರಥಮ ಸಹಕಾರಿ ಆಸ್ಪತ್ರೆ ಆರಂಭ; ಎಸ್.ಎಫ್.ಐ. 45 ವಾರ್ಷಿಕ ಆಚರಣೆ; ಕುಂದಾಪುರ ನಿವೇಶನ ರಹಿತರ ಸಮಾವೇಶಗಳ ಬಗ್ಗೆ ವಿವರವಾದ ವರದಿ;

ಒಡನಾಡಿಯೊಂದಿಗಿನ ಒಡನಾಟ......... ಪುಟ 2 ರಿಂದ

ಸಂಘಟನೆಯನ್ನು ವಿಸ್ತರಿಸುವಲ್ಲಿ, ಸಂಘಟನಾ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಈ ತಂಡದ ಕೆಲಸ (ಹಾಸ್ಟೆಲ್, ಐ.ಟಿ.ಐ., ಹೈಸ್ಕೂಲ್, ವಿದ್ಯಾರ್ಥಿನಿಯರ ಸಮಾವೇಶಗಳು ಹಾಗೂ ಹೋರಾಟಗಳು, ಗುಲಬರ್ಗಾ ವಿಶ್ವವಿದ್ಯಾಲಯ ಕೇಂದ್ರಕ್ಕಾಗಿ, ಇತ್ಯಾದಿ) ಗಮನಾರ್ಹ. ಸಾಮೂಹಿಕ ನಾಯಕತ್ವ ರೂಪಿಸಲು, ಬೆಂಬಲಿಸಲು ಅಂದಿನಿಂದಲೂ ಪ್ರಸನ್ನರವರು ನೀಡುತ್ತಿದ್ದ ಒತ್ತು ಪ್ರಶಂಸನೀಯ. ಸಂಘಟನೆಯ ಅಗತ್ಯಗಳಿಗೆ ಅನುಗುಣವಾಗಿ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳುತ್ತಿದ್ದೆವು. ಉದಾ: ಪ್ರತಿ ಜಿಲ್ಲಾ ಸಮಿತಿ ಸಭೆಗಳಲ್ಲಿಯೂ ಸೈದ್ಧಾಂತಿಕ ತರಗತಿಗಳು ಕಡ್ಡಾಯ. ಅದನ್ನು ಪದಾಧಿಕಾರಿಗಳು ಸರತಿ ಸುತ್ತಿನಂತೆ ಮಾಡಬೇಕು. ಹಾಗೆಯೇ ಕಾಲೇಜಿನಲ್ಲಿ ಸದಸ್ಯತ್ವ ಹೆಚ್ಚಾದಾಗ ಕ್ಲಾಸ್-ಸೆಕ್ಷನ್‌ವಾರು ಸಮಿತಿಗಳ ರಚನೆ ಹೀಗೆ. ನಂತರ ಪ್ರಸನ್ನ ಕಾರ್ಮಿಕ ಸಂಘಟನೆಯ, ಪಕ್ಷದ ನಾಯಕನಾದಾಗಲೂ ಇಂತಹ ಪ್ರಯೋಗಗಳು ನಡೆಯುತ್ತಿದ್ದವು. ಇದು ಅವರ ವಿಶೇಷತೆ.

ಕಾರ್ಮಿಕ ಸಂಘಟನೆಯತ್ತ

ಬಳ್ಳಾರಿಯಲ್ಲಿ ನಿಧಾನಕ್ಕೆ ವಿದ್ಯಾರ್ಥಿ ರಂಗದಿಂದ ನಮ್ಮ ಚಟುವಟಿಕೆಗಳು ಪ್ರದೇಶ ಆಧರಿಸಿ ಜನತೆಯ ನಿವಾಸಗಳ ಕಡೆಗೆ ವಿಸ್ತರಿಸಿತು. ಯುವಜನ ಸಂಘಟನೆಯಲ್ಲಿ ಒಬ್ಬ ಪದಾಧಿಕಾರಿಯಾಗಿದ್ದರೂ ಪ್ರಧಾನವಾಗಿ ಕಾಂ. ಪ್ರಸನ್ನ ವಿದ್ಯಾರ್ಥಿ ರಂಗದಿಂದ ಕಾರ್ಮಿಕರ ಸಂಘಟನೆಯತ್ತ ಗಮನಹರಿಸ ತೊಡಗಿದರು. ಕಾರ್ಮಿಕರ ವರ್ಗವನ್ನು ಸಂಘಟಿಸುವುದು ಅತೀ ಮಹತ್ವದ್ದೆಂದು ಮನಗಂಡ ಕಾಂ. ಪ್ರಸನ್ನರವರು ಆರಂಭದಲ್ಲಿ ಶಾಪ್ಸ್ ಅಂಡ್ ಎಸ್ಟಾಬ್ಲಿಷ್ ವರ್ಕರ್ಸ್ ಯೂನಿಯನ್, ಹಮಾಲಿಗಳ ಸಂಘ, ಹೀಗೆ ಬಳ್ಳಾರಿ ಪ್ರದೇಶದಲ್ಲಿ ವಿವಿಧ ಕಾರ್ಮಿಕರ ಸಂಘಟನೆಗಳತ್ತ ಗಮನ ಕೇಂದ್ರಕರಿಸಿದರು. ಸಿಐಟಿಯುವಿನ ಬೆಳವಣಿಗೆಗೆ ಗಮನ ನೀಡಿದರು. ಇಂತಹ ಪ್ರಯತ್ನಗಳು ಬೇರೆ ತಾಲೂಕಿನಲ್ಲಿ ನಡೆಯ ತೊಡಗಿದ್ದವು. ಪ್ರಾಂತ ರೈತ ಸಂಘವೂ ಹರಪನಹಳ್ಳಿ, ಹಡಗಲಿ, ಹಗರಿಬೊಮ್ಮನಹಳ್ಳಿ ತಾಲೂಕುಗಳಲ್ಲಿ ಬೆಳೆಯ ತೊಡಗಿತ್ತು. ಜಿಲ್ಲೆಯ ಒಟ್ಟು ಪ್ರಜಾಸತ್ತಾತ್ಮಕ ಚಳುವಳಿಯ ಬೆಳವಣಿಗೆಗೆ ಕಾರ್ಮಿಕ ವರ್ಗದ ನಡುವಿನ ಕೆಲಸ ಸಹಕಾರಿಯಾಯಿತು. ಪಕ್ಷದ ಪ್ರಭಾವ ವಿಸ್ತರಿಸತೊಡಗಿತು. ಇದು ಪಕ್ಷದ ವರ್ಗ ಸಂಯೋಜನೆಯಲ್ಲಿಯೂ ಬದಲಾವಣೆ ತಂದಿತಲ್ಲದೇ ಕೇವಲ ವಿದ್ಯಾರ್ಥಿ ಯುವಜನ ಹಾಗೂ ಮಧ್ಯಮ ವರ್ಗದ ನಡುವೆ ಮಾತ್ರ ಸೀಮಿತ ವರ್ಗದ ಪಕ್ಷ ದುಡಿಯುವ ವರ್ಗದ ಪ್ರವೇಶದಿಂದ ಹೊಸ ಚೈತನ್ಯ ಪಡೆಯಿತು. ಈ ಪ್ರಕ್ರಿಯೆಯ ಸಂದರ್ಭದಲ್ಲಿಯೇ ಕಾಂ. ಪ್ರಸನ್ನ ರವರು ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿ ಜವಾಬ್ದಾರಿ ವಹಿಸಿಕೊಳ್ಳಬೇಕಾಯಿತು. ನಮ್ಮ ನೆಲೆ ಬಲ ಆಧರಿಸಿ ಪಕ್ಷವು ರಾಜಕೀಯವಾಗಿ ಮಧ್ಯಪ್ರವೇಶಿಸುವುದಕ್ಕೆ ಸಾಧ್ಯವಾಯಿತು. ಬಹುತೇಕ ಈ ಅವಧಿಯಲ್ಲೇ ಹೊಸಪೇಟೆಯಲ್ಲಿ ಸಕ್ರಿಯವಾಗಿದ್ದ ಕಾಂ.ಯು.ಬಸವರಾಜ್ ಬಳ್ಳಾರಿ ಟೀಮನ್ನು ಸೇರಿಕೊಂಡರು.

ವಿಶೇಷವಾಗಿ ಬಳ್ಳಾರಿ ನಗರದಲ್ಲಿ ಆಗೆಲ್ಲಾ ರಾಜಕೀಯವಾಗಿ ಬಿಗಿ ಹಿಡಿತವಿದ್ದದ್ದು ಅಂದಿನ ರಾಜ್ಯ ಸರಕಾರದ ಮಂತ್ರಿ ಮುಂಡ್ಲೂರು ರಾಮಪ್ಪನವರ ಕೈಯಲ್ಲಿ, ಬಳಿಕ ಮುಂಡ್ಲೂರು ದಿವಾಕರ್ ಅದನ್ನು ವಹಿಸಿಕೊಂಡಿದ್ದರು. ಅವರು ಬಳ್ಳಾರಿಯಲ್ಲಿ ಜನರ ನಡುವೆ ಯಾರೂ ರಾಜಕೀಯವಾಗಿ-ಸಂಘಟನಾತ್ಮಕವಾಗಿ ಪ್ರವೇಶಿಸದಂತೆ, ಪ್ರಶ್ನಿಸದಂತೆ ಬೇರಾವ ಶಕ್ತಿಗಳೂ ಇರಬಾರದೆಂದು ಕ್ರಿಮಿನಲ್ ಗೂಂಡಾಗಿರಿ ಮತ್ತು ಸರಕಾರಿ ಆಡಳಿತ ಮೂಲಕ ನಿಯಂತ್ರಿಸುತ್ತಿದ್ದರು. ಇದರಿಂದ ಬಳ್ಳಾರಿ ನಗರದ ಜನ ಬೇಸತ್ತು ಹೋಗಿದ್ದರೂ ಎದುರಿಸುವ ಶಕ್ತಿ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಜನರ ಪ್ರಶ್ನೆಗಳನ್ನೆತ್ತಿ ಹೋರಾಡುತ್ತಿದ್ದ ನಮ್ಮ ಮೇಲೆ ದಾಳಿ ಆರಂಭಿಸಿದ್ದರು. ಇಂತಹ ಸಂದರ್ಭದಲ್ಲಿ ರಾಜಕೀಯವಾಗಿ, ಸಂಘಟನಾತ್ಮಕವಾಗಿ ಸಿಪಿಐ (ಎಂ) ಪಕ್ಷ ಹೋರಾಟ ನಡೆಸುವಲ್ಲಿ ಕಾಂ. ಪ್ರಸನ್ನರವರು ವಹಿಸಿದ ಮುತುವರ್ಜಿ, ಮುಂಚೂಣಿ ಪಾತ್ರವೇ ಪ್ರಧಾನವಾದುದು. ಹಲವು ಬಾರಿ ಕೊಲೆ ಬೆದರಿಕೆಗಳು, ರೌಡಿಗಳ ಧಾಳಿ, ಪೊಲೀಸರ ಮೂಲಕ ದಮನಿಸುವ ಪ್ರಯತ್ನಗಳು ನಡೆದ ಬಳ್ಳಾರಿ ಸ್ಟೀಲ್ ಅಲಾಯ್ಸ್ ಕಾರ್ಮಿಕರ ಹೋರಾಟ ಸಂದರ್ಭದಲ್ಲಿ ಭೂಗತವಾಗಿಯೇ ಹೋರಾಟ ಮುಂದುವರೆಸಬೇಕಾಯಿತು. ಇವೆಲ್ಲವುಗಳಿಂದ ಪಕ್ಷದ ಪ್ರತಿಷ್ಠೆ, ಪ್ರಭಾವ ಬೆಳೆಯಿತು. ಮುಂದೆಯೂ ಗಣಿಗಳ್ಳರಾದ ರೆಡ್ಡಿಗಳ ಗಣಿ ಮಾಫಿಯಾ ಗ್ಯಾಂಗ್‌ನ್ನು ಎದುರಿಸುವಲ್ಲಿ ಪ್ರಸನ್ನರ ಮುತುವರ್ಜಿ ಉಲ್ಲೇಖನೀಯ.

ರಾಜ್ಯ ನಾಯಕತ್ವಕ್ಕೆ

ಹೀಗೆ ಸಕ್ರಿಯವಾಗಿ ತೊಡಗಿದ್ದ ಕಾಂ. ಪ್ರಸನ್ನರವರು ಪಕ್ಷದ ರಾಜ್ಯ ಸಮಿತಿಯ ತೀರ್ಮಾನದಂತೆ ರಾಜ್ಯ ಕೇಂದ್ರ ಬೆಂಗಳೂರಿಗೆ ಬರಬೇಕಾಯಿತು. ವೈಯಕ್ತಿಕವಾಗಿ ಅವರಿಗೆ ಇಷ್ಟವಿರದಿದ್ದರೂ ಚಳುವಳಿಯ ಅಗತ್ಯಗಳನ್ನು ಮನಗಾಣಿಸಿ ಕರೆದು ತರಲಾಯಿತು. ಜಿಲ್ಲಾ ಮಟ್ಟದ ಅನುಭವದಿಂದ ರಾಜ್ಯ ಮಟ್ಟದ ಅನುಭವ ಪಡೆಯಲು ಇದು ಸಹಾಯಕವಾಯಿತು. ಕಾಂ.ಪ್ರಸನ್ನರವರು ರಾಜ್ಯ ಸಮಿತಿ ಸದಸ್ಯರಾಗಿದ್ದವರು ಮುಂದೆ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿದರು. ಈ ಮೂಲಕ ಹಿರಿಯರ ಮಾರ್ಗದರ್ಶನದಲ್ಲಿ ಪಕ್ಷದ ರಾಜ್ಯ ಕೇಂದ್ರದ ಭಾಗವಾಗಿ, ನಾವು ಪುನಃ ಒಡನಾಡಿಗಳಾಗಿ ಕೆಲಸ ಮಾಡುವ ಅವಕಾಶ ಲಭ್ಯವಾಯಿತು. ನಂತರ ದಿನಗಳಲ್ಲಿ ಅವರು ಸಿಐಟಿಯುವಿನ ಜವಾಬ್ದಾರಿಗಳನ್ನು ಹೊರಬೇಕಾಯಿತು. ಹಿರಿಯ ಚೇತನಗಳಾದ ಕಾಂ.ಪಿ. ರಾಮಚಂದ್ರರಾವ್, ಕಾಂ. ಸೂರಿ, ಕಾಂ.ಎನ್.ಕೆ.ಉಪಾಧ್ಯಾಯ. ಕಾಂ.ಸಿ ನಂಜುಂಡಪ್ಪ ನವರ ಅಗಲಿಕೆ ಪಕ್ಷದಲ್ಲೂ, ಕಾರ್ಮಿಕ ಚಳುವಳಿಯಲ್ಲಿ ಅಘಾತಕರವಾಗಿ ಒದಗಿ ಬಂದಾಗ ಹಿರಿಯರಾದ ಕಾಂ. ವಿಜೆಕೆ ನಾಯರ್ ಅವರಿಗೂ, ಉಳಿದಂತೆ ಯುವ ಕಾರ್ಯಕರ್ತರ ಹೆಗಲಿಗೆ ಟ್ರೇಡ್ ಯೂನಿಯನ್ ಹೊಣೆಗಳು ಬಿದ್ದವು. ವಿವಿಧ ಜವಾಬ್ದಾರಿ ವಹಿಸಿಕೊಂಡತೆ ಕಾಂ. ಪ್ರಸನ್ನ ಆ ಸ್ಥಾನಕ್ಕೆ ಅಗತ್ಯವಾದ ಅಧ್ಯಯನ, ಕಠಿಣ ಕಾರ್ಯ ವಿಧಾನಗಳ ಮೂಲಕ ಸಾಮರ್ಥ್ಯವನ್ನು ಮೇಲ್ ಮಟ್ಟಕ್ಕೆ ಎತ್ತರಿಸಿಕೊಂಡರು. ಪ್ರಾಯೋಗಿಕ ಅನುಭವಗಳ ಮೂಲಕ ಮಾರ್ಕ್ಸ್‌ವಾದಿ ಲೆನಿನ್‌ವಾದಿ ತಿಳುವಳಿಕೆಯನ್ನು ಮತ್ತಷ್ಟು ಸ್ಪಷ್ಟಗೊಳಿಸಕೊಂಡು ಬೆಳೆದರು. ಹೀಗೆ ಹತ್ತಾರು ಸಣ್ಣ ಮತ್ತು ಮೈಕೋ, ಐಟಿಸಿ, ಹಿಂಡಾಲ್ಕೋ, ಪೇಪರ್ ಮಿಲ್‌ನಂತಹ ಬೃಹತ್ ಕಾರ್ಮಿಕ ಸಂಘಗಳಿಗೆ, ರಕ್ಷಣೆ, ಎಲೆಕ್ಟ್ರಾನಿಕ್ಸ್, ಸಾರಿಗೆ ಒಳಗೊಂಡು ವಿವಿಧ ಸಾರ್ವಜನಿಕ ಉದ್ಯಮಗಳ ರಂಗದಲ್ಲಿ ನೇತೃತ್ವ ಕೊಡಬೇಕಾಯಿತು. ರಾಜ್ಯದ, ರಾಷ್ಟದ ಉದ್ದಿಮೆ ಕ್ಷೇತ್ರಗಳನ್ನು ಪ್ರವೇಶಿಸಬೇಕಾಯಿತು. ಅದು ಬೀಡಿ ಕಾರ್ಮಿಕರೇ ಇರಲಿ, ದಿನಗೂಲಿಗಳಾಗಿರಲಿ ಅಥವಾ ವಿಮಾನ ತಯಾರಿಕಾ ನೌಕರರಿರಲಿ ಸದಾ ಕಾರ್ಮಿಕ ವರ್ಗದ ಹಿತ ಕಾಯಲು, ಕಾರ್ಮಿಕ ವರ್ಗದ ಕ್ರಾಂತಿಕಾರೀ ನೈತಿಕತೆಯನ್ನು ಎತ್ತಿ ಹಿಡಿಯಲು ಸದಾ ಬದ್ಧವಾಗಿದ್ದುದು ಸ್ಪೂರ್ತಿದಾಯಕ. ಇಂತಹ ಕೆಲ ವಿಶೇಷಗಳು, ಜನತೆಗಾಗಿ ಪೂರ್ಣ ಪ್ರಾಮಾಣಿಕವಾಗಿ ಸಮರ್ಪಿಸಿ ಕೊಂಡ ರೀತಿ ಅನುಕರಣೀಯ. ಆರಂಭದ ದಿನಗಳಿಂದಲೂ ನಿಸ್ವಾರ್ಥತೆ, ತ್ಯಾಗ ಮನೋಭಾವ, ಕಠಿಣ ಪರಿಶ್ರಮದ ಗುಣವನ್ನು ಸತತವಾಗಿ ಕಾಣುತ್ತಲೇ ಬಂದಿದ್ದೇನೆ. ನಿಷ್ಠುರ ಸ್ವಭಾವ ಹೊಂದಿದ್ದ ಪ್ರಸನ್ನ ಕೆಲ ವಿಷಯಗಳಲ್ಲಿ ತೀವ್ರ ಭಿನ್ನಾಭಿಪ್ರಾಯಗಳನ್ನು ವ್ಯಕ್ತ ಪಡಿಸಿದರೂ ವ್ಯಕ್ತಿಗತ ಸಂಬಂಧಗಳಿಗೆ ಅದೆಂದೂ ಚ್ಯುತಿ ತರಲಿಲ್ಲ. ಮಾತ್ರವಲ್ಲ, ಅದನ್ನು ಹಾಗೆ ಅರ್ಥೈಸಿ ಕೊಂಡದ್ದು ಇಲ್ಲ.

ಸಂಕಷ್ಟಮಯ ಜೀವನ

ಕಾಂ. ಪ್ರಸನ್ನ ಬೆಳೆದು ಬಂದ ಕುಟುಂಬದ ಹಿನ್ನೆಲೆಯೂ ತೀರಾ ಸಂಕಷ್ಟಮಯವೇ ಆಗಿದೆ. ಹುಟ್ಟಿದ್ದು ಸೆಪ್ಟಂಬರ್ 14, 1965 ರಲ್ಲಿ. ಕಾಂ. ಪ್ರಸನ್ನ ಇನ್ನೂ ತಾಯಿ ಶ್ರೀಮತಿ ಲಕ್ಷ್ಮಿ ದೇವಮ್ಮನವರ ಗರ್ಭದಲ್ಲಿ 5 ತಿಂಗಳ ಬೆಳೆವ ಭ್ರೂಣವಾಗಿರುವಾಗಲೇ ಅವರ ತಂದೆ ಕಂಡಕ್ಟರ್ ಆಗಿದ್ದ ಶ್ರೀರಾಮ್ ರವರು ಬಸ್ ನಿಲ್ದಾಣದ ಅಪಘಾತದಲ್ಲಿ ದುರಂತ ಮರಣವನ್ನು ಅಪ್ಪುತ್ತಾರೆ. ತೀರಾ ಸಾಧಾರಣ ಆರ್ಥಿಕ ಹಿನ್ನೆಲೆಯ ಈ ಕುಟುಂಬದಲ್ಲಿ ತಾಯಿಯ ಮೇಲೆಯೇ ಪೂರ್ಣ ಭಾರ. ಈ ತಾಯಿ ಹಸುಗೂಸು ಕಂಕುಳಲ್ಲಿ ಇಟ್ಟು-ಕೊಂಡೇ ಹೊಲಿಗೆ ಕೆಲಸ, ಹೂ ಕಟ್ಟಿ ಮಾರುವ ಕೆಲಸಗಳಿಂದ ಜೀವನ ನಿರ್ವಹಣೆ ಮಾಡುತ್ತಾಳೆ. ಮುಂದೆ ಪ್ರಸನ್ನ ಬಿ.ಕಾಂ. ವಿದ್ಯಾರ್ಥಿ ಯಾಗಿದ್ದಾಗ ಬಳ್ಳಾರಿಯ ಬದ್ರಿ ಅಂಡ್ ಕೋ ಚಾರ್ಟಡ್ ಅಕೌಂಟೆಂಟ್ ಆಗಿ ಪಾರ್ಟ ಟೈಂ ದುಡಿದು ಮನೆಗೆ ನೆರವಾಗುತ್ತಾರೆ. ಎಸ್.ಎಫ್.ಐ. ಮತ್ತಿತರ ಚಳುವಳಿಯಲ್ಲಿ ತೊಡಗುವಿಕೆ ಹೆಚ್ಚಾದಂತೆ ಅದೂ ಖೋತಾ. ಹೀಗಿದ್ದರೂ ಅವರ ಮನೆ ನಮಗೆ ನಮ್ಮದೇ ಮನೆ. ಹೇಗೆ ಇರಲಿ ಮಧ್ಯ ರಾತ್ರಿ ಕಳೆದು ಹೋದರೂ 'ಅಮ್ಮನ ಅಡಿಗೆ, ಮನೆಯ ಮಾಳಿಗೆಯಲ್ಲಿ ಕೌದಿ ಹಾಸಿಗೆ' ನಮ್ಮ ಪಾಲಿಗೆ ಕಾಯಂ.

ಹಾಗೆಯೇ ಪ್ರಸನ್ನನ ವೈಯಕ್ತಿಕ ಬದುಕಿನ ಕೆಲ ನಿರ್ಧಾರಗಳು ನನಗೆ ಚೇತೋಹಾರಿ ಶಾಕ್ ತಂದಿವೆ ಕೂಡ. ನಾವು ಈಗ ಮದುವೆ ಆಗಬಾರದು ಅದು ಚಳುವಳಿಗೆ ಅಡ್ಡಿಯಾಗಬಹುದು ಎಂದು ಯೋಚಿಸುತ್ತಿರುವಾಗಲೇ ದಿಢೀರನೇ ಮದುವೆ ನಿರ್ಧಾರ ಪ್ರಕಟಿಸಿ, ಸರಳ ಸಮಾರಂಭದಲ್ಲಿ ಪಾರ್ವತಿ ಮಾರಾ ರವರನ್ನು ಮದುವೆಯಾಗಿಯೇ ಬಿಟ್ಟ! ಮುಂದೆ ಕುಟುಂಬಕ್ಕಾಗಿ ಸಮಯ ನೀಡಿದ್ದು ಕಡಿಮೆ. ಆದಾಗ್ಯೂ ಅವರ ಜೀವನ ಸಂಗಾತಿಯೂ ಸಹ ಪ್ರಸನ್ನರನ್ನು ಸರಿಯಾಗಿ ಅರಿತು ಅವರ ಕೆಲಸ ಕಾರ್ಯಗಳಿಗೆ ಸಂಪೂರ್ಣ ನೆರವು ನೀಡುತ್ತಾ ಬಂದವರು. ಕುಟುಂಬದ ಇಡೀ ಹೊಣೆ ನಿರ್ವಹಿಸುತ್ತಾ ಬಂದವರು. ಅವರ ಇಬ್ಬರು ಮಕ್ಕಳು ರಾಜು ಮತ್ತು ರವಿ ಇಂಜನೀಯರಿಂಗ್ ಓದುತ್ತಿರುವ ಪ್ರತಿಭಾನ್ವಿತರು. ಇವರೆಲ್ಲರೂ ಪಕ್ಷದ ಬೆಳವಣಿಗೆ ಕಾಳಜಿಯಿಟ್ಟು ಹಲವು ರೀತಿಯಲ್ಲಿ ನೆರವಾದವರು.

ಕಠಿಣ ಶ್ರಮಜೀವಿ

ಕಾಂ. ಪ್ರಸನ್ನ ಕಠಿಣ ಶ್ರಮಜೀವಿ. ಹೊಸ ಹೊಸ ವಿಷಯಗಳನ್ನು ಅನ್ವೇಷಿಸುತ್ತಾ ಕಲಿಯುವ ಗುಣ ಹೊಂದಿದ್ದರು. ಬಿಕಾಂ ಆದ ಬಳಿಕ ಎಸ್.ಎಫ್.ಐ. ನಾಯಕರು ವಿದ್ಯಾಭ್ಯಾಸ ಮಾಡಬೇಕು, ಸಮೂಹದೊಂದಿಗೇ ಇರಬೇಕು ಎಂಬ ಹಿರಿಯರಾದ ವೈ. ಭೀಮಸೇನಾಚಾರ್ ರವರ ಸಲಹೆ ಹಿನ್ನೆಲೆಯಲ್ಲಿ ಕಾನೂನು ಪದವಿಗೆ ಬಳ್ಳಾರಿಯಲ್ಲಿ ನಾವು ಸೇರಿದೆವು. ಆಗ ಮುಗಿಸಲಾಗದಿದ್ದರೂ ನಂತರದಲ್ಲಿ ಅದನ್ನು ಪ್ರಸನ್ನ ಮುಗಿಸಿದರು. ಬಳಿಕ ಇತ್ತೀಚೆಗೆ ಎಲ್.ಎಲ್.ಎಂ. ಗೆ ಸೇರಿ ಅವರು ಅಗಲುವ ಕೇವಲ ಒಂದು ತಿಂಗಳ ಒಳಗೆ ಅಂತಿಮ ಪರೀಕ್ಷೆಯನ್ನೂ ಬರೆದರು. ಕಲಿಕೆ ಪ್ರಸನ್ನರಲ್ಲಿ ಸದಾ ಜೀವಂತ. ಕಾರ್ಮಿಕ ಪ್ರಶ್ನೆಗಳಿಗೆ ಉತ್ತರ ಹುಡುಕುವ, ಸಂಘಟನೆ ಮತ್ತು ಪಕ್ಷದ ದಸ್ತಾವೇಜುಗಳನ್ನು, ಮನವಿಪತ್ರಗಳನ್ನು ಸಿದ್ದಗೊಳಿಸುವ ಅಥವಾ ಪಕ್ಷದ ಕೆಲಸಗಳಿಗಾಗಿ ರಾತ್ರಿಯಿಡೀ ಓದುವ, ಬರೆಯುವ ಕೆಲಸದಲ್ಲಿ ತೊಡಗಿರುತ್ತಿದ್ದರು. ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯನಾಗಿ, ಸಿಐಟಿಯುವಿನ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಭಾರತ ಕಾರ್ಯದರ್ಶಿಗಳಲ್ಲೊಬ್ಬರಾಗಿ ರಾಜಕೀಯ, ಸಂಘಟನಾ ಹೊಣೆಗಳೂ ಅಧಿಕವಿದ್ದವು. ನಿರಂತರ ಪ್ರವಾಸಗಳು ಸಭೆಗಳು ಅವಿರತ. ಒಟ್ಟು ಎಲ್ಲಾ ಒತ್ತಡಗಳೂ ಅವರ ಆರೋಗ್ಯದ ಮೇಲೆ ಪರಿಣಾಮ ಬೀರಿರುವುದರಲ್ಲಿ ಅನುಮಾನವಿಲ್ಲ.

ಕಾಂ.ಪ್ರಸನ್ನ ಕಮ್ಯೂನಿಸ್ಟ್ ನೈತಿಕತೆಗೆ, ತತ್ವಗಳಿಗೆ ಬದ್ಧವಾಗಿದ್ದವರು. ಸ್ವತಃ ಅವಿರತ ಶ್ರಮಜೀವಿಯಾಗಿ, ಶ್ರಮಿಕ ವರ್ಗದ ವಿಮೋಚನೆಗೆ ಪೂರ್ಣ ತೊಡಗಿಸಿಕೊಂಡ ಸಮರ್ಪಣಾ ಮನೋಭಾವದ ಮುಖ್ಯವಾಗಿ ಮಾನವೀಯ ತೆಯ ಮಿಡಿತವಿದ್ದ, ತೀರಾ ಸರಳತೆ ಮತ್ತು ಪ್ರಾಮಾಣಿಕತೆಯ ಸ್ನೇಹಮಯಿ ವ್ಯಕ್ತಿತ್ವದ ನೈಜ ಕಮ್ಯೂನಿಸ್ಟ್ ಕಾಂ. ಪ್ರಸನ್ನಕುಮಾರವರು. ಕಾಂ. ಎಸ್.ಪಿ. ದುಡಿಯುವ ವರ್ಗದ ಐಕ್ಯತೆಗೆ ಶ್ರಮಿಸಿದವರು. ಕಾಂ.ಪ್ರಸನ್ನರವರ ಅವರ ಅಗಲಿಕೆ ಸಿಪಿಐ(ಎಂ) ಪಕ್ಷಕ್ಕೆ ಶ್ರಮಜೀವಿ ಬೆಳವಣಿಗೆ ಆದ ಅಪಾರ ನಷ್ಟ.

ಕಾಂ.ಪ್ರಸನ್ನರವರಿಗೆ, ಕಾಲಿಗೆ ಚಕ್ರ ಕಟ್ಟಿಕೊಂಡಿದ್ದೀರಾ ಎಂದು ವಿನೋದವಾಗಿ ಕೇಳಲಾಗುತ್ತಿತ್ತು. ಅನಾರೋಗ್ಯದ ನಡುವೆ ನಾಲ್ಕಾರು ಕೆಲಸದ ಯೋಜನೆ ಮಾಡಿದ್ದರು.ಶುದ್ಧ ಗಾಳಿಗಾಗಿ, ಜೀವದುಸಿರಿಗಾಗಿ ಬೆಳಗಿನ ಜಾವ ಅಡಿ ಇಡುತ್ತಾ ಸಾಗಿರುವಾಗಲೇ ಮಿಡಿವ ಹೃದಯ ನಿಂತು ನಿಶ್ಚಲವಾದುದು ದುರಂತ ಹಾಗೂ ಸಂಕೇತ. ಸದಾ ಓಡಾಡುತ್ತಾ, ಮಾತನಾಡುತ್ತಾ, ಸುಳಿದಾಡುತ್ತಿದ್ದ ಸಂಗಾತಿ ಪ್ರಸನ್ನ ಇನ್ನು ಇಲ್ಲ ಎಂಬುದನ್ನು ನನ್ನ ಮನಸ್ಸು ಒಪ್ಪುತ್ತಲೇ ಇಲ್ಲ. ಈತ ಸಾವಿನಲ್ಲೂ ಸಾಯದ ಸಂಗಾತಿಗಳ ಪರಂಪರೆಯಲ್ಲಿ ಬೆಳಗುವ ಒಂದು ನಕ್ಷತ್ರ.

ವೈಯಕ್ತಿಕ ಹಿತ ಗಣಿಸದೇ...

'ಸಾರ್, ನಾನೀಗ ನಿಮ್ಮ ಹಾರ್ಟ್ ಕ್ಲಬ್ ಮೆಂಬರ್.' ಹೀಗೆಂದು ದೂರವಾಣಿಯಲ್ಲಿ ಪ್ರಸನ್ನ ಹೇಳಿದಾಗ ನಾನೆಂದೆ.'ತಮಗೆ ಆದರದ ಸ್ವಾಗತ. ಆದರೆ ನಾನು ಇದೀಗ ಹೊಸ ಕ್ಲಬ್ ಮೆಂಬರ್. ನಿಮಗೆ ಸ್ವಾಗತವಿಲ್ಲ' ಎಂದು ನಗುತ್ತಲೇ ಹೇಳಿದೆ.

ಒಂದು ವಾರದ ಕೆಳಗೆ ನಾನು ತುರ್ತು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿದ್ದಾಗ ಐಸಿಯು ವಿನಲ್ಲಿ ಮಾತನಾಡಿಸಿ ಹೊದ ಪ್ರಸನ್ನ ರವರು ಮರುದಿನ ತೆರಳಿದ್ದು ಜಯದೇವ ಆಸ್ಪತ್ರೆಯ ಆವರಣದಲ್ಲಿನ ಡಯಾಬಿಟೀಸ್ ಆಸ್ಪತ್ರೆಗೆ. ಅಲ್ಲಿ ಹಿಂಭಾಗದ ಹೃದಯಕ್ಕೆ ಹೃದಯಾಘಾತವಾಗಿದ್ದರಿಂದ ಅದರ ಪಂಪಿಂಗ್ ಬಲ ಕುಸಿತವಾಗಿದೆಯೆಂದು ತಿಳಿದ ಬಳಿಕ ತಪಾಸಿಸಿದ ವೈದ್ಯರು ಔಷಧೋಪಚಾರಗಳ ಜೊತೆಗೆ ಒಂದು ಆಧುನಿಕ ಸಲಕರಣೆ ಅಳವಡಿಸಬೇಕೆಂದರು.

ಅದಕ್ಕಾಗಿ ಹಣ ಸಮಯ ಹೊಂದಿಸಿಕೊಳ್ಳುವ ತಯಾರಿಯಲ್ಲಿರುವಾಗಲೇ, ವಾಯು ವಿಹಾರದ ಸಂಧರ್ಭದಲ್ಲಿ ಹೃದಯ ಸ್ಥಂಬನವಾಗಿ ಬಿಟ್ಟಿದೆ. ಕೂಡಲೇ ಆ ಸಲಕರಣೆ ಅಳವಡಿಸಿಕೊಂಡಿದ್ದರೆ ಈ ದುರಂತ ತಪ್ಪುತ್ತಿತ್ತೇ ಎಂಬ ಪ್ರಶ್ನೆ ಕಾಡುತ್ತದೆ. ಈ ಸಲಕರಣೆಗೆ ಸುಮಾರು 6 ಲಕ್ಷ ರೂ ತಗುಲಬಹುದೆಂದು ನಾರಾಯಣ ಹೃದಯಾಲಯದ ವೈದ್ಯರು ಹೇಳಿದ್ದರು. ಇದನ್ನು ಅವರು ಕಾರ್ಮಿಕ ನಾಯಕರಾಗಿರುವ ಮೈಕ್ರೋ ಕಂಪನಿ ಆಡಳಿತ ವರ್ಗ ಭರಿಸುವುದಾಗಿ ತಿಳಿಸಿತು. ಆದರೆ ಇದನ್ನು ಪಡೆಯಬಾರದು, ಆಡಳಿತ ವರ್ಗದ ಹಂಗೇಕೆ ಎಂದು ಕಾಂ.ಪ್ರಸನ್ನ ನಿರಾಕರಿಸಿದ್ದರು. ಕಾಂ. ಬೈಯ್ಯರೆಡ್ಡಿಯವರು ಜಯದೇವ ಆಸ್ಪತ್ರೆಯ ಮುಖ್ಯಸ್ಥರೊಂದಿಗೆ ಭೇಟಿ ಮಾಡಿಸಿ ಮಾತನಾಡಿಯೂ ಆಗಿತ್ತು. ಕಾರ್ಮಿಕ ವರ್ಗವನ್ನು ನೆಚ್ಚಿ ಪರ್ಯಾಯ ನೆರವಿನ ಪ್ರಯತ್ನ ನಡೆದಿತ್ತು. ಆದರೆ..?

ಇಂತಹ ಸಂದರ್ಭದಲ್ಲಿಯೂ ವೈಯಕ್ತಿಕ ಹಿತ ಗಣಿಸದೇ ಕಾರ್ಮಿಕ ವರ್ಗದ ಹಿತ, ಬದ್ಧತೆ ಎತ್ತಿ ಹಿಡಿದ ಕಾಂ. ಪ್ರಸನ್ನ ನಿಮಗಿದೋ ನಿಜಕ್ಕೂ ಲಾಲ್ ಸಲಾಮ್!

ದಿಲ್‌ವಾಲೆ ಪ್ರದರ್ಶನ ತಡೆಗೆ ಡಿವೈಎಫ್ಐ ಪ್ರತಿಭಟನೆ:

ಖ್ಯಾತ ನಟ ಶಾರೂಕ್‌ಖಾನ್ ನಟಿಸಿರುವ ಅವರ ಇತ್ತೀಚಿನ ಚಿತ್ರ ದಿಲ್‌ವಾಲೇಯ ಪ್ರದರ್ಶನವನ್ನು ಮಂಗಳೂರಿನ ಮಲ್ಟಿಪೆಕ್ಸ್ ಸಿನಿಮಾ ಮಂದಿರಗಳಲ್ಲಿ ಭಜರಂಗದಳದ ಕಾರ್ಯಕರ್ತರು ನುಗ್ಗಿ ದಾಂದಲೆ ಮಾಡಿ ತಡೆ ಮಾಡಿದ್ದಾರೆ. ಶಾರೂಕ್‌ಖಾನ್ ಅವರು ಕೆಲವು ದಿನಗಳ ಹಿಂದೆ ನಟ ಅಮೀರ್‌ಖಾನ್ ಸೇರಿ ಕಲಾ ಜಗತ್ತಿನ ಅನೇಕರು ದೇಶದಲ್ಲಿ ಅಸಹಿಷ್ಣುತೆ ಬೆಳೆಯುತ್ತಿದೆ ಎಂಬುದಾಗಿ ಹೇಳಿದ ವಿಚಾರಗಳಿಗೆ ಸಹಮತ ವ್ಯಕ್ತಪಡಿಸಿದ್ದರು. ಅಸಹಿಷ್ಣುಗಳಾದ ಸಂಘಪರಿವಾರದ ಪುಂಡರು ಇದಕ್ಕಾಗಿ ಮಂಗಳೂರಿನಲ್ಲಿ ಶಾರೂಕ್‌ಖಾನ್‌ರ ದಿಲ್‌ವಾಲೇ ಚಿತ್ರದ ಪ್ರದರ್ಶನವನ್ನು ತಡೆಹಿಡಿದಿದ್ದಾರೆ ಅವರ ದಾಂದಲೆಗೆ ಮಣಿದ ಸಿನಿಮಾ ಹೌಸ್ ಮಾಲಿಕರು ಭೀತಿಗೊಂಡು ಮುಂದಿನ ದಿನಗಳಿಗೆ



ಪ್ರದರ್ಶನಗಳನ್ನೇ ರದ್ದುಗೊಳಿಸಿದ್ದರು.

ಚಿತ್ರ ಮಂದಿರಗಳಲ್ಲಿ ದಾಂದಲೆ ನಡೆಸಿದ ಭಜರಂಗದಳದ ಗೂಂಡಾಗಳ ಮೇಲೆ ಕಾನೂನುಕ್ರಮ ಕೈಗೊಳ್ಳಬೇಕೆಂದು ಮಂಗಳೂರಿನ ಸಾಮಾಜಿಕ ಕಾರ್ಯಕರ್ತೆ ವಿದ್ಯಾ ದಿನಕರ್ ಅವರು ಜಿಲ್ಲಾ ಪೋಲೀಸ್ ಕಮೀಷನರ್‌ರವರಿಗೆ ದೂರು ಸಲ್ಲಿಸಿದ್ದರು. ಇದನ್ನು ತಿಳಿದ ಕೆಲವು ಕಿಡಿಗೇಡಿಗಳು ಸಾಮಾಜಿಕ ಜಾಲತಾಣಗಳಲ್ಲಿ ವಿದ್ಯಾ ದಿನಕರ್ ಅವರನ್ನು ಅಶ್ಲೀಲವಾಗಿ ನಿಂದಿಸಿ ಬೆದರಿಕೆ ಒಡ್ಡಿದ್ದಾ-ರೆ.

ದಿಲ್‌ವಾಲೆ ಚಿತ್ರವನ್ನು ತಡೆಹಿಡಿದುದು ಹಾಗೂ ವಿದ್ಯಾ ದಿನಕರ್ ಅವರನ್ನು ಬೆದರಿಸಿದುದನ್ನು ಖಂಡಿಸಿ ಡಿಸೆಂಬರ್ 24 ರಂದು ಬಕ್ರೀದ್ ರಜಾದಿನವಾಗಿದ್ದರೂ ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿಯಿಂದ ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆದಿರುತ್ತದೆ. ಸಿನಿಮಾ ಮಂದಿರಕ್ಕೆ ರಕ್ಷಣೆ ಒದಗಿಸಿ ದಿಲ್‌ವಾಲೆ ಸಿನಿಮಾ ವೀಕ್ಷಿಸುವವರಿಗೆ ಪ್ರದರ್ಶನ ಅವಕಾಶ ಮಾಡಿಕೊಡಬೇಕೆಂದೂ ವಿದ್ಯಾ ದಿನಕರ್ ಅವರಿಗೆ ಬೆದರಿಕೆ ಒಡ್ಡಿದವರ ಮೇಲೆ ದೂರು ದಾಖಲಿಸಬೇಕೆಂದೂ ಪ್ರತಿಭಟನೆಯಲ್ಲಿ ಆಗ್ರಹಿಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಖ್ಯಾತ ವಿಚಾರವಾದಿ ನರೇಂದ್ರ ನಾಯಕ್ ಮಾತನಾಡಿದರು. ಸಮುದಾಯ ಸಂಘಟನೆಯ ಮೈಕೆಲ್ ಡಿಸೋಜ, ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಉಪಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಡಿಸೆಂಬರ್ 26 ರಂದು ಡಿವೈಎಫ್ಐ ಕಾರ್ಯಕರ್ತರು ಸಿನಿಮಾ ಮಂದಿರಗಳ ಮುಂದೆ ಪ್ರದರ್ಶನಕ್ಕೆ ಮುಂದಾದಾಗ, ಮಾಲಕರು ದಿಲ್‌ವಾಲೆ ಸಿನಿಮಾ ಪ್ರದರ್ಶಿಸಲು ಒಪ್ಪಿಕೊಂಡಿದ್ದು, ಮಾರನೇ ದಿನದಿಂದ ಪೋಲೀಸ್ ರಕ್ಷಣೆಯಲ್ಲಿ ಸಿನಿಮಾ ಪ್ರದರ್ಶನ ನಡೆಯುತ್ತಿದೆ. ಅಲ್ಲದೆ ವಿದ್ಯಾ ದಿನಕರ್ ಅವರನ್ನು ಬೆದರಿಸಿದ್ದ ಆರೋಪಿಗಳನ್ನು ಪೊಲೀಸರು ಗುರುತಿಸಿ ಅಪರಾಧ ಪ್ರಕರಣ ದಾಖಲಿಸಿರುತ್ತಾರೆ. ಡಿವೈಎಫ್ಐ ಪ್ರತಿಭಟನೆಗಳು ಸಂಘ ಪರಿವಾರದ ಗೂಂಡಾಗಿರಿಗೆ ಸೂಕ್ತ ಉತ್ತರ ನೀಡಿವೆ. ಹಾಗಿದ್ದೂ ಪೊಲೀಸು ಇಲಾಖೆ ಕೇಡಿಗಳನ್ನು ಹತೋಟಿಗೆ ತರಲು ಅಳುಕುವುದು ಕಂಡು ಬರುತ್ತಿವೆ.



ಟ್ಯಾಂಕರ್ ಚಾಲಕನ ಕೊಲೆ ಆರೋಪಿಗಳ ಪತ್ತೆಗೆ ಆಗ್ರಹಿಸಿ ಸಿಐಟಿಯು ಪ್ರತಿಭಟನೆ:

ಆಂಧ್ರ ಪ್ರದೇಶದ ಚೆರ್ಲಪಲ್ಲಿಯಲ್ಲಿ ಡಿಸೆಂಬರ್ 12 ರಂದು ತಮಿಳುನಾಡು ಮೂಲದ ಟ್ಯಾಂಕರ್ ಚಾಲಕ ಹಾಗೂ ನಿರ್ವಾಹಕರಿಗೆ ಕ್ಷುಲ್ಲಕ ಕಾರಣಕ್ಕೆ ಅಪರಿಚಿತರು ಹಲ್ಲೆ ಮಾಡಿದಾಗ ಟ್ಯಾಂಕರ್ ಚಾಲಕ ಶರವಣನ್ ಡಿಸೆಂಬರ್ 28 ರಂದು ಮೃತಪಟ್ಟಿರುತ್ತಾರೆ. ಘಟನೆಗೆ ಸಂಬಂಧಿಸಿ ಪೋಲೀಸರು ಆರೋಪಿಗಳನ್ನು ಬಂಧಿಸಿಲ್ಲ. ಸದ್ರಿ ಟ್ಯಾಂಕರ್ ಎಚ್‌ಪಿಸಿಎಲ್ ತೈಲ ಹಾಗೂ ಅನಿಲಗಳನ್ನು ಬೇರೆ ಬೇರೆ ರಾಜ್ಯಗಳಿಗೆ ಪೂರೈಕೆ ಮಾಡುವ ಕಾಂಟ್ರಾಕ್ಟು ಸಂಸ್ಥೆಯದಾಗಿದ್ದು, ಟ್ಯಾಂಕರ್ ಚಾಲಕ ನಿರ್ವಾಹಕರಿಗೆ ಸಾಗಣೆ ವೇಳೆ ಭದ್ರತೆ ಇರುವುದಿಲ್ಲ. ಅಲ್ಲದೆ ಹಲ್ಲೆ ಕೊಲೆಗೆ ಈಡಾದಾಗ ಪೋಲೀಸರಿಂದ ತನಿಖೆ ನಡೆಯುವುದೂ ಇಲ್ಲವೆಂದಾದರೆ ಚಾಲಕರಿಗೆ ಬದುಕುವ ಹಕ್ಕು ಇಲ್ಲವೇ? ಈ ಕಾರಣದಿಂದ ಮಂಗಳೂರು ಸಮೀಪದ ಎಚ್‌ಪಿಸಿಎಲ್ ಘಟಕದ ಸಾಗಣೆದಾರ ನಿರ್ವಾಹಕರು ಡಿಸೆಂಬರ್ 29 ರಿಂದ ಮುಷ್ಕರ ಆರಂಭಿಸಿದ್ದು, ಟ್ಯಾಂಕರುಗಳಿಗೆ ತೈಲ ತುಂಬಿಸಿಕೊಳ್ಳಲು ನಿರಾಕರಿಸಿದ್ದಾರೆ.

ಸಿಐಟಿಯು ದ.ಕ.ಜಿಲ್ಲಾ ಸಂಘಟನೆ ಮುಷ್ಕರ ನಿರತರನ್ನು ಸಂಪರ್ಕಿಸಿದಾಗ ಟ್ಯಾಂಕರು ಕಾರ್ಮಿಕರು ತುಂಬಾ ಉತ್ಸಾಹದಿಂದ ಸ್ವಾಗತಿಸಿ ತಮ್ಮ ಹೋರಾಟಕ್ಕೆ ನೇತೃತ್ವ ನೀಡಲು ಆಹ್ವಾನಿಸಿದರು. ಅದರಂತೆ ಡಿಸೆಂಬರ್ 30 ರಂದು ಸುರತ್ಕಲ್‌ನ ಸಿಐಟಿಯು ಕಚೇರಿಯಿಂದ ಎಚ್‌ಪಿಸಿಎಲ್ ಘಟಕದ ವರೆಗೆ 800 ಕ್ಕೂ ಮಿಕ್ಕಿ ಟ್ಯಾಂಕರು ಕಾರ್ಮಿಕರು ಮೆರವಣಿಗೆ ನಡೆಸಿದರು. ಮೃತಪಟ್ಟ ಕಾರ್ಮಿಕನ ಕುಟುಂಬಕ್ಕೆ 10 ಲಕ್ಷ ರೂಪಾಯಿ ಪರಿಹಾರ ಕೊಡಬೇಕೆಂದೂ ಕೊಲೆ ಆರೋಪಿಗಳನ್ನು ಪತ್ತೆಹಚ್ಚಿ ಕ್ರಮಕೈಗೊಳ್ಳಬೇಕೆಂದೂ ಆಗ್ರಹಿಸಲಾಯಿತು.

ಪ್ರತಿಭಟನಾ ಸಭೆಯನ್ನುದ್ದೇಶಿಸಿ ಸಿಐಟಿಯು ದ.ಕ.ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಸಿಐಟಿಯು ಮುಖಂಡರಾದ ಜಯಂತಿ ಬಿ.ಶೆಟ್ಟಿ, ಡಿವೈಎಫ್ಐ ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ಸಿಐಟಿಯು ಮುಖಂಡರಾದ ಜಯಂತ ನಾಯ್ಕ್, ವಿಲ್ಲಿ ವಿಲ್ಸನ್, ಡಿವೈಎಫ್ಐನ ಮುಖಂಡ ಶ್ರೀನಾಥ ಕಾಟಿಪಳ್ಳ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಸಿಐಟಿಯು ಜೊತೆಗೆ ಡಿವೈಎಫ್ಐ ಕೂಡಾ ಪ್ರತಿಭಟನೆಗೆ ಮುಖಂಡತ್ವ ನೀಡಿರುತ್ತದೆ.

ಸರ್ಕಾರಿ ಜಾಗ ಇದೆ, ಬಡವರಿಗೆ ಮನೆ ನಿವೇಶನ ನೀಡಿ – ವೆಂಕಟೇಶಕೋಣಿ

ಫೆಬ್ರವರಿಯಲ್ಲಿ ನಡೆಯುವ ಮನೆ-ನಿವೇಶನಕ್ಕಾಗಿ ಹೋರಾಟದ ಅಂಗವಾಗಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ವಿವಿಧ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕರ್ನಾಟಕ ಕೃಷಿ ಕೂಲಿಕಾರ ಸಂಘಟನೆ ಹಾಗೂ ನಿವೇಶನ ರಹಿತರ ಹೋರಾಟ ಸಮಿತಿ ಸಮಾವೇಶಗಳನ್ನು ನಡೆಸಿದೆ. ಸಮಾವೇಶಗಳು ಉಪಯೋಗವಾಗದೆ ಇರುವ ಸರ್ಕಾರಿ ಜಾಗವನ್ನು ಸಹ ಗುರುತಿಸಿವೆ ಮತ್ತು ಖಾಲಿ ಇರುವ ಜಾಗದಲ್ಲಿ ಬಡವರಿಗೆ ನಿವೇಶನ–ಮನೆ ನೀಡಬೇಕೆಂದು ಒತ್ತಾಯಿಸಿವೆ. ನಿವೇಶನ ರಹಿತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ ಇಂತಹ ಸಮಾವೇಶಗಳು ಬಳ್ಕೂರು, ಕಿರಿಮಂಜೇಶ್ವರ, ನಾವುಂದ, ಮರವಂತೆ, ತ್ರಾಸಿ, ತಲ್ಲೂರುಗಳಲ್ಲಿ ಡಿಸೆಂಬರ್ 4–5 ರಂದು ನಡೆದಿವೆ.

ಬಳ್ಕೂರಿನಲ್ಲಿ 29.25 ಎಕ್ರೆ, ಕಿರಿಮಂಜೇಶ್ವರದಲ್ಲಿ 31 ಎಕ್ರೆ, ತ್ರಾಸಿಯಲ್ಲಿ 41.92 ಎಕ್ರೆ, ಹಂಚಬಹುದಾದ ಭೂಮಿಯನ್ನು ಗುರುತಿಸಲಾಗಿದೆ. ತಲ್ಲೂರಿನಲ್ಲೂ ಹಂಚಬಹುದಾದ ಭೂಮಿಯನ್ನು ಗುರುತಿಸಲಾಗಿದೆ. ನಾವುಂದ ಮತ್ತು ಮರವಂತೆಗಳಲ್ಲಿ ಸರಕಾರಿ ಜಮೀನು ಗುರುತಿಸಬೇಕೆಂದು ಒತ್ತಾಯಿಸಲಾಗಿದೆ. ಎಲ್ಲಾ ಗ್ರಾಮಗಳಲ್ಲೂ ನಿವೇಶನ ರಹಿತರಿಗೆ ಎರಡು ತಿಂಗಳೊಳಗಾಗಿ ಹಕ್ಕುಪತ್ರ ಕೊಡಬೇಕು. ಇಲ್ಲದಿದ್ದರೆ ತಹಶೀಲ್ದಾರ್ ಕಚೇರಿ ಎದುರು ಚಳುವಳಿ ಮಾಡುವುದಾಗಿ ಎಚ್ಚರಿಸಲಾಯಿತು. ಈ ಸಮಾವೇಶಗಳಲ್ಲಿ ಆಯಾಗ್ರಾಮದ ನಿವೇಶನ ರಹಿತರ ಹೋರಾಟ ಸಮಿತಿಯ ನಾಯಕರಾದ ರಾಜು ದೇವಾಡಿಗ, ಸುರೇಶ ಕಲ್ಲಾಗರು, ಮನ್ಸೂರು ಇಬ್ರಾಹಿಂ, ರೆನ್ಸಮ್ ಪಿರೆರಾ, ನಲ್ಲಿಕಟ್ಟೆ ಲಕ್ಷ್ಮಣ ನಾಯಕತ್ವ ವಹಿಸಿದ್ದರು.

ಸಮಾವೇಶಗಳ ಹಕ್ಕೊತ್ತಾಯಗಳನ್ನು ಬೆಂಬಲಿಸಿ ಉಡುಪಿ ಜಿಲ್ಲಾಸಿಐಟಿಯು ನಾಯಕರಾದ ಕೆ.ಶಂಕರ್, ಬಾಲಕೃಷ್ಣ ಶೆಟ್ಟಿ, ಮತ್ತು ಕೃಷಿ ಕೂಲಿಕಾರರ ಸಂಘದಜಿಲ್ಲಾ ನಾಯಕರಾದ ವೆಂಕಟೇಶ ಕೋಣಿಯವರು ಸಮಾವೇಶಗಳಲ್ಲಿ ಮಾತನಾಡಿದರು. ವಿವಿಧ ಗ್ರಾಮಗಳಲ್ಲಿ ನಡೆದ ಸಮಾವೇಶಗಳಲ್ಲಿ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಬಳ್ಕೂರು ಗ್ರಾಮದಎಚ್. ನರಸಿಂಹ, ರಾಜೀವ ಪಡು-ಕೋಣೆ, ಮಹಾಬಲ ವಡೇರ ಹೋಬಳಿ, ಚಂದ್ರ ಉಪ್ಪಿನ ಕುದ್ರು, ಮಾರ್ಕೋಡ ಸುರೇಶಕಲ್ಲಾಗರ ನಾಗರತ್ನ ನಾಡ, ಶೀಲಾವತಿ, ಸಂತೋಷ ಪದ್ಮಾವತಿ ಶೆಟ್ಟಿ, ಕುಶಲ ಹಾಗೂ ಕಿರಿಮಂಜೇಶ್ವರ ಗ್ರಾಮ ಪಂಚಾಯತ್ ಸದಸ್ಯರಾದ ಸಂತೋಷ ಮತ್ತು ಕೃಷ್ಣ, ಶೇಖರ ಮರವಂತೆಗ್ರೇಶನ್‌ಕ್ರಾಸ್ತ, ಸದಾನಂದ ಪೂಜಾರಿ, ಬೇಬಿ ಗೌರಿಕೆರೆ ಮನೆ, ಶ್ಯಾಮಲ, ಸುಮತಿ, ಲಲಿತ, ವೆಂಕಟೇಶ್ ತೋಳಾರ್ ಸೇರಿದಂತೆ ಹಲವು ಮುಖಂಡರು ನಿವೇಶನ ರಹಿತರು ಭಾಗವಹಿಸಿ ಸಮಾವೇಶದ ನೇತೃತ್ವ ವಹಿಸಿದ್ದರು.



‘ಬಿಡದಿ’ ಕಾರ್ಮಿಕ ಕಾನೂನು ಜಾರಿಗಾಗಿ ಪ್ರತಿಭಟನೆ

ಬಿಡದಿ ಕೈಗಾರಿಕೆ ಪ್ರದೇಶದ ಕಾರ್ಮಿಕರು ಕಾರ್ಮಿಕ ಕಾನೂನು ಜಾರಿ ಮಾಡಬೇಕು, ಗುತ್ತಿಗೆ ಪದ್ದತಿ ರದ್ದತಿಗಾಗಿ ಮತ್ತು ಟ್ರೇಡ್ ಯೂನಿಯನ್ ಹಕ್ಕುಗಳನ್ನು ರಕ್ಷಿಸಬೇಕೆಂದು ಒತ್ತಾಯಿಸಿ ರಾಜ್ಯದ ಕಾರ್ಮಿಕ ಆಯುಕ್ತರ ಕಛೇರಿ ಮುಂಭಾಗ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ನಗರ ಬೆಳೆದಂತೆ ಕಾರ್ಖಾನೆಗಳು ಹೆಚ್ಚುತ್ತಿದೆ, ಆದರೆ ಕಾರ್ಮಿಕರು ಯಾವುದೇ ಭದ್ರತೆ ಇಲ್ಲದೆ ದುಡಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಖಾಯಂ ನೌಕರರು ಕಡಿಮೆಯಾಗುತ್ತಿದ್ದು, ಗುತ್ತಿಗೆ ಪದ್ಧತಿ ಕಾರ್ಮಿಕರನ್ನು ಖಾಯಂಗೊಳಿಸದರೆ ಕಡಿಮೆ ಸಂಬಳಕ್ಕೆ ದುಡಿಸಿಕೊಳ್ಳುತ್ತಿದ್ದಾರೆ. ಹಲವು ಹೋರಾಟಗಳ ಮೂಲಕ ಪಡೆದ ಕಾನೂನುಗಳನ್ನು ಗಾಳಿಗೆ ತೂರಿದ ಮಾಲೀಕರು ಇಷ್ಟ ಬಂದಂತೆ ನಡೆದುಕೊಳ್ಳುತ್ತಿದ್ದಾರೆ ಎಂದು ವಿವಿಧ ಕಾರ್ಖಾನೆಗಳಿಂದ ಬಂದ ನೂರಾರು ಕಾರ್ಮಿಕರು ತಮ್ಮ ಆಕ್ರೋಶವನ್ನು ತೊಡಿಕೊಂಡರು.

ಬೆಂ. ಉತ್ತರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರತಾಪ್ ಸಿಂಹ, ಬೆಂ. ದಕ್ಷಿಣ ಕಾರ್ಮಿಕ ಮುಖಂಡರಾದ ಬಿ.ವಿ.ರಾಘವೇಂದ್ರ ಮತ್ತಿತರ ಮುಖಂಡರು ಭಾಗವಹಿಸಿದ್ದರು.

ಅತಿಥಿ ಅಂಕಣ



ಡಾ. ಟಿ. ಆರ್ ಚಂದ್ರಶೇಖರ್

ಡಾ. ನಾರಾಯಣಾಚಾರ್ಯ ಅವರು ಮಹಿಳೆಯರ ಮಾಸಿಕ ಋತುಚಕ್ರದ ಬಗ್ಗೆ ವಿಚಿತ್ರವಾದ ವಿವರಣೆ ನೀಡಿದ್ದಾರೆ. ಗಂಡನ ಆಕ್ರಮಣವನ್ನು ಆ ಸಮಯದಲ್ಲಿ ತಡೆಯುವುದಕ್ಕಾಗಿ ಅದನ್ನು ಸೂತಕ ಎಂದು ಪುರೋಹಿತ ವರ್ಗ ಆಚರಣೆಗೆ ತಂದಿದೆ ಎಂಬುದು ಅವರ ವೇದಾಗಮ ಆಧಾರಿತ ವ್ಯಾಖ್ಯಾನ. ಹಾಗಾದರೆ ಅವರ ಮೇಲೆ ದೇವಾಲಯ ಪ್ರವೇಶಕ್ಕೆ ನಿಷೇಧ ಏಕೆ ಸ್ವಾಮಿ? ಅಲ್ಲಿ ಯಾರ ಆಕ್ರಮಣ ಇರುತ್ತದೆಯಯ್ಯಾ! ಇದೆಂತಹ ಬ್ರಹ್ಮ ಜ್ಞಾನವಯ್ಯಾ?

ಅಭಿವೃದ್ಧಿ ಮತ್ತು ಲಿಂಗ ಸಮಾನತೆ

ಸಾಮಾನ್ಯವಾಗಿ ಲಿಂಗ ಸಮಾನತೆಯ ವಿಷಯವನ್ನು ಮಹಿಳೆಯರಿಗೆ ಸಂಬಂಧಿಸಿದ್ದು ಎಂದು ಭಾವಿಸಲಾಗಿದೆ. ಇದನ್ನು ಖಾಸಗಿಯಾದದ್ದು ಮತ್ತು ಕುಟುಂಬಕ್ಕೆ ಸಂಬಂಧಿಸಿದ್ದು ಎಂದು ತಿಳಿಯಲಾಗಿದೆ. ಆದ್ದರಿಂದ ಮಹಿಳೆಯರ ಸಮಸ್ಯೆಗಳನ್ನು ಶಾಸನಗಳಿಂದ ಸರಿಪಡಿಸುವುದು ಸಾಧ್ಯವಿಲ್ಲ, ಮಹಿಳೆಯರ ವಿಷಯದಲ್ಲಿ ಶಾಸನಗಳು ಪ್ರವೇಶಿಸಲು ಬರುವುದಿಲ್ಲ ಎಂಬ ಭಾವನೆ ವ್ಯಾಪಕವಾಗಿದೆ. ಮಹಿಳೆಯರು ಅನುಭವಿಸುತ್ತಿರುವ ದೌರ್ಜನ್ಯ, ಹಿಂಸೆ, ಮಾನಭಂಗ, ಪ್ರತ್ಯೇಕೀಕರಣ, ಶೋಷಣೆಗಳ ಹಿಂದೆ ಲಿಂಗ ತಾರತಮ್ಯದ ಪಾತ್ರವಿದೆ. ಮಹಿಳೆಯರ ಕಾರ್ಯಕ್ಷೇತ್ರವೇನಿದ್ದರೂ ಅದು ಕುಟುಂಬಕ್ಕೆ, ಗಂಡ, ಮಕ್ಕಳಿಗೆ ಸೀಮಿತವಾದುದು ಎನ್ನಲಾಗಿದೆ. ಜ್ಞಾನಶಿಸ್ತುಗಳು ಮತ್ತು ಸರ್ಕಾರಗಳು ಅವರ ಎಲ್ಲ ಬಗೆಯ ದುಡಿಮೆಯನ್ನು ರಾಷ್ಟ್ರೀಯ ಉತ್ಪನ್ನದ ಖಾತೆಯಲ್ಲಿ ಸೇರಿಸಲು ಸಿದ್ಧವಿಲ್ಲ. ಈ ಭಾವನೆ ಸಮಾಜದಲ್ಲಿ ಇಂದು ಎಷ್ಟು ವ್ಯಾಪಕವಾಗಿದೆ ಮತ್ತು ಎಷ್ಟು ಆಳವಾಗಿ ಬೇರೂರಿದೆ ಎಂದರೆ ಲಿಂಗ ಅಸಮಾನತೆಯು ಅನಿವಾರ್ಯ ಮತ್ತು ಅದನ್ನು ಅನುಭವಿಸುವುದನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲ ಅನ್ನುವ ಭಾವನೆ ಮಹಿಳೆಯರಲ್ಲಿಯೂ ಮನೆಮಾಡಿಕೊಂಡಿದೆ.

ನಮ್ಮ ಸಮುದಾಯಗಳಲ್ಲಿ ಮತ್ತು ಕುಟುಂಬಗಳಲ್ಲಿ ಸಾಮಾಜೀಕರಣವು ಲಿಂಗ ತಾರತಮ್ಯದಿಂದ ಕೂಡಿದೆ. ಲಿಂಗ ತಾರತಮ್ಯದಿಂದ ಕೂಡಿದ ಸಾಮಾಜೀಕರಣಕ್ಕೆ ಒಳಗಾದ ಮಹಿಳೆಯರೂ ಕೂಡ ಲಿಂಗ ತಾರತಮ್ಯದ ಧೋರಣೆ ಬೆಳೆಸಿಕೊಂಡಿದ್ದರೆ ಅದರಲ್ಲಿ ಆಶ್ಚರ್ಯಪಟ್ಟುಕೊಳ್ಳುವುದು ಏನಿಲ್ಲ. ಗಂಡು ಮಕ್ಕಳನ್ನು ಪಡೆಯುವುದರ ಬಗೆಗಿನ ವ್ಯಾಮೋಹ ಮಹಿಳೆಯರಲ್ಲಿಯೂ ಇದೆ. ಮಾಸಿಕ ಋತುಚಕ್ರವು ಸೂತಕ-ಮೈಲಿಗೆ ಅನ್ನುವುದರ ಬಗ್ಗೆ ಮಹಿಳೆಯರಲ್ಲಿಯೂ ನಂಬಿಕೆಯಿದೆ. ಈ ಹಿನ್ನೆಲೆಯಲ್ಲಿ ಲಿಂಗ ಸಮಾನತೆಯನ್ನು ಸಾಧಿಸಿಕೊಳ್ಳುವುದು ಎಷ್ಟು ಕಷ್ಟದ ಕೆಲಸ ಅನ್ನುವುದನ್ನು ಇದ-ರಿಂದ ಅರ್ಥ ಮಾಡಿಕೊಳ್ಳಬಹುದು. ಲಿಂಗ ತಾರತಮ್ಯವನ್ನು ಸಂಪ್ರದಾಯದ ಹೆಸರಿನಲ್ಲಿ, ಕಂದಾಚಾರದ ಹೆಸರಿನಲ್ಲಿ ಸಮರ್ಥಿಸಿಕೊಳ್ಳುವ ಕೆಲಸವು ನಡೆಯುತ್ತಿದೆ. ದಿನನಿತ್ಯ ಇಂತಹ ಸುದ್ದಿಗಳು ಮಾಧ್ಯಮದಲ್ಲಿ ಪ್ರಕಟವಾಗುತ್ತಿವೆ(ಉದಾ: "ಮಹಿಳೆಯರ ದೇವಾಲಯ ಪ್ರವೇಶ" ಬಾಕ್ಸ್ ನೋಡಿ).

ಸಮಾಜದಲ್ಲಿ ಲಿಂಗ ಅಸಮಾನತೆಯನ್ನು ಪರಿಶುದ್ಧತೆ, ಮಡಿ, ಸೂತಕ ಮುಂತಾದವುಗಳ ಹೆಸರಿನಲ್ಲಿ ಸತತವಾಗಿ ಪೋಷಿಸಿಕೊಂಡು ಬರಲಾಗುತ್ತಿದೆ. ಇದಕ್ಕೆ ವೇದಾಗಮಗಳ ಆಧಾರವನ್ನು ನೀಡಲಾಗುತ್ತಿದೆ. ಈ ಶಕ್ತಿಗಳ ಅಭ್ರಟ ಕಳೆದ ಒಂದೆರಡು ವರ್ಷಗಳಿಂದ ಅತಿಯಾಗಿದೆ. ಬಹುಶ್ರುತರೆಲ್ಲರೂ ಇಂದು ಮೌಢ್ಯವನ್ನು ಬಿತ್ತುವ ಕೆಲಸದಲ್ಲಿ ನಿರತರಾಗಿರುವಂತೆ ಕಾಣುತ್ತದೆ.

ಮತ್ತೊಂದು ಸಂಗತಿಯೆಂದರೆ ಲಿಂಗ ಸಮಾನತೆಯನ್ನು ಪುರುಷರು ಮತ್ತು ಮಹಿಳೆಯರ ನಡುವಿನ ಸಂಗತಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ನಿಜ, ಇಲ್ಲಿ ತೀವ್ರ ಅಸಮಾನತೆಯಿದೆ. ಆದರೆ ಇಲ್ಲಿ ಮಹಿಳೆಯರನ್ನು ಒಂದು ಅಭಿನ್ನ ವರ್ಗವನ್ನಾಗಿ ಪರಿಗಣಿಸಲಾಗುತ್ತದೆ. ನಮ್ಮ ಸಮಾಜದ ಸಂದರ್ಭದಲ್ಲಿ ಮಹಿಳೆಯರನ್ನು ಒಂದು ಸಾಮಾಜಿಕ ವರ್ಗವನ್ನಾಗಿ ಪರಿಭಾವಿಸಿಕೊಳ್ಳುವುದು ಸಾಧ್ಯವಿಲ್ಲ. ಇಲ್ಲಿ ಜಾತಿ, ಧರ್ಮ, ಅಂತಸ್ತು, ಪ್ರದೇಶ ಮುಂತಾದ ಸಂಗತಿಗಳು ಇವೆ. ಇದಕ್ಕೆ ಸಂಬಂಧಿಸಿದಂತೆ ಕೆಲವು ಅಂಕಿಅಂಶಗಳನ್ನು ಕರ್ನಾಟಕಕ್ಕೆ ಸಂಬಂಧಿಸಿದಂತೆ ಇಲ್ಲಿ ನೀಡಲಾಗಿದೆ.

ಲಿಂಗ ಸಮಾನತೆಗೆ ಎರಡು ಆಯಾಮಗಳಿವೆ. ಮೊದಲನೆಯದು ಮಹಿಳೆಯರ ಮತ್ತು ಪುರುಷರ ನಡುವಿನ ಅಸಮಾನತೆ. ಎರಡನೆಯದು ಉನ್ನತ ವರ್ಗದ ಮಹಿಳೆಯರು ಮತ್ತು ಕೆಳವರ್ಗದ ಮಹಿಳೆಯರ ನಡುವಿನ ಅಸಮಾನತೆ. ಎರಡರ ವಿರುದ್ಧವೂ ಹೋರಾಡುವ ಅಗತ್ಯವಿದೆ.

ಇಲ್ಲಿನ ಚೌಕಟ್ಟಿನಲ್ಲಿ ನೀಡಿರುವ ಮಾಹಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಪ.ಜಾ. (ಪರಿಶಿಷ್ಟ ಜಾತಿ) ಮತ್ತು ಪ.ಪಂ. (ಪರಿಶಿಷ್ಟ ಪಂಗಡ) ಮಹಿಳೆಯರು ಉಳಿದ ಸಾಮಾನ್ಯ ಮಹಿಳೆಯರಿಗೆ ತುಲನೆ ಮಾಡಿದರೆ ಯಾವ ಬಗೆಯ ತಾರತಮ್ಯ, ಅನ್ಯಾಯ, ಶೋಷಣೆ ಅನುಭವಿಸುತ್ತಿದ್ದಾರೆ ಎಂಬುದು ತಿಳಿಯುತ್ತದೆ. ಲಿಂಗ ಅಸಮಾನತೆಯ ಬಗ್ಗೆ ಎಷ್ಟು ಮಾತನಾಡಲಾಗುತ್ತಿದೆಯೋ ಅದರ ಕಾಲು ಭಾಗದಷ್ಟು ಪ.ಜಾ ಮತ್ತು ಪ.ಪಂ. ಮಹಿಳೆಯರು ಮತ್ತು ಸಾಮಾನ್ಯ ಮಹಿಳೆಯರ ನಡುವಿನ ಸಂಬಂಧದಲ್ಲಿ ಯಾವ ಬಗೆಯ ಅಸಮಾನತೆ ಎದುರಿಸುತ್ತಿದ್ದಾರೆ ಎಂಬುದನ್ನು ಚರ್ಚಿಸಲು ನಮ್ಮ ಸಮಾಜ ಸಿದ್ಧವಿಲ್ಲ. ಈ ಬಗೆಯ ಅಸಮಾನತೆಯನ್ನು ಸಮಾಜವೂ ಅನಿವಾರ್ಯ ಎಂದು ಒಪ್ಪಿಕೊಂಡಿರುವಂತೆ ಕಾಣುತ್ತದೆ.

- ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಶೇ 49.31 (ಸಂಖ್ಯೆ 301.28 ಲಕ್ಷ)
- ಒಟ್ಟು ಪ.ಜಾ. ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಶೇ49.73 (ಸಂಖ್ಯೆ 52.10 ಲಕ್ಷ)
- ಒಟ್ಟು ಪ. ಪಂ. ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಶೇ 49.75 (ಸಂಖ್ಯೆ 21.14 ಲಕ್ಷ)
- ಒಟ್ಟು ದುಡಿಮೆಗಾರರಲ್ಲಿ ಮಹಿಳಾ ದುಡಿಮೆಗಾರರ ಪ್ರಮಾಣ ಶೇ34.45 (ಸಂಖ್ಯೆ 96.02 ಲಕ್ಷ)
- ಒಟ್ಟು ಪ.ಜಾ ದುಡಿಮೆಗಾರರಲ್ಲಿ ಮಹಿಳಾ ದುಡಿಮೆಗಾರರ ಪ್ರಮಾಣ ಶೇ39.92 (ಸಂಖ್ಯೆ 19.90 ಲಕ್ಷ)
- ಒಟ್ಟು ಪ.ಪಂ. ಮಹಿಳೆಯರಲ್ಲಿ ದುಡಿಮೆಗಾರ ಮಹಿಳೆಯರ ಪ್ರಮಾಣ ಶೇ 41.12 (ಸಂಖ್ಯೆ 8.78 ಲಕ್ಷ)
- ಒಟ್ಟು ಅಕ್ಷರಸ್ಥರಲ್ಲಿ ಮಹಿಳೆಯರ ಪ್ರಮಾಣ ಶೇ 44.62(ಸಂಖ್ಯೆ 181.38 ಲಕ್ಷ)
- ಒಟ್ಟು ಅಕ್ಷರಸ್ಥ ಮಹಿಳೆಯರಲ್ಲಿ ಪ.ಜಾ ಅಕ್ಷರಸ್ಥ ಮಹಿಳೆಯರ ಪ್ರಮಾಣ ಶೇ 14.16 (ಸಂಖ್ಯೆ25.70 ಲಕ್ಷ)
- ಒಟ್ಟು ಅಕ್ಷರಸ್ಥ ಮಹಿಳೆಯರಲ್ಲಿ ಪ.ಪಂ.ದ ಅಕ್ಷರಸ್ಥ ಮಹಿಳೆಯರ ಪ್ರಮಾಣ ಶೇ 5.36 (ಸಂಖ್ಯೆ9.74 ಲಕ್ಷ)
- ಮಹಿಳಾ ದುಡಿಮೆಗಾರರಲ್ಲಿ ಭೂರಹಿತ ಕೂಲಿಕಾರರ ಪ್ರಮಾಣ ಶೇ40.32 (ಸಂ-ಖ್ಯೆ38.72 ಲಕ್ಷ)
- ಕೂಲಿಕಾರ ಮಹಿಳೆಯರಲ್ಲಿ ಪ.ಜಾ. ಕೂಲಿಕಾರರ ಪ್ರಮಾಣ ಶೇ 27.81 (ಸಂಖ್ಯೆ 10.77 ಲಕ್ಷ)
- ಕೂಲಿಕಾರ ಮಹಿಳೆಯರಲ್ಲಿ ಪ.ಪಂ. ಕೂಲಿಕಾರರ ಪ್ರಮಾಣ ಶೇ 12.80 (ಸಂಖ್ಯೆ 4.96ಲಕ್ಷ)

ಸಾಮಾನ್ಯ ಮಹಿಳೆಯರಿಗೆ ಸಂಬಂಧಿಸಿದಂತೆ ಲಿಂಗ ಅಸಮಾನತೆಯು ಒಂದು ಆಯಾಮವನ್ನು ಪಡೆದಿದ್ದರೆ ಪ.ಜಾ ಮತ್ತು ಪ.ಪಂ. ಮಹಿಳೆಯರು ಮೂರು ಬಗೆಯ ತಾರತಮ್ಯಗಳ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರು ಮಹಿಳೆಯರು ಎಂಬ ಕಾರಣಕ್ಕೆ ಸಾಮಾನ್ಯ ಮಹಿಳೆಯರು ಎದುರಿಸುತ್ತಿರುವಂತೆ ಲಿಂಗ ಅಸಮಾನತೆಯನ್ನು ಎದುರಿಸುತ್ತಿದ್ದಾರೆ. ಎರಡನೆಯದಾಗಿ ಪ.ಜಾ ಮತ್ತು ಪ.ಪಂ. ಮಹಿಳೆಯರು ಜಾತಿಗೆ ಸಂಬಂಧಿಸಿದಂತೆ ಪ್ರತ್ಯೇಕೀಕರಣವನ್ನು ಮತ್ತು ತಾರತಮ್ಯವನ್ನು ಅನುಭವಿಸುತ್ತಿದ್ದಾರೆ. ಮೂರನೆಯದಾಗಿ ಬಡವರು, ಅನಕ್ಷರಸ್ಥರು ಅನ್ನುವ ಕಾರಣಕ್ಕೆ ವರ್ಗ ಅಸಮಾನತೆಯನ್ನು, ಆರ್ಥಿಕ ಶೋಷಣೆಯನ್ನು ಎದುರಿಸುತ್ತಿದ್ದಾರೆ. ಒಟ್ಟು ಅಕ್ಷರಸ್ಥ ಮಹಿಳೆಯರಲ್ಲಿ ಪ.ಜಾ. ಮತ್ತು ಪ.ಪಂ.ದ ಅಕ್ಷರಸ್ಥ ಮಹಿಳೆಯರ ಪ್ರಮಾಣ ಅವರು ಜನಸಂಖ್ಯೆಯಲ್ಲಿ ಎಷ್ಟು ಪಾಲು ಪಡೆದಿದ್ದಾರೋ ಅದಕ್ಕಿಂತ ಕಡಿಮೆಯಿದೆ(ಅದು ಕ್ರಮವಾಗಿ ಶೇ14.16 ಮತ್ತು ಶೇ5.36). ಆದರೆ ದುಡಿಮೆಗೆ ಬಂದರೆ ಅವರ ಪ್ರಮಾಣವು ಅವರು ಜನಸಂಖ್ಯೆಯಲ್ಲಿ ಪಡೆದಿರುವ ಪ್ರಮಾಣಕ್ಕಿಂತ ಅಧಿಕವಾಗಿದೆ(ಕ್ರಮವಾಗಿ ಶೇ27.81 ಮತ್ತು ಶೇ12.80).

ಒಟ್ಟು ಮಹಿಳೆಯರ ಸಾಕ್ಷರತಾ ಪ್ರಮಾಣ 2011ರಲ್ಲಿ ಶೇ68.08. ಆದರೆ ಪ.ಜಾ. ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ 56.58 ಮತ್ತು ಪ.ಪಂ. ಸಾಕ್ಷರತಾ ಪ್ರಮಾಣ ಶೇ 52.96. ಒಂದು ವೇಳೆ ಸಾಮಾಜಿಕ ಪ್ರತ್ಯೇಕೀಕರಣ-ಅಸ್ಪೃಶ್ಯತೆ ಇಲ್ಲದಿದ್ದರೆ ಅವರ ಸಾಕ್ಷರತಾ ಪ್ರಮಾಣವೂ ಶೇ68.08ರಷ್ಟಿರಬೇಕಾಗಿತ್ತು. ಅಸ್ಪೃಶ್ಯತೆಯ ಆಚರಣೆಯಿಂದ ಪ.ಜಾ. ಮತ್ತು ಪ.ಪಂ. ಮಹಿಳೆಯರಿಗೆ ಉಂಟಾಗಿರುವ ಹಾನಿ ಕ್ರಮವಾಗಿ ಶೇ 11.5 ಮತ್ತು ಶೇ15.12. 'ಪ.ಜಾ. ಮತ್ತು ಪ.ಪಂ.ಗಳಿಗೆ ಇನ್ನೆಷ್ಟು ವರ್ಷಗಳ ಕಾಲ ಮೀಸಲಾತಿ ನೀಡಬೇಕು' ಎಂಬ ಮಾತುಗಳು ಇಂದು ಕೇಳಿ ಬರುತ್ತಿವೆ. ಮೀಸಲಾತಿ ನೀತಿಯನ್ನು ಮರುಪರಿಶೀಲಿಸಬೇಕು-ಪರಿಷ್ಕರಿಸಬೇಕು ಎಂದು ಬಹುಶ್ರುತರ ನಾಯಕರೊಬ್ಬರು ಒಂದೆ-ರಡು ತಿಂಗಳುಗಳ ಹಿಂದೆ ಕರೆ ನೀಡಿದ್ದರು. ಸಮಾಜವು ಆಚರಿಸುತ್ತಿರುವ ಘೋಷಿತ ಮತ್ತು ಅಘೋಷಿತ, ಹಾಗೂ ಗೋಚರ ಮತ್ತು ಅಗೋಚರ ಅಸ್ಪೃಶ್ಯತೆಯಿಂದಾಗಿ ಅವರು ಏನೆಲ್ಲ ಅವಮಾನ, ಅನ್ಯಾಯ, ತಾರತಮ್ಯ ಅನುಭವಿಸುತ್ತಿದ್ದಾರೆ ಎಂಬುದರ ಬಗ್ಗೆ ಈ ಬಹುಶ್ರುತರು ಯೋಚಿಸಲು ಸಿದ್ಧರಿಲ್ಲ. ಮೀಸಲಾತಿಯನ್ನು ಇವರೆಲ್ಲ ದಾನ ಕೊಟ್ಟಿರುವವರಂತೆ ಅದರ ಬಗ್ಗೆ ಉಗ್ರ ಟೀಕೆ ಮಾಡ ತೊಡಗಿದ್ದಾರೆ.

ಲಿಂಗ ಸಮಾನತೆಯನ್ನಾಗಲಿ ಅಥವಾ ಸಾಮಾನ್ಯ ಸಾಮಾಜಿಕ ಸಮಾನತೆಯನ್ನಾಗಲಿ ಶಾಸನಗಳಿಂದ, ಕಾನೂನುಗಳ ಮೂಲಕ ಸಾಧಿಸಿಕೊಳ್ಳುವುದು ಕಷ್ಟಸಾಧ್ಯ. ಶಾಸನಗಳು ಬೇಕು. ಆದರೆ ಸಮಾಜದಲ್ಲಿ ಜನರ ಧೋರಣೆಯಲ್ಲಿ ಬದಲಾವಣೆ ನಡೆಯದಿದ್ದರೆ ಶಾಸನಗಳು ಏನೂ ಮಾಡುವುದಕ್ಕಾಗುವುದಿಲ್ಲ. ಮಾಸಿಕ ಋತುಚಕ್ರದ ಕಾರಣವಾಗಿ ಮಹಿಳೆಯರಿಗೆ ದೇವಾಲಯ ಪ್ರವೇಶವನ್ನು ನಿಷೇದಿಸುವ ಬಗ್ಗೆ ಯೋಚಿಸುತ್ತಿರುವ ಬಹುಶ್ರುತರು ತಮ್ಮ ಪರವಾಗಿ ನಿಲ್ಲುವಂತೆ ಮಹಿಳೆಯರಿಗೂ ಪ್ರಚೋದನೆ ನೀಡುತ್ತಿದ್ದಾರೆ. ಕೆಲವು ಬಹುಶ್ರುತ ಮಹಿಳೆಯರು ಅವರ ಪರವಾಗಿ ಮಾತನಾಡುತ್ತಿದ್ದಾರೆ. ಇತ್ತೀಚಿಗೆ ಮಹಾರಾಷ್ಟ್ರದಲ್ಲಿ ಮಹಿಳೆಯೊಬ್ಬರು ದೇವಾಲಯವನ್ನು ಪ್ರವೇಶಿಸಿದರು ಅನ್ನುವ ಕಾರಣಕ್ಕೆ ಆ ದೇವಾಲಯವನ್ನು ಶುದ್ಧೀಕರಣಕ್ಕೆ ಒಳಪಡಿಸಲಾಯಿತು.

ಈ ಬಗೆಯ ಲಿಂಗ ತಾರತಮ್ಯ, ಅಸಮಾನತೆ, ಮೌಢ್ಯಗಳಿಂದಾಗಿ ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಕಡಿಮೆಯಾಗುತ್ತಿದೆ. ಯಾವುದನ್ನು ನಾವು ಲಿಂಗ ಅನುಪಾತ ಎಂದು ಕರೆಯುತ್ತೇವೆಯೋ ಅದು 0-6 ವಯೋಮಾನದಲ್ಲಿ ಕುಸಿಯುತ್ತಿದೆ ಮತ್ತು ಒಟ್ಟು ಜನಸಂಖ್ಯೆಯಲ್ಲಿ ಅದರ ಪ್ರಮಾಣ ಸಾವಿರಕ್ಕಿಂತ ಕಡಿಮೆಯಿದೆ. ಉತ್ತರ ಭಾರತದ ಗುಜರಾತ್,

ಪುಟ 10 ಕ್ಕೆ

"ಮಹಿಳೆಯರ ದೇವಾಲಯ ಪ್ರವೇಶ"

ಇತ್ತೀಚಿಗೆ ಮಹಿಳೆಯರ ದೇವಾಲಯ ಪ್ರವೇಶದ ಬಗ್ಗೆ, ಅವರು ಋತುಮತಿಗಳಾಗುವುದರಿಂದ ಅವರು ದೇವಾಲಯ ಪ್ರವೇಶಕ್ಕೆ ಅನರ್ಹರು, ಅವರ ಪ್ರವೇಶ ಸೂತಕ ಮುಂತಾದ ಸಂಗತಿಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿ ಇಂದು ನಡೆಯುತ್ತಿರುವ ಮೌಢ್ಯ ನಿಷೇಧ ಕಾಯಿದೆ ಕುರಿತಂತೆ ಪುರೋಹಿತಶಾಹಿಗಳ ಅಪಪ್ರಚಾರ ಆರಂಭವಾಗಿದೆ. ಬಹುಶ್ರುತರು ಎನಿಸಿಕೊಂಡಿರುವ ಡಾ. ನಾರಾಯಣಾಚಾರ್ಯ ಅವರು ಮಹಿಳೆಯರ ಮಾಸಿಕ ಋತುಚಕ್ರದ ಬಗ್ಗೆ 'ವಿಜಯವಾಣಿ'ಯಲ್ಲಿ (ನವೆಂಬರ್ 24, 2015) 'ಇವರು ನಿಷೇಧಿಸ ಬಯಸುವ ಮೂಢನಂಬಿಕೆಗಳು' ಅನ್ನುವ ಲೇಖನದಲ್ಲಿ ವಿಚಿತ್ರವಾದ ವಿವರಣೆ ನೀಡಿದ್ದಾ-ರೆ. ಗಂಡನ ಆಕ್ರಮಣವನ್ನು ಆ ಸಮಯದಲ್ಲಿ ತಡೆಯುವುದಕ್ಕಾಗಿ ಅದನ್ನು ಸೂತಕ ಎಂದು ಪುರೋಹಿತ ವರ್ಗ ಆಚರಣೆಗೆ ತಂದಿದೆ ಎಂಬುದು ಅವರ ವೇದಾಗಮ ಆಧಾರಿತ ವ್ಯಾಖ್ಯಾನ. ಹಾಗಾದರೆ ಅವರ ಮೇಲೆ ದೇವಾಲಯ ಪ್ರವೇಶಕ್ಕೆ ನಿಷೇಧ ಏಕೆ ಸ್ವಾಮಿ? ಅಲ್ಲಿ ಯಾರ ಆಕ್ರಮಣ ಇರುತ್ತದೆ-ಯಯ್ಯಾ! ಇದೆಂತಹ ಬ್ರಹ್ಮ ಜ್ಞಾನವಯ್ಯಾ?

ಈ ಬಗೆಯ ಲಿಂಗ ತಾರತಮ್ಯವನ್ನು, ಮೌಢ್ಯವನ್ನು ನಿಷೇಧಿಸದೆ ಅವುಗಳನ್ನು ಪೋಷಿಸುವುದು ಸಾಧ್ಯವೇ? ಬಹುಶ್ರುತರೂ ಎನ್ನಿಸಿಕೊಂಡ "ಜ್ಞಾನಿ"ಗಳೆ ಮೌಢ್ಯವನ್ನು ಬಿತ್ತುವುದಾದರೆ ಸಮಾಜವನ್ನು ಯಾರು ಕಾಯಬೇಕು? ಲಿಂಗ ಅಸಮಾನತೆಯನ್ನು ಸಮಾಜದಲ್ಲಿ ಊರ್ಜಿತಗೊಳಿಸುತ್ತಿರುವ ಕ್ರಮಕ್ಕೆ ಇದಕ್ಕಿಂತ ಉತ್ತಮ ನಿದರ್ಶನ ಬೇಕೆ? ತಮ್ಮ ಲೇಖನದಲ್ಲಿ ಇವರು ಮೌಢ್ಯ ನಿಷೇಧ ಕಾಯಿದೆಯನ್ನು ಒತ್ತಾಯಿಸುತ್ತಿರುವವರನ್ನು 'ಹೆಂಡ'ಕ್ಕೆ ಮತ್ತು ಮೌಢ್ಯವನ್ನು ಸಮರ್ಥಿಸುತ್ತಿರುವವರನ್ನು 'ಅಮೃತ'ಕ್ಕೆ ಹೋಲಿಸುವುದರ ಮೂಲಕ ತಮ್ಮ ಕುಬ್ಜತನವನ್ನು ಮತ್ತು ಅಸಹ್ಯತನವನ್ನು ತಾವೇ ಜಗಜ್ಜಾಹೀರುಪಡಿಸಿಕೊಂಡಿದ್ದಾರೆ. ಕುಲೀನ ಸ್ತ್ರೀಯರ ಬಗ್ಗೆ ಇವರಿಗೆ ಇಷ್ಟೊಂದು ಅಸಹ್ಯ ಭಾವನೆಯಿದ್ದರೆ ಕೆಳಜಾತಿ ವರ್ಗಗಳ ಮಾಂಸಾಹಾರಿ ಮಹಿಳೆಯರ ಬಗ್ಗೆ ಇವರಿಗೆಷ್ಟು ಅಸೂಯೆ, ಅಸಹನೆ, ಅಗೌರವ ಇರಬೇಕು? ಈ ಹಿಂದೆ ಶಿಕ್ಷಣ ಹಕ್ಕು ಕಾಯಿದೆ ಜಾರಿಗೆ ಬಂದ ಸಂದರ್ಭದಲ್ಲಿ ಇವರಂತೆ ಬಹುಶ್ರುತರು ಅನ್ನಿಸಿಕೊಂಡ ಒಬ್ಬ ವಯೋವೃದ್ಧ ಶಿಕ್ಷಣ ತಜ್ಞರು ಕೆಳವರ್ಗದವರನ್ನು ಕೊಳಚೆ ನೀರಿಗೂ ಮತ್ತು ಉನ್ನತ ವರ್ಗವನ್ನು ಸಮುದ್ರದ ನೀರಿಗೂ ಹೋಲಿಸಿದ್ದರು.

ಭಾರತವನ್ನು ಅಮೆರಿಕದ ಅಡಿಯಾಳು ಮಿಲಿಟರಿ ಮಿತ್ರನ ಮಟ್ಟಕ್ಕೆ ಇಳಿಸಬೇಕೇ?

ಅಮೆರಿಕಾದ ಸಶಸ್ತ್ರ ಪಡೆಗಳಿಗೆ ನಮ್ಮ ನೌಕಾ ಬಂದರುಗಳನ್ನು, ವಾಯುನೆಲೆಗಳನ್ನು ಬಳಸಿಕೊಳ್ಳಲು ಅವಕಾಶ ಕೊಡುವ ಒಪ್ಪಂದ ಮತ್ತು ನಮ್ಮೆರಡು ದೇಶಗಳ ಸಶಸ್ತ್ರ ಪಡೆಗಳ ಸಂಪರ್ಕ ವ್ಯವಸ್ಥೆಗಳನ್ನು ಸಮಗ್ರೀಕರಿಸುವ ಒಪ್ಪಂದಕ್ಕೆ ಸಹಿ ಹಾಕಲು ಅಮೆರಿಕಾ ಒತ್ತಡ ಹಾಕುತ್ತಿದೆ, ಅಮೆರಿಕಾದೊಂದಿಗೆ ರಕ್ಷಣಾ ಉಪಕರಣಗಳ ಜಂಟಿ ಉತ್ಪಾದನೆಗೆ ಕಾತುರವಾಗಿರುವ ಮೋದಿ ಸರಕಾರವನ್ನು ರಾಷ್ಟ್ರೀಯ ಸಾರ್ವಭೌಮತೆ ಮತ್ತು ನಮ್ಮ ಸಶಸ್ತ್ರ ಪಡೆಗಳ ಸಮಗ್ರತೆಯನ್ನು ಬಿಟ್ಟುಕೊಡುವಂತೆ ಪುಸಲಾಯಿಸಲಾಯಿಸುತ್ತಿದೆ. ಬಿಜೆಪಿ ಸರಕಾರ ಈ ಒಪ್ಪಂದಗಳಿಗೆ ಸಹಿ ಹಾಕಿದರೆ ಭಾರತದ ಸಾರ್ವಭೌಮತೆಯನ್ನು ಬಲಿಗೊಟ್ಟು ಅದನ್ನು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಒಬ್ಬ ಅಡಿಯಾಳು ಮಿಲಿಟರಿ ಮಿತ್ರನ ಮಟ್ಟಕ್ಕೆ ಇಳಿಸಿದಂತಾಗುತ್ತದೆ.



ಪ್ರಕಾಶ ಕಾರಟ್

ರಕ್ಷಣಾ ಮಂತ್ರಿ ಮನೋಹರ ಪರ್ರಿಕರ್‌ರವರ ಮೊದಲ ವಾಶಿಂಗ್ಟನ್ ಭೇಟಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳೊಂದಿಗೆ ರಕ್ಷಣಾ ಸಹಕಾರದಲ್ಲಿ ವಿವಿಧ ಹೆಜ್ಜೆಗಳಿಗೆ ದಾರಿ ಮಾಡಿ ಕೊಟ್ಟಿದೆ. ಅವುಗಳಲ್ಲಿ ಅತ್ಯಂತ ಗಂಭಿರ ಮತ್ತು ಆತಂಕಕಾರಿಯಾಗಿರುವಂತದ್ದು ಈ ಮಂತ್ರಿ ಭಾರತೀಯ ಮಿಲಿಟರಿ ನೆಲೆಗಳು ಮತ್ತು ಬಂದರುಗಳನ್ನು ಅಮೆರಿಕಾಕ್ಕೆ ಲಭ್ಯಗೊಳಿಸಲು ಸಿದ್ಧರಾಗಿದ್ದೇವೆ ಎಂದು ತಿಳಿಸಿರುವುದು. 'ಲಾಜಿಸ್ಟಿಕ್ಸ್ ಸಪೋರ್ಟ್ ಅಗ್ರಿಮೆಂಟ್'(ಎಲ್‌ಎಸ್‌ಎ–ಮಿಲಿಟರಿ ಸರಬರಾಜು ಬೆಂಬಲ ಒಪ್ಪಂದ)ದ ವಿಷಯದಲ್ಲಿ ಭಾರತದ ಸರಕಾರ ತೆರೆದ ಮನಸ್ಸು ಹೊಂದಿದೆ ಎಂದು ಪರ್ರಿಕರ್ ಅಮೆರಿಕಾದ ರಕ್ಷಣಾ ಕಾರ್ಯದರ್ಶಿ ಆಶ್ಟನ್ ಕಾರ್ಟರ್‌ಗೆ ತಿಳಿಸಿರುವುದಾಗಿ ಮಾಧ್ಯಮ ವರದಿಗಳಿಂದ ತಿಳಿದು ಬರುತ್ತಿದೆ.

ಜೂನ್ 2005ರಲ್ಲಿ 'ಭಾರತ–ಅಮೆರಿಕ ರಕ್ಷಣಾ ಚೌಕಟ್ಟು ಒಪ್ಪಂದ'ಕ್ಕೆ ಸಹಿ ಹಾಕಿದ ಮೇಲೆ ಅಮೆರಿಕಾ ಈ ಎಲ್‌ಎಸ್‌ಎ ಒಪ್ಪಂದ ಮತ್ತು 'ಕಮ್ಯುನಿಕೇಶನ್ ಅಂಡ್ ಇನ್‌ಫಾರ್ಮೇಶನ್ ಸೆಕ್ಯುರಿಟಿ ಮೆಮೊರಂಡಂ ಅಗ್ರಿಮೆಂಟ್'(ಸಿಐಎಸ್‌ಎಂವೊಎ–ಸಂವಹನ ಮತ್ತು ಮಾಹಿತಿ ಭದ್ರತೆ ಕರಾರು ಒಪ್ಪಂದ) ಇವೆರಡಕ್ಕೆ ಭಾರತ ಸಹಿ ಹಾಕಬೇಕೆಂದು ಬೆನ್ನು ಬಿದ್ದಿತ್ತು. ಎಡಪಕ್ಷಗಳು ಮೇಲೆ ಹೇಳಿದ ಚೌಕಟ್ಟು ಒಪ್ಪಂದ ಮತ್ತು ಇವೆರಡೂ ಒಪ್ಪಂದಗಳಿಗೆ ಬಲವಾದ ವಿರೋಧವನ್ನು ವ್ಯಕ್ತಪಡಿಸಿದ್ದವು. ಎಲ್‌ಎಸ್‌ಎ ಒಪ್ಪಂದವಾದರೆ ಅಮೆರಿಕನ್ ಮಿಲಿಟರಿ ಪಡೆಗಳು ಭಾರತೀಯ ವಾಯುನೆಲೆಗಳು ಮತ್ತು ನೌಕಾಪಡೆಯ ಬಂದರುಗಳನ್ನು ತಮ್ಮ ಮಿಲಿಟರಿ ಕಾರ್ಯಾಚರಣೆಗಳಿಗೆ ಬಳಸಲು ಅವಕಾಶವಾಗುತ್ತಿತ್ತು. ಎರಡು ಸಶಸ್ತ್ರ ಪಡೆಗಳ ಸಂಪರ್ಕ ಜಾಲಗಳನ್ನು ಪರಸ್ಪರ ಹೊಂದಿಸಿ ಸಮಗ್ರೀಕರಿಸುವುದು ಇನ್ನೊಂದು ಒಪ್ಪಂದದ ಆಶಯ. ಈ ಎರಡು ಒಪ್ಪಂದಗಳು ಆಗಿದ್ದರೆ, ನಮ್ಮ ದೇಶ ಅಮೆರಿಕಾದ ಪೂರ್ಣ ಪ್ರಮಾಣದ ಮಿಲಿಟರಿ ಮಿತ್ರನಾಗಿ ಬಿಡುತ್ತಿತ್ತು. ರಕ್ಷಣಾ ಚೌಕಟ್ಟು ಒಪ್ಪಂದಕ್ಕೆ ಸಹಿ ಹಾಕಿದ ಯುಪಿಎ ಸರಕಾರ ಅಂತಿಮವಾಗಿ ಈ ಎರಡು ಒಪ್ಪಂದಗಳನ್ನು ಮಾಡಿಕೊಳ್ಳಲು ಮುಂದಾಗಲಿಲ್ಲ. ಆಗಿನ ರಕ್ಷಣಾ ಮಂತ್ರಿ ಎ.ಕೆ.ಆಂಟನಿ ಈ ವಿಷಯದಲ್ಲಿ ಒಂದು ಸ್ಪಷ್ಟ ನಿಲುವು ತಳೆದರು.

ಆದರೆ ಈಗ ಬಿಜೆಪಿ ಸರಕಾರ ಅಮೆರಿಕಾದ ಮಿಲಿಟರಿ ಕೂಟ ಸೇರಲು ಕಾತುರವಾಗಿರುವಂತೆ ಕಾಣುತ್ತದೆ. ಈ ದಿಕ್ಕಿನಲ್ಲಿ ಸ್ಪಷ್ಟ ಸಂಕೇತಗಳು ಕಾಣ ಬಂದಿವೆ. ಜನವರಿ 2015ರಲ್ಲಿ ಅಧ್ಯಕ್ಷ ಒಬಾಮ ಅವರ ಭಾರತ ಭೇಟಿ ಕಾಲದಲ್ಲಿ ಸಹಿ ಹಾಕಿದ 'ಜಾಯಿಂಟ್ ವಿಶನ್ ಸ್ಟೇಟ್‌ಮೆಂಟ್'(ಜಂಟಿ ಕಣ್ನೋಟ ಹೇಳಿಕೆ)ಭಾರತವನ್ನು ಏಶ್ಯ–ಶಾಂತಸಾಗರ ಪ್ರದೇಶದಲ್ಲಿ ಮತ್ತು ಹಿಂದೂ ಮಹಾಸಾಗರ ಪ್ರದೇಶದಲ್ಲಿ ಅಮೆರಿಕನ್ ಸಮರ ತಂತ್ರದೊಂದಿಗೆ ಹೊಂದಿಸಿಕೊಂಡಿದೆ. ಸಾಗರಯಾನ ಭದ್ರತೆಯ ಹೆಸರಿನಲ್ಲಿ ಭಾರತ ಹಿಂದೂ ಮಹಾಸಾಗರದಲ್ಲಿ ತನ್ನ ಕ್ರಿಯೆಗಳನ್ನು ಅಮೆರಿಕನ್ ನೌಕಾ ಪಡೆಯೊಂದಿಗೆ ಸಂಯೋಜಿಸುತ್ತಿದೆ. ರಕ್ಷಣಾ ಮಂತ್ರಿ ಪರ್ರಿಕರ್ ಹವಾಯಿಯಲ್ಲಿ ಅಮೆರಿಕನ್ ಶಾಂತಸಾಗರ ನೌಕಾ ಕಮಾಂಡ್‌ಗೆ ಭೇಟಿ ನೀಡಿದ ಮೊದಲ ಭಾರತೀಯ ರಕ್ಷಣಾ ಮಂತ್ರಿಗಳಾದರು. ಅಮೆರಿಕಾ ರಕ್ಷಣಾ ಸಾಮಗ್ರಿಗಳ ಅತಿ ದೊಡ್ಡ ಪೂರೈಕೆದಾರನಾಯಿತು.

'ಭಾರತ–ಅಮೆರಿಕ ರಕ್ಷಣಾ ಚೌಕಟ್ಟು ಒಪ್ಪಂದ'ವನ್ನು ಈ ಜೂನ್ 2015ರಲ್ಲಿ ಇನ್ನೂ ಹತ್ತು ವರ್ಷಕ್ಕೆ ನವೀಕರಿಸಲಾಯಿತು. ಈ ಒಪ್ಪಂದದ ಅಡಿಯಲ್ಲೇ ಅಮೆರಿಕಾ ಮತ್ತೆ ಉಳಿದೆರಡು ಒಪ್ಪಂದಗಳಿಗೆ, ಜತೆಗೆ 'ಬೇಸಿಕ್ ಎಕ್ಸ್‌ಚೇಂಜ್ ಅಂಡ್ ಕೋಪರೇಷನ್ ಅಗ್ರಿಮೆಂಟ್'(ಬಿಇಸಿಎ–ಮೂಲ ವಿನಿಮಯ ಮತ್ತು ಸಹಕಾರ ಒಪ್ಪಂದ)ಗೆ ಸಹಿ ಹಾಕಬೇಕೆಂದು ಒತ್ತಡ ಹಾಕಲಾರಂಭಿಸಿದೆ. ರಕ್ಷಣಾ ಮಂತ್ರಿ ಈ ಪ್ರಶ್ನೆಯನ್ನು ಚರ್ಚಿಸಲು, ಒಂದು ತೆರೆದ ಮನಸ್ಸು ಹೊಂದಿರಲು ಒಪ್ಪಿರುವುದು ಮೋದಿ ಸರಕಾರ ಅಮೆರಿಕನ್ ಒತ್ತಡಕ್ಕೆ ಮಣಿಯುತ್ತಿದೆ ಎಂಬುದರ ಒಂದು ಅಪಾಯಕಾರಿ ಸಂಕೇತ.

ಈ ಎರಡು ಒಪ್ಪಂದಗಳಿಗೆ ಸಹಿ ಮಾಡದೆ ಉನ್ನತ ತಂತ್ರಜ್ಞಾನದ ವಿವಿಧ ಅಂಗಭಾಗಗಳನ್ನು ಭಾರತಕ್ಕೆ ಕೊಡಲು ಆಗುವುದಿಲ್ಲ ಎಂಬುದು ಅಮೆರಿಕನ್ನರ ನಿಲುವು. ಅಮೆರಿಕಾದೊಂದಿಗೆ ರಕ್ಷಣಾ ಉಪಕರಣಗಳ ಜಂಟಿ ಉತ್ಪಾದನೆಗೆ ಕಾತುರವಾಗಿರುವ ಮೋದಿ ಸರಕಾರವನ್ನು ರಾಷ್ಟ್ರೀಯ ಸಾರ್ವಭೌಮತೆ ಮತ್ತು ನಮ್ಮ ಸಶಸ್ತ್ರ ಪಡೆಗಳ ಸಮಗ್ರತೆಯನ್ನು ಬಿಟ್ಟುಕೊಡುವಂತೆ ಪುಸಲಾಯಿಸಲಾಗುತ್ತಿದೆ.

ಅಮೆರಿಕಾದ ಸಶಸ್ತ್ರ ಪಡೆಗಳಿಗೆ ನಮ್ಮ ನೌಕಾ ಬಂದರುಗಳನ್ನು, ವಾಯುನೆಲೆಗಳನ್ನು ಯುದ್ಧ ವಿಮಾನ, ಯುದ್ಧನೌಕೆಗಳ ಸರ್ವಿಸಿಂಗ್‌ಗೆ, ಇಂಧನ ತುಂಬಿಸಿಕೊಳ್ಳಲಿಕ್ಕೆ ಮತ್ತು ಮಿಲಿಟರಿ ಉಪಕರಣಗಳ ದುರಸ್ತಿಗೆ ಬಳಸಿಕೊಳ್ಳಲು ಅವಕಾಶ ಕೊಡುವುದೆಂದರೆ ನಮ್ಮ ದೇಶ ಯಾವುದೇ ಮಿಲಿಟರಿ ಕೂಟದ ಭಾಗವಾಗುವುದಿಲ್ಲ ಎಂಬ ಇದುವರೆಗಿನ ಸ್ವತಂತ್ರ ಸ್ಥಾನಮಾನವನ್ನು ತೀವ್ರವಾಗಿ ಬದಲಿಸಿದಂತಾಗುತ್ತದೆ. ಎರಡ ಸಶಸ್ತ್ರ ಪಡೆಗಳ ಸಂಪರ್ಕ ವ್ಯವಸ್ಥೆಗಳನ್ನು ಸಮಗ್ರೀಕರಿಸುವ ಪ್ರಯತ್ನಗಳು ಭಾರತೀಯ ಸಶಸ್ತ್ರ ಪಡೆಗಳನ್ನು ಅಮೆರಿಕನ್ ರಕ್ಷಣಾ ರಚನೆಗಳಿಗೆ ಬಿಗಿದು ಕಟ್ಟಿದಂತಾಗುತ್ತದೆ.

ಇದು ಭಾರತದ ಸಾರ್ವಭೌಮತೆಯನ್ನು ಸೀಮಿತಗೊಳಿಸುತ್ತದೆ, ನಮ್ಮ ಸಾಮರಿಕ ಸ್ವಾಯತ್ತೆಯನ್ನು ಕೆಡಿಸುತ್ತದೆ ಮತ್ತು ಭಾರತವನ್ನು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಒಬ್ಬ ಅಡಿಯಾಳು ಮಿಲಿಟರಿ ಮಿತ್ರನ ಮಟ್ಟಕ್ಕೆ ಇಳಿಸುತ್ತದೆ. ಇಂತಹ ಒಪ್ಪಂದಗಳಿಗೆ ಬಿಜೆಪಿ ಸಹಿ ಮಾಡಬಾರದು.

'ಫ್ರೀಬೇಸಿಕ್': 'ಫ್ರೀ'ನ್ನೂ ಇಲ್ಲ, 'ಬೇಸಿಕ್' ಕೂಡ ಇಲ್ಲ ಫೇಸ್‌ಬುಕ್‌ನ ದಿಕ್ಕುತಪ್ಪಿಸುವ ಜಾಹೀರಾತುಗಳು :

'ಗಣೇಶ್ ಎಂಬ ಬಡ ರೈತ ಉಚಿತ ಇಂಟರ್‌ನೆಟ್ ಸೌಲಭ್ಯ ಪಡೆದದ್ದರಿಂದ ಒಳ್ಳೆಯ ಬೇಸಾಯ ಪದ್ದತಿಗಳನ್ನು ಅಳವಡಿಸಿಕೊಂಡು ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ. ಆದ್ದರಿಂದ ಫೇಸ್‌ಬುಕ್ ಕಂಪನಿಯ ಫ್ರೀಬೇಸಿಕ್ ನ್ನು ಬೆಂಬಲಿಸಿ'

'ರಾಹುಲ್ ಎಂಬ ಬಡ ಇಂಜಿನಿಯರಿಂಗ್ ವಿದ್ಯಾರ್ಥಿಯು ಉಚಿತ ಇಂಟರ್‌ನೆಟ್ ಸೌಲಭ್ಯ ಪಡೆದದ್ದರಿಂದ ಉತ್ತಮ ಸಂಶೋಧಕನಾಗುತ್ತಿದ್ದಾನೆ. ಆದ್ದರಿಂದ ಫೇಸ್‌ಬುಕ್ ಕಂಪನಿಯ ಫ್ರೀಬೇಸಿಕ್ ನ್ನು ಬೆಂಬಲಿಸಿ'

ಇಂತಹ ಫೇಸ್‌ಬುಕ್ ಕಂಪನಿಯ ಹತ್ತಲವು ಜಾಹೀರಾತುಗಳು ಜನತೆಯ ಕಣ್ಣು ಕಿವಿಗಳ ಮೇಲೆ ದಾಂಗುಡಿಯಿಡುತ್ತಿವೆ. ಮತ್ತೊಂದೆಡೆ, ಫ್ರೀಬೇಸಿಕ್ ಯೋಜನೆಯು ಬಡ ರೈತರನ್ನು ಉದ್ದಾರ ಮಾಡುವುದಿರಲಿ, ಅದೊಂದು ಡಿಜಿಟಲ್ ಆತ್ಮಹತ್ಯೆಗೆ ಕಾರಣವಾಗುತ್ತದೆಂದು ನೆಟ್ ಬಳಕೆದಾರರು ಫೇಸ್‌ಬುಕ್ ಕಂಪನಿಯ ಹುನ್ನಾರದ ವಿರುದ್ದ ಆನ್‌ಲೈನ್ ಪ್ರತಿಭಟನೆಯಲ್ಲಿ ತೊಡಗಿದ್ದಾರೆ.

ವಿಶ್ವದ ಅತಿ ದೊಡ್ಡ ಜಾಲತಾಣಗಳ ಕಂಪನಿಗಳ ಪೈಕಿ ಫೇಸ್‌ಬುಕ್ ಕೂಡ ಒಂದು. ಇತ್ತೀಚೆಗೆ ಈ ಕಂಪನಿ ದೇಶದ ಇಂಗ್ಲೀಷ್ ಮತ್ತು ಎಲ್ಲ ರಾಜ್ಯದ ಭಾಷೆಗಳ ದಿನಪತ್ರಿಕೆಗಳಲ್ಲಿ ಕೋಟ್ಯಾಂತರ ಹಣ ಖರ್ಚು ಮಾಡಿ ಜಾಹೀರಾತುಗಳನ್ನು ಪ್ರಕಟಿಸಿ ಜನರ ಗಮನಸೆಳೆಯುತ್ತಿದೆ. ಅದು ಜನರ ದಿಕ್ಕುತಪ್ಪಿಸುತ್ತಿದೆ ಎಂದು ಹೇಳುವುದು ಸರಿಯಾಗುತ್ತದೆ! ತಾನು 'ಫ್ರೀಬೇಸಿಕ್' ಹೆಸರಿನಲ್ಲಿ ಭಾರತ ದೇಶದ ಬಡವರಿಗೆ ಇಂಟರ್‌ನೆಟ್ ಸೌಲಭ್ಯವನ್ನು ಉಚಿತವಾಗಿ ಕೊಡಲು ಸಿದ್ದವಿರುವುದಾಗಿಯೂ, ಇದಕ್ಕೆ ಎಲ್ಲರೂ ಬೆಂಬಲ ಕೊಡಬೇಕೆಂದು ಜಾಹೀರಾತಿನಲ್ಲಿ ಕೋರಿಕೊಂಡಿದೆ. ಅಲ್ಲದೇ, ಜಾಲದಲ್ಲಿ ಸಮಾನತೆ ಪರವಾಗಿರುವ ಹೋರಾಟಗಾರರು ಇದನ್ನು ವಿರೋಧಿಸುತ್ತಿದ್ದು, ಜನರನ್ನು ದಿಕ್ಕುತಪ್ಪಿಸುತ್ತಿದ್ದಾರೆಂದೂ ಹೇಳಿಕೊಳ್ಳುತ್ತಿದೆ. ಫೇಸ್‌ಬುಕ್ ಕಂಪನಿಯ ಜಾಹೀರಾತಿಗೆ ದೇಶದ ಸಾಮಾನ್ಯ ವಿದ್ಯಾವಂತರಷ್ಟೇ ಅಲ್ಲ ವಿಶ್ವವಿದ್ಯಾನಿಲಯದ ಉಪಕುಲಪತಿಗಳಂತಹ ವ್ಯಕ್ತಿಗಳೇ ಮರುಳಾಗಿ ಬೆಂಬಲ ನೀಡಿದ್ದಾರೆ!

ಭಾರತೀಯ ಟೆಲಿಕಾಂ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ವು ಫೇಸ್‌ಬುಕ್ ಕಂಪನಿಯ ಯೋಜನೆಗೆ ಅಸ್ತು ಎನ್ನಬೇಕಾದರೆ, ಆನ್‌ಲೈನ್ ಮೂಲಕ ನೆಟ್ ಬಳಕೆದಾರರು ಗರಿಷ್ಟ ಇ–ಮೇಲ್ ಗಳನ್ನು ಕಳುಹಿಸಿ ಬೆಂಬಲ ಪಡೆಯಬೇಕೆಂದು ಹೇಳಿದೆ. ಇದಕ್ಕಾಗಿ ಫೇಸ್‌ಬುಕ್ ಕಂಪನಿಯು ಕೋಟ್ಯಾಂತರ ಹಣ ವೆಚ್ಚ ಮಾಡಿ ಜನಸಾಮಾನ್ಯರನ್ನು ದಿಕ್ಕುತಪ್ಪಿಸಿ ಬೆಂಬಲ ಪಡೆಯುತ್ತಿದೆ. ಇದೇ ವೇಳೆ ಫ್ರೀ ಸಾಫ್ಟ್‌ವೇರ್ ಮೂವ್‌ಮೆಂಟ್ ಇಂಡಿಯಾ ದಂತಹ ಅನೇಕ ಸಂಘಟನೆಗಳು ಫೇಸ್‌ಬುಕ್ ಕಂಪನಿಯ ಯೋಜನೆಗೆ ಬೆಂಬಲ ನೀಡಬಾರದೆಂದು ದೇಶವ್ಯಾಪಿ ಆನ್‌ಲೈನ್ ಆಂದೋಲನ ನಡೆಸಿದ್ದಾರೆ. ಅಲ್ಲದೇ, ಹೈದರಾಬಾದ್, ಚೆನ್ನೈ, ಬೆಂಗಳೂರು ಇತ್ಯಾದಿ ನಗರಗಳಲ್ಲಿ ಧರಣಿ, ಪ್ರತಿಭಟನೆ ನಡೆಸಿದ್ದಾರೆ.

ಫ್ರೀಬೇಸಿಕ್ಸ್ ಯೋಜನೆ ಕಪಟತನ:

ಹೀಗಾಗಿ ಫೇಸ್‌ಬುಕ್ ನ ಕಪಟತನವನ್ನು ಅರಿಯಲು, ಮೊದಲಿಗೆ ಇಂಟರ್‌ನೆಟ್ ಅಥವಾ ಅಂತರ್ಜಾಲ ಕಾರ್ಯನಿರ್ವಹಿಸುವ ಬಗೆಯನ್ನು ಅರಿಯಬೇಕಾಗುತ್ತದೆ. ರಾಷ್ಟ್ರೀಯ ಹೆದ್ದಾರಿಯಂತೇ ಇಂಟರ್‌ನೆಟ್ ಕೂಡ ಒಂದು ರೀತಿ ಡಿಜಿಟಲ್ ಹೈವೇ. ರಾಷ್ಟ್ರೀಯ ಹೆದ್ದಾರಿಗೆ ಪ್ರವೇಶಿಸಬೇಕಾದರೆ (ಅದು ಕಾರು, ಸ್ಕೂಟರ್, ಬಸ್ಸು, ಏನೇ ಇರಲಿ) ನಾವು ಟೋಲ್ ಶುಲ್ಕ ಪಾವತಿಸಿ ಪಯಣಿಸುತ್ತೇವೆ. ಹೆದ್ದಾರಿಯನ್ನು ಪ್ರವೇಶಿಸಿದ ಮೇಲೆ ನಾವು ಯಾವುದೇ ಸ್ಥಳಕ್ಕಾಗಲಿ, ಹೋಟೆಲ್ಲಿಗಾಗಲಿ, ಊರಿಗಾಗಲಿ, ಹೋಗಲು ಸ್ವತಂತ್ರರು. ಆದ–ರೆ, ಫೇಸ್ ಬುಕ್ ಕಂಪನಿಯು ಇಂಟರ್‌ನೆಟ್ ವಿಷಯದಲ್ಲಿ ಮಾಡಹೊರಟಿರುವುದೇನೆಂದರೆ, ಪ್ರಯಾಣಿಕರು ಯಾವ ಸ್ಥಳ, ಹೋಟೆಲ್, ಅಥವಾ ಊರಿಗೆ ಹೋಗಬೇಕೆಂದು ತಾನೇ ನಿರ್ಧರಿಸಲು ಹೊರಟಿರುವುದು. ಇಂಟರ್‌ನೆಟ್ ಸೌಲಭ್ಯಕ್ಕೆ ಅಗತ್ಯವಿರುವ ಹಣವನ್ನು (ಅಂದರೆ ಟೋಲ್ ಶುಲ್ಕ ಎಂದಿಟ್ಟುಕೊಳ್ಳಿ) ತಾನೇ ಪಾವತಿಸುತ್ತೇನೆ, ಆಮೂಲಕ ಐದಾರು ಅಂತರ್ಜಾಲ ತಾಣಗಳನ್ನು ಮಾತ್ರ ಬಳಸುವ ಸೌಲಭ್ಯವನ್ನು ತಾನು ನೀಡುತ್ತೇನೆ ಎನ್ನುತ್ತಿದೆ ಫೇಸ್‌ಬುಕ್. ಇದರಿಂದ ಇಂಟರ್‌ನೆಟ್ ಎಂದರೆ ಕೇವಲ ಐದಾರು ಅಂತರ್ಜಾಲ ತಾಣಗಳು ಮಾತ್ರವೇ, ತನ್ನ ಕಂಪನಿಗಳ ಉತ್ಪನ್ನಗಳನ್ನು ಮಾರಾಟ ಮಾಡುವ ತಾಣಗಳು ಮಾತ್ರವೇ ಆಗಿಬಿಡುವ ಅಪಾಯವಿದೆ.

ಆದರೆ, ಇಂಟರ್‌ನೆಟ್‌ನ ಪೂರ್ಣ ಸಾಮರ್ಥ್ಯ ಇರುವುದು: ಕಂಪ್ಯೂಟರ್ ಮತ್ತು ಇಂಟರ್‌ನೆಟ್ ಸೌಲಭ್ಯ ಹೊಂದಿರುವ ಯಾರೇ ಆಗಲಿ ಕೇವಲ ಗ್ರಾಹಕರಾಗದೇ, ಸುದ್ದಿ ಮತ್ತು ಅನಿಸಿಕೆಗಳನ್ನು ಉತ್ಪಾದಿಸಲು ಇಂಟರ್‌ನೆಟ್ ಅವಕಾಶ ಕಲ್ಪಿಸುತ್ತದೆ. ಉದಾಹರಣೆಗೆ, ಯೂಟ್ಯೂಬ್ ಮತ್ತು ವೀಡಿಯೋ ಕ್ಯಾಮೆರಾವನ್ನು ಬಳಸಿಕೊಂಡು ಒಂದು ಟೆಲಿವಿಷನ್ ಸ್ಟೇಷನ್ ಶುರು ಮಾಡಬಹುದು! ಇಂಟರ್‌ನೆಟ್‌ನಲ್ಲಿ ಸುಮಾರು 100 ಕೋಟಿ ಜಾಲತಾಣಗಳಿದ್ದು, ಅದರಲ್ಲಿ 8.50 ಲಕ್ಷ ಕ್ರಿಯಾಶೀಲತೆಯಿಂದಿವೆ. ಇವೆಲ್ಲಾ ಜಾಲತಾಣಗಳ ವೇಗವನ್ನು ಕಡಿಮೆಗೊಳಿಸಿ, ಜನಸಾಮಾನ್ಯರನ್ನು ಕೇವಲ ಐದಾರು ಜಾಲತಾಣಗಳ ದಾಸರನ್ನಾಗಿ ಮಾಡುವ ಹುನ್ನಾರ ಫೇಸ್‌ಬುಕ್ ನದು. ಎಲ್ಲರಿಗೂ ಬೇಕಾಗಿರುವ 'ಪ್ರಾಥಮಿಕ' ('ಬೇಸಿಕ್ಸ್') ಜಾಲತಾಣಗಳು ಇವೆಯೇ? ಒಬ್ಬ ರೈತ, ವಿದ್ಯಾರ್ಥಿ, ಮಹಿಳೆಗೆ ಬೇಕಾದ 'ಪ್ರಾಥಮಿಕ' ('ಬೇಸಿಕ್ಸ್') ಜಾಲತಾಣಗಳು ಒಂದೆಯೇ? ಇದರ ನಿರ್ಣಯವನ್ನು ಫೇಸ್ ಬುಕ್ ಗೆ ಮಾತ್ರವಲ್ಲ ಯಾರಿಗೂ ಬಿಡಲು ಕೂಡದು. ಅದು ಅವರ ವೈಯಕ್ತಿಕ ನಿರ್ಣಯ ಆಗಬೇಕು.

'ಫ್ರೀ ಬೇಸಿಕ್ಸ್'ನಲ್ಲಿರುವ 'ಫ್ರೀ" (ಉಚಿತ) ವೂ ನಿಜವಲ್ಲ. ಫೇಸ್ ಬುಕ್ ಗ್ರಾಹಕರಿಗೆ 'ಫ್ರೀ' ಕೊಟ್ಟು ನಷ್ಟ ಮಾಡಿಕೊಳ್ಳುತ್ತಿಲ್ಲ. ಫೇಸ್ ಬುಕ್

ಪುಟ 10 ಕ್ಕೆ





ಮತ್ತೆ ಕೆಂಪಾಯಿತು ಕೊಲ್ಕತಾದ ಬ್ರಿಗೇಡ್ ಮೈದಾನ













ಡಿಸೆಂಬರ್ 27, 2015. ಕೊಲ್ಕತಾದ ಐತಿಹಾಸಿಕ ಬ್ರಿಗೇಡ್ ಮೈದಾನ ಮತ್ತೊಂದು ಮೈಲಿಗಲ್ಲನ್ನು ಕಂಡಿತು. ಹತ್ತು ಲಕ್ಕಕ್ಕೂ ಹೆಚ್ಚು ಮಂದಿ ನೆರೆದಿದ್ದ ಬೃಹತ್ ಬಹಿರಂಗ ಸಭೆ 'ನಾನು ನೋಡಿರುವ ಅತ್ಯಂತ ಉತ್ಸಾಹ ಭರಿತ ಬ್ರಿಗೇಡ್' ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಉದ್ಗರಿಸಿದರು. ಹೌದು , ಅವರೆಲ್ಲ, ಯೆಚೂರಿಯವರು ಹೇಳಿದಂತೆ, ಸಮಸ್ತ ದೇಶಕ್ಕೆ ದಾರಿ ತೋರಿಸಲು, ಒಂದು ಉತ್ತಮ ಬಂಗಾಲ ಮತ್ತು ಒಂದು ಉತ್ತಮ ಭಾರತ ನಿರ್ಮಿಸುವ ದಾರಿ ತೋರಿಸಲು ಬಂದಿದ್ದರು.

ಸಿಪಿಐ(ಎಂ)ಸ ಸಂಘಟನಾ ಪ್ಲೀನಮ್‌ಗೆ ಒಂದು ಉತ್ಸಾಹಭರಿತ ಆರಂಭವನ್ನು ನೀಡಿದ ಈ 'ಬ್ರಿಗೇಡ್ ಚಲೋ'ದ ಇಂತಹ ಭಾರೀ ಯಶಸ್ಸಿಗೆ ಪಶ್ಚಿಮ ಬಂಗಾಲದ ಸಿಪಿಐ(ಎಂ) ಕಾರ್ಯಕರ್ತರು ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ಶ್ರಮಿಸಿದ್ದಾರೆ, ರಾಜ್ಯದ ಮೂಲೆ–ಮೂಲೆಯನ್ನೂ ತಲುಪಿದ್ದಾರೆ. ಒಟ್ಟು 11,313 ಸಾಮೂಹಿಕ ಸಭೆಗಳನ್ನು, 11,269 ಮೆರವಣಿಗೆಗಳನ್ನು ನಡೆಸಿದ್ದಾರೆ. ರಾಜ್ಯದ ಹಲವೆಡೆಗಳಲ್ಲಿ ಟಿಎಂಸಿ ಗೂಡಾಗಳ ದಾಳಿಗಳನ್ನು ಯಶಸ್ವಿಯಾಗಿ ಎದುರಿಸಿದ್ದಾರೆ.

'ಒಂದು ಉತ್ತಮ ಬಂಗಾಲ ಮತ್ತು ಒಂದು ಉತ್ತಮ ಭಾರತ ನಿರ್ಮಿಸುವ ದಾರಿ ತೋರಿಸಲು 10ಲಕ್ಷಕ್ಕೂ ಹೆಚ್ಚು ಮಂದಿ ಬಂದಿದ್ದಾರೆ. ಆದರೆ ನಾವುಗಳೆಲ್ಲರೂ ಆ ಗುರಿ ಸಾಧಿಸಲು ಸಾಧನಗಳಾಗಬೇಕು. ಕೆಂಬಾವುಟದ ಎಡಪಕ್ಷಗಳು ಬಿಟ್ಟು ದೇಶವನ್ನು ಮನ್ನಡೆಸಬಲ್ಲ ಬೇರೆ ಯಾವ ಶಕ್ತಿಯೂ ಇಲ್ಲ, ವಿವಧ ಕೋಮುವಾದಿ ಶಕ್ತಿಗಳು ಎಡಪಂಥೀಯರನ್ನು ನಾಶ ಪಡಿಸ ಬಯಸಿದ್ದಾರೆ. ಆದರೆ ಅದನ್ನು ಮಾಡಬಲ್ಲ ಶಕ್ತಿ ಯಾರಿಗೂ ಇಲ್ಲ' ಎಂದು ಸೀತಾರಾಮ್ ಯೆಚುರಿ ಹೇಳಿದರು.

ಟಿಎಂಸಿ ಮುಖಂಡರು ಬಂಗಾಲದಿಂದ ಕೆಂಬಾವುಟಗಳನ್ನು ಅಳಿಸಿ ಹಾಕುವುದಾಗಿ ಹೇಳುತ್ತಿದ್ದರು, ಅದರೆ ಇಲ್ಲಿ ಕೆಂಬಾವುಟಗಳ ಟಡಿಯಲ್ಲಿ ನೆರದಿರುವ ಜನಸಮೂಹಗಳು ಅದು ಅಷ್ಟೊಂದು ಸುಲಭದ ಕೆಲಸವಲ್ಲ ಎಂದು ತೋರಿಸುತ್ತಿದ್ದಾರೆ ಎಂದರು ಬೃಂದಾ ಕಾರಟ್. ಏಕೆಂದರೆ ಜನಗಳ ಬದುಕನ್ನು ಶ್ರಿಮಂತಗೊಳಿಸಬಲ್ಲ ಪಯಾಯ ಕಾರ್ಯಸೂಚಿ ಇರುವುದು ಎಡಪಂಥೀಯರಲ್ಲಿ ಮಾತ್ರ.

ಎಡಶಕ್ತಿಗಳು ಮಾತ್ರವೇ ಏಕೈಕ ಪರ್ಯಾಯ ಎಂದು ತ್ರಿಪುರಾದ ಜನಪ್ರಿಯ ಮುಖ್ಯಮಂತ್ರಿ ಮಾಣಿಕ ಸರ್ಕಾರ್ ಕೂಡ ನೆನಪಿಸಿದರು. ಆದ್ದರಿಂದ ಇದೀಗ ನಾವು ನಮ್ಮನ್ನು ಸಂಘಟಿಸಿಕೊಳ್ಳಬೇಕಾಸದ ಸಮಯ. ಕಾರ್ಮಿಕರನ್ನು, ರೈತರನ್ನು, ವಿದ್ಯಾರ್ಥಿ–ಯುವಜನರನ್ನು ಸಂಘಟಿಸಬೇಕು. ಜನತೆಗೆ ಹೊಸ ಹಾದಿ ತೋರಿಸಬೇಕು. ಇದು ಪಶ್ಚಿಮ ಬಂಗಾಲದ ಜನತೆಯ ಪಾತ್ರವಿಲ್ಲದೆ ಸಾಧ್ಯವಿಲ್ಲ. ಬ್ರಿಗೇಡ್ ಮೈದಾನದಲ್ಲಿ ಜನಗಳ ಭಾಗವಹಿಸುವಿಕೆ ತೃಪ್ತಿಕರವಾಗಿದ್ದರೂ ಸಂತೃಪ್ತಿಗೆ ಅವಕಾಶವಿಲ್ಲ. ಇನ್ನೂ ಎಡರಂಗದಿಂದ ದೂರವಿರುವವರನ್ನು ಸಂಪರ್ಕಿಸಬೇಕು, ಅವರ ಮನ ಗೆಲ್ಲಬೇಕು ಎಂದು ಅವರು ಹೇಳಿದರು.

'ಬ್ರಿಗೇಡ್ ಮೈದಾನ ತುಂಬಿ ತುಳುಕುತ್ತಿದೆ, ಎಲ್ಲ ವಿಭಾಗಗಳಿಂದ, ರಾಜ್ಯದ ಎಲ್ಲ ಪ್ರದೇಶಗಳಿಂದ ಶ್ರಮ ಪಟ್ಟು ಬಂದಿದ್ದೀರಾ. ನೀವು ರಾಜ್ಯದಲ್ಲಿ ಹೊಸ ಮುಂಜಾವನ್ನು ತರಲು ಸಾಧ್ಯವಿದೆ' ಎಂದ ಪಶ್ಚಿಮ ಬಂಗಾಲದ ಎಡರಂಗದ ಅಧ್ಯಕ್ಷ ಬಿಮನ್ ಬಸು ರಾಜ್ಯದಲ್ಲಿ ಪ್ರಜಾಪ್ರಭುತ್ವವನ್ನು ಮತ್ತೆ ನೆಲೆಗೊಳಿಸುವುದು ಈಗ ನಮ್ಮ ಮೊದಲ ಕೆಲಸ ಎಂದರು.

ಜನವರಿಯಿಂದ ಒಂದು ಹೊಸ ಹೋರಾಟ ಆರಂಭವಾಗುತ್ತಿದೆ. ನಾವಿಲ್ಲ ಬಂದಿರುವುದು ನಮ್ಮ ಶಕ್ತಿಪ್ರದರ್ಶನಕ್ಕೆ ಅಲ್ಲ, ಈ ಸರಕಾರಕ್ಕೆ ಸವಾಲು ಹಾಕಲು ಎಂದರು ಇನ್ನೊಬ್ಬ ಪೊಲಿಟ್‌ಬ್ಯುರೊ ಸದಸ್ಯ ಮಹಮ್ಮದ್ ಸಲೀಮ್.


'ಬ್ರಿಗೇಡ್ ನಮಗೆ ಬಹಳ ಸಣ್ಣದು. ಜನತೆ ದೊಡ್ಡವರು. ತೃಣಮೂಲನ್ನು ತೊಲಗಿಸಿ, ಬಂಗಾಲವನ್ನು ಉಳಿಸಿ ಎಂಬುದೇ ಬ್ರಿಗೇಟ್‌ನ ಕರೆ. ಅದನ್ನು ಸಾಧಿಸಬೇಕು, ಪ್ರತಿ ಮನೆಯನ್ನು, ಮನವನ್ನು ತಲುಪಬೇಕು' ಎಂದರು ಪಶ್ಚಿಮ ಬಂಗಾಲ ಸಿಪಿಐ(ಎಂ) ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ.

'ಉತ್ತರ ಬಂಗಾಲದ ಚಹಾ ತೋಟಗಳಿಂದ ದಕ್ಕಿಣದ ಸುಂದರಬನ ಪ್ರದೇಶದ ವರೆಗಿನ ಎಲ್ಲ ಪ್ರದೇಶಗಳಿಂದ ಬಂದ ಜನರು ಈ ಚಾರಿತ್ರಿಕ ಬ್ರಿಗೇಡ್‌ನ್ನು ಸೇರಿದ್ದಾರೆ. ಜನತೆ ಒಂದು ಭವಿಸ್ಯದತ್ತ ನೋಡುತ್ತಿದ್ದಾರೆ. ವಿಧಾನ ಸಭಾ ಚುನಾವಣೆಯ ಸಮರವನ್ನು ನಾವು ಗೆಲ್ಲಬೇಕಾಗಿದೆ' ಎಂದು ಮಾಜಿ ಮುಖ್ಯಮಂತ್ರಿ ಬುದ್ಧದೇಬ್ ಭಟ್ಟಾಚಾರ್ಜಿ ಕರೆ ಕೊಟ್ಟರು.

ಪಶ್ಚಿಮ ಬಂಗಾಲದ ಜನ ಟಿಎಂಸಿ ಬೆದರಿಕೆಗೆ ಜಗ್ಗಿಲ್ಲ, ದೊಡ್ಡ ಸಂಖ್ಯೆಯಲ್ಲಿ ಬ್ರಿಗೇಡ್‌ನಲ್ಲಿ ಸೇರಿದ್ದಾರೆ ಎಂದು ಇನ್ನೊಬ್ಬ ಸಿಪಿಐ(ಎಂ) ಪೊಲಿಟ್‌ಬ್ಯುರೋ ಸದಸ್ಯ ಕೊಡಿಯೇರಿ ಬಾಲಕೃಷ್ಣನ್ ಕೇರಳದ ಪರವಾಗಿ ಅಭಿನಂದಿಸಿದರು.









ಜನಸಮೂಹಗಳ ಧೋರಣೆಯ ಕ್ರಾಂತಿಕಾರಿ ಪಕ್ಷದತ್ತ ಮುನ್ನಡೆಯೋಣ

–ಸಿಪಿಐ(ಎಂ) ಪ್ಲೀನಮ್‌ನ ಕರೆ

ಸಿಪಿಐ(ಎಂ)ನ 21ನೇ ಮಹಾಧಿವೇಶನದ ನಿರ್ದೇಶನದಂತೆ ಕೊಲ್ಕತಾದಲ್ಲಿ ನಡೆದ ಸಂಘಟನಾ ಪ್ಲೀನಮ್ ಡಿಸೆಂಬರ್ 31 ರಂದು ಯಶಸ್ವಿಯಾಗಿ ಪೂರ್ಣಗೊಂಡಿತು.

ಸಿಪಿಐ(ಎಂ) ಅಂಗೀಕರಿಸಿರುವ ರಾಜಕೀಯ –ಕಾರ್ಯತಂತ್ರಾತ್ಮಕ ಧೋರಣೆಗೆ ಅನುಗುಣವಾಗಿ ಪಕ್ಷದ ಸ್ವತಂತ್ರ ಶಕ್ತಿಯನ್ನು ಬೆಳೆಸಲು ಹೆಚ್ಚು ಬಲಿಷ್ಟವಾದ ಜನತೆಯ ಹೋರಾಟಗಳನ್ನು ಹರಿಯ ಬಿಟ್ಟು, ಪ್ರಸಕ್ತ ಸವಾಲುಗಳನ್ನು ಎದುರಿಸಲು ಪಕ್ಷದ ಸಂಘಟನಾ ಸಾಮರ್ಥ್ಯಗಳನ್ನು ಬಲಪಡಿಸಬೇಕು ಮತ್ತು ಸುಸಜ್ಜಿತಗೊಳಿಸಬೇಕು ಎಂದು ಈ ಪ್ಲೀನಮ್ ನಿರ್ಣಯ ಕೈಗೊಂಡಿದೆ.

ಇದನ್ನು ನೆರವೇರಿಸಲು ಪ್ಲೀನಮ್ ಈ ಕೆಳಗಿನ ನಿರ್ಧಾರಗಳನ್ನು ಮಾಡಿದೆ

* ಒಂದು ಜನಸಮೂಹಗಳ ಧೋರಣೆಯನ್ನು ಅಂಗೀಕರಿಸಿ ಪಕ್ಷದ ಸ್ವತಂತ್ರ ಶಕ್ತಿಯನ್ನು ಮತ್ತು ಮಧ್ಯಪ್ರವೇಶದ ಸಾಮರ್ಥ್ಯವನ್ನು ತ್ವರಿತವಾಗಿ ಹೆಚ್ಚಿಸಬೇಕು. ಎಡ ಐಕ್ಯತೆಯನ್ನು ಬಲಪಡಿಸಬೇಕು, ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗವನ್ನು ಒಂದು ಚುನಾವಣಾ ರಂಗವಾಗಿ ಮಾತ್ರವಲ್ಲ, ಪ್ರತಿಕ್ರಿಯಾವಾದಿ ಆಳುವ ವರ್ಗಗಳನ್ನು ಬದಿಗೊತ್ತಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಯ ಒಂದು ಹೋರಾಟಶೀಲ ರಂಗವಾಗಿಯೂ ಬೆಸೆಯಬೇಕು.

* ಐಕ್ಯತೆ ಮತ್ತು ಹೋರಾಟದ ದ್ವಿವಿಧ ಕರ್ತವ್ಯಗಳನ್ನು ನಿರ್ವಹಿಸಲು ಐಕ್ಯರಂಗದ ಕಾರ್ಯತಂತ್ರಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು. ಇದಕ್ಕಾಗಿ ಜಂಟಿ ಆಂದೋಲನಗಳನ್ನು ಬೆಳೆಸಬೇಕು, ಈ ಮೂಲಕ ಸದ್ಯದಲ್ಲಿ ಬಂಡವಾಳಶಾಹಿ ಪಕ್ಷಗಳ ಪ್ರಭಾವದಲ್ಲಿರುವ ಶೋಷಿತ ವರ್ಗಗಳ ವಿಭಾಗಗಳ ಬಳಿ ಸಾರಲು ಸಾಧ್ಯವಾಗಬೇಕು.

* ರಾಜಕೀಯ ಸನ್ನಿವೇಶದಲ್ಲಿ ಉಂಟಾಗಬಹುದಾದ ತ್ವರಿತ ಬದಲಾವಣೆಗಳನ್ನು ನಿರ್ವಹಿಸಲು ಪಕ್ಷದ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಗೆ ಅನುಗುಣವಾಗಿ ಅಗತ್ಯ ಕಾರ್ಯತಂತ್ರಗಳನ್ನು ಅನುಸರಿಸಬೇಕು.

* ವಿವಿಧ ಸಾಮಾಜಿಕ ಆಂದೋಲನಗಳು, ಜನಚಳುವಳಿಗಳು ಮತ್ತು ನಿರ್ದಿಷ್ಟ ಪ್ರಶ್ನೆಗಳನ್ನು ಆಧರಿಸಿದ ಆಂದೋಲನಗಳೊಂದಿಗೆ ಜಂಟಿ ವೇದಿಕೆಗಳನ್ನು ರಚಿಸಬೇಕು.

* ಚುನಾವಣಾ ಕಾರ್ಯತಂತ್ರಗಳನ್ನು ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗವನ್ನು ಕಟ್ಟುವುದಕ್ಕೆ ಆದ್ಯತೆ ಇರುವಂತೆ ರೂಪಿಸಬೇಕು.

* ವರ್ಗ ಮತ್ತು ಸಾಮೂಹಿಕ ಹೋರಾಟಗಳನ್ನು ಬಲಪಡಿಸಬೇಕು. ಇದಕ್ಕಾಗಿ

–ಭೂಮಾಲಕ–ಗ್ರಾಮೀಣ ಶ್ರೀಮಂತರ ಕೂಟದ ವಿರುದ್ಧ ಕೃಷಿ ಕೂಲಿಕಾರರು, ಬಡ ರೈತರು, ಮಧ್ಯಮ ರೈತರು, ಕೃಷಿಯೇತರ ವಿಭಾಗಗಳ ಗ್ರಾಮೀಣ ಕಾರ್ಮಿಕರು, ಕುಶಲಕರ್ಮಿಗಳು ಮತ್ತು ಇತರ ಗ್ರಾಮೀಣ ಬಡವರ ವಿಭಾಗಗಳ ಒಂದು ವಿಶಾಲ ರಂಗವನ್ನು ಬೆಸೆಯಬೇಕು.

–ಪ್ರಮುಖ ಮತ್ತು ಆಯಕಟ್ಟಿನ ಉದ್ದಿಮೆಗಳಲ್ಲಿ ಕಾರ್ಮಿಕರನ್ನು ಸಂಘಟಿಸಬೇಕು; ಸಂಘಟಿತ ಮತ್ತು ಅಸಂಘಟಿತ ವಲಯಗಳೆರಡರಲ್ಲೂ ಗುತ್ತಿಗೆ ಕಾರ್ಮಿಕರನ್ನು ಸಂಘಟಿಸಬೇಕು; ಕಾರ್ಮಿಕ ಸಂಘಗಳು, ಯುವಜನ, ಮಹಿಳೆಯರ ಸಂಘಟನೆಗಳು ಮುಂತಾದವುಗಳೊಂದಿಗೆ ಸಂಯೋಜಿಸಿಕೊಂಡು ಪ್ರದೇಶ–ಆಧಾರಿತ ಸಂಘಟನೆಗಳನ್ನು ಸ್ಥಾಪಿಸಬೇಕು.

–ನಗರಗಳ ಬಡಜನರನ್ನು ಕೇರಿ–ಸ್ಥಳಿಯ ಪ್ರದೇಶಗಳಲ್ಲಿ ಸಂಘಟಿಸಬೇಕು; ವೃತ್ತಿ–ಆಧಾರಿತ ಕೇರಿ–ಮೊಹಲ್ಲಾ–ನೆರೆಕರೆ ಸಮಿತಿಗಳನ್ನು ಸ್ಥಾಪಿಸಬೇಕು.

–ಮಧ್ಯಮ ವರ್ಗಗಳ ನಡುವೆ ಕೆಲಸವನ್ನು, ನಿರ್ದಿಷ್ಟವಾಗಿ ಸೈದ್ಧಾಂತಿಕ ಕೆಲಸವನ್ನು, ನಾಗರಿಕ ವೇದಿಕೆಗಳು, ಸಾಂಸ್ಕೃತಿಕ ಚಟುವಟಿಕೆಗಳು/ ಕ್ರಿಯೆಗಳನ್ನು, ವೈಜ್ಞಾನಿಕ ಮನೋಭಾವವನ್ನು ಮತ್ತು ಅವರ ಬದುಕು ಮತ್ತು ಕೆಲಸಕ್ಕೆ ಸಂಬಂಧಪಟ್ಟ ಕ್ರಿಯೆಗಳನ್ನು ಪ್ರಾಯೋಜಿಸುವ ವೇದಿಕೆಗಳು ಮುಂತಾದ ವಿವಿಧ ವೇದಿಕೆಗಳನ್ನು ಸ್ಥಾಪಿಸಿ ಬಲಪಡಿಸಬೇಕು. ನಿವಾಸಿ ಸಂಘಗಳು, ಪಿಂಚಣಿದಾರರ ಸಂಘಗಳು ಮತ್ತು ವೃತ್ತಿಪರ ಸಂಸ್ಥೆಗಳಲ್ಲಿ ಕೆಲಸವನ್ನು ಬಲಪಡಿಸಬೇಕು.

ಈ ಎಲ್ಲ ವಿಧಾನಗಳ ಮೂಲಕ ಸಿಪಿಐ(ಎಂ) ಇನ್ನಷ್ಟು ಶಕ್ತಿಶಾಲಿ ಸಾಮೂಹಿಕ ಮತ್ತು ವರ್ಗ ಹೋರಾಟಗಳನ್ನು ಹರಿಯ ಬಿಡುವ ಬಲ ಪಡೆಯಲು ಭಾರತೀಯ ಜನತೆಯೊಡನೆ ತನ್ನ ಸಂಪರ್ಕಗಳನ್ನು ಗಟ್ಟಿಗೊಳಿಸಿಕೊಳ್ಳಬೇಕು ಎಂದು ಪ್ಲೀನಮ್ ನಿರ್ಧರಿಸಿದೆ.

ಅಲ್ಲದೆ ಜನಗಳೊಡನೆ ಇಂತಹ ಜೀವಂತ ಕೊಂಡಿಗಳನ್ನು ಸ್ಥಾಪಿಸಲು ಸಾಧ್ಯವಾಗುವಂತೆ ಜನಸಾಮೂಹಿಕ ಧೋರಣೆಯನ್ನು ಪರಿಣಾಮಕಾರಿಯಾಗಿ ಅಂಗೀಕರಿಸಬೇಕು ಮತ್ತು ಜಾರಿಗೊಳಿಸಬೇಕು; ಪ್ರಜಾಸತ್ತಾತ್ಮಕ ಕ್ರಾಂತಿಯ ಅಕ್ಷವಾದ ಕರ್ಷಕ ಕ್ರಾಂತಿಯನ್ನು ನಡೆಸುವತ್ತ ಗಮನ ಕೇಂದ್ರಿಕರಿಸಬೇಕು, ಇದಕ್ಕಾಗಿ ಹೋರಾಟಗಳಲ್ಲಿ ಎಲ್ಲ ಗ್ರಾಮೀಣ ಶೋಷಿತ ಜನವಿಭಾಗಗಳ ಐಕ್ಯತೆಯನ್ನು ಬೆಸೆಯಬೇಕು ಹಾಗೂ ರೈತ–ಕಾರ್ಮಿಕ ಮೈತ್ರಿಯನ್ನು ಬಲಪಡಿಸಲು ಪ್ರಯತ್ನಗಳನ್ನು ನಡೆಸಬೇಕು ಎಂದೂ ನಿರ್ಧರಿಸಿದೆ.

ಈ ಕೆಳಗಿನ ಅಂಶಗಳ ಮೇಲೆ ಗಮನವನ್ನು ಕೇಂದ್ರೀಕರಿಸಬೇಕು ಎಂದು ಪ್ಲೀನಮ್ ನಿರ್ಧರಿಸಿದೆ

* ಪಕ್ಷದ ಪ್ರಭಾವವನ್ನು ವಿಸ್ತರಿಸಲು ಮತ್ತು ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಅಣಿನೆರೆಸಲು ಆರ್ಥಿಕ ಮತ್ತು ಸಾಮಾಜಿಕ ಪ್ರಶ್ನೆಗಳ ಮೇಲೆ ವರ್ಗ ಮತ್ತು ಸಾಮೂಹಿಕ ಹೋರಾಟಗಳನ್ನು ಬೆಸೆಯುವುದು.

* ಒಂದು ಜನಸಮೂಹಗಳ ಧೋರಣೆಯನ್ನು ಅಂಗೀಕರಿಸುವುದು ಮತ್ತು ಜನಗಳೊಡನೆ ಜೀವಂತ ಸಂಪರ್ಕಗಳನ್ನು ಸ್ಥಾಪಿಸುವುದು.

* ಉನ್ನತ ಗುಣಮಟ್ಟದ ಸದಸ್ಯರಿಂದ ಕೂಡಿದ ಒಂದು ಕ್ರಾಂತಿಕಾರಿ ಪಕ್ಷವನ್ನು ಕಟ್ಟಲು ಸಂಘಟನೆಯನ್ನು ಸುಸಜ್ಜಿತಗೊಳಿಸುವುದು.

* ಯುವಜನರನ್ನು ಪಕ್ಷಕ್ಕೆ ಸೆಳೆಯಲು ವಿಶೇಷ ಪ್ರಯತ್ನಗಳನ್ನು ನಡೆಸುವುದು.

* ಕೋಮುವಾದ, ನವ–ಉದಾರವಾದ ಮತ್ತು ಪ್ರತಿಕ್ರಿಯಾವಾದಿ ತತ್ವಸಿದ್ಧಾಂತಗಳ ವಿರುದ್ಧ ಸೈದ್ಧಾಂತಿಕ ಹೋರಾಟ ನಡೆಸುವುದು.

ಈ ಎಲ್ಲ ಕಾರ್ಯಭಾರಗಳನ್ನು ಪಕ್ಷದ ಕೇಂದ್ರ ಸಮಿತಿಯ ಕೇಂದ್ರದಿಂದ ಆರಂಭಿಸಿ ಸಮಯಬದ್ಧ ರೀತಿಯಲ್ಲಿ ಜಾರಿಗೊಳಿಸಬೇಕು, ರಾಜ್ಯಸಮಿತಿಗಳು ಇಂತಹ ಸಮಯಬದ್ಧ ಜಾರಿಯ ಯೋಜನೆಗಳನ್ನು ಒಂದು ವರ್ಷದ ಅವಧಿಯೊಳಗೆ ಮೂರ್ತಗೊಳಸಬೇಕು ಮತ್ತು ವಿಮರ್ಶಿಸಬೇಕು ಎಂದೂ ಸಿಪಿಐ(ಎಂ)ನ ಈ ಪ್ಲೀನಮ್ ನಿರ್ಧರಿಸಿದೆ.

"ಯಾವುದೇ ಸಾಮಾಜಿಕ ಪರಿವರ್ತನೆ ನಡೆಯುವುದು, ಅದನ್ನು ಪರಿಕಲ್ಪಿಸುವದು ಕೂಡ, ಎಲ್ಲ ಶೋಷಿತ ವರ್ಗಗಳಿಗೆ ಸೇರಿದ ವಿಶಾಲ ಜನಸಮೂಹಗಳು ಶೋಷಕ ಆಳುವ ವರ್ಗಗಳ ವಿರುದ್ಧ ಬಂಡೇಳದೆ ಸಾಧ್ಯವಾಗುವುದಿಲ್ಲ. ಅಂತಿಮವಾಗಿ, ಇತಿಹಾಸ ನಿರ್ಮಿಸುವವರು ಜನತೆಯೇ. ಕ್ರಾಂತಿಕಾರಿ ಇತಿಹಾಸವೂ ಇದಕ್ಕೆ ಅಪವಾದವಲ್ಲ. ಒಂದು ಕ್ರಾಂತಿಕಾರಿ ಪಕ್ಷ, ಸಿಪಿಐ(ಎಂ) ಜನತೆಯ ಈ ಮಹಾಜಾಗೃತಿಯ ಮುಂಚೂಣಿಯಾಗಿ ಮೂಡಿ ಬರಬೇಕು. ಇದು ನಮ್ಮ ಚಾರಿತ್ರಿಕ ಜವಾಬ್ದಾರಿ"

ಎಂದಿರುವ ಪ್ಲೀನಮ್

"ಈ ಪ್ಲೀನಮ್‌ನಲ್ಲಿ ಈ ಜವಾಬ್ದಾರಿಯನ್ನು ನಿಭಾಯಿಸುವ ನಮ್ಮ ದೃಢನಿರ್ಧಾರವನ್ನು ದ್ವಿಗುಣಗೊಳಿಸೋಣ.

ಅಖಿಲ ಭಾರತ ಸಾಮೂಹಿಕ ನೆಲೆಯ ಬಲಿಷ್ಟ ಸಿಪಿಐ(ಎಂ)ನತ್ತ ಮುನ್ನಡೆಯೋಣ

ಒಂದು ಜನಸಾಮೂಹಿಕ ಧೋರಣೆಯ ಕ್ರಾಂತಿಕಾರಿ ಪಕ್ಷದತ್ತ ಮುನ್ನಡೆಯೋಣ"

ಎಂದು ಕರೆ ನೀಡಿದೆ.

ಸಿಪಿಐ(ಎಂ)ನ ಸಂಘಟನಾ ಪ್ಲೀನಮ್ ಡಿಸೆಂಬರ್ 27ರ ಸಂಜೆ ಪ್ರಮೋದ್ ದಾಸ್‌ಗುಪ್ತ ಭವನದಲ್ಲಿ ಆರಂಭವಾಯಿತು. ಪೊಲಿಟ್‌ಬ್ಯುರೊ ಸದಸ್ಯರೂ, ತ್ರಿಪುರಾದ ಜನಪ್ರಿಯ ಮುಖ್ಯಮಂತ್ರಿಗಳೂ ಆದ ಮಾಣಿಕ್ ಸರ್ಕಾರ್‌ರವರ ನೇತೃತ್ವದ ಅಧ್ಯಕ್ಷ ಮಂಡಳಿ ಕಲಾಪಗಳಿಗೆ ಚಾಲನೆ ನೀಡಿತು.

ಪೊಲಿಟ್‌ಬ್ಯುರೊ ಸದಸ್ಯರಾದ ಪ್ರಕಾಶ ಕಾರಟ್ ಸಂಘಟನೆ ಕುರಿತ ಪ್ಲೀನಮ್‌ನ ಕರಡು ವರದಿಯನ್ನು ಮಂಡಿಸಿದರು. ಮರುದಿನ ಬೆಳಿಗ್ಯೆ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು 'ಸಂಘಟನೆ ಕುರಿತ ಕರಡು ನಿರ್ಣಯ'ವನ್ನು ಮಂಡಿಸಿದರು.

ನಂತರ ಇವೆರಡೂ ದಸ್ತಾವೇಜುಗಳ ಮೇಲೆ ಚರ್ಚೆ ಆರಂಭವಾಯಿತು. ಡಿಸೆಂಬರ್ 30ರ ವರಗೆ ನಡೆದ ಚರ್ಚೆಯಲ್ಲಿ ಒಟ್ಟು 62 ಪ್ರತಿನಿಧಿಗಳು ಭಾಗವಹಿಸಿದರು. ಕರ್ನಾಟಕದಿಂದ ಜಿ.ಎನ್.ನಾಗರಾಜ್ ಮತ್ತು ಎಸ್. ವರಲಕ್ಷ್ಮಿ ಮಾತನಾಡಿದರು. ಕರ್ನಾಟಕದ ಇತರ ಪ್ರತಿನಿಧಿಗಳೆಂದರೆ ವಿಜೆಕೆ ನಾಯರ್, ವಸಂತ ಆಚಾರಿ, ಬಿ.ಎನ್. ಉಮೇಶ್ ಮತ್ತು ಮುನಿವೆಂಕಟಪ್ಪ.





ಕರಡು ಸಂಘಟನಾ ವರದಿಗೆ ಒಟ್ಟು 191 ತಿದ್ದುಪಡಿಗಳು ಮತ್ತು ಸೂಚನೆಗಳು ಬಂದವು. ಇವುಗಳಲ್ಲಿ 36ನ್ನು ಸ್ವೀಕರಿಸಲಾಯಿತು. ಕರಡು ಸಂಘಟನಾ ನಿರ್ಣಯದ ಮೇಲೆ 73 ತಿದ್ದುಪಡಿಗಳು ಮತ್ತು ಸೂಚನೆಗಳು ಬಂದವು. ಇವುಗಳಲ್ಲಿ 6ನ್ನು ಸ್ವೀಕರಿಸಲಾಯಿತು.

ಚರ್ಚೆಗೆ ಉತ್ತರದ ನಂತರ ಈ ತಿದ್ದುಪಡಿಗಳೊಂದಿಗೆ ಸಂಘಟನಾ ವರದಿ ಮತ್ತು ಸಂಘಟನಾ ನಿರ್ಣಯವನ್ನು ಸರ್ವಾನುಮತದಿಂದ ಸ್ವೀಕರಿಸುವುದರೊಂದಿಗೆ ಸಂಘಟನಾ ಪ್ಲೀನಮ್ ಯಶಸ್ವಿಯಾಗಿ ಸಮಾಪನಗೊಂಡಿತು.

ಈ ಚರ್ಚೆಗಳ ನಡುವೆ ಮೂರು ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಲಾಯಿತು.'ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಶತಮಾನೋತ್ಸವ ಆಚರಿಸಿ' ಎಂದು ಕರೆ ಕೊಡುವ ನಿರ್ಣಯವನ್ನು ಎಂ.ಎ.ಬೇಬಿಯವರು ಮಂಡಿಸಿದರು, ಆರ್.ಅರುಣ್ ಕುಮಾರ್ ಅನುಮೋದಿಸಿದರು. 'ತ್ರಿಪುರಾದ ಎಡರಂಗ ಸರಕಾರದ ಸಾಧನೆಗಳು' ಕುರಿತ ನಿರ್ಣಯವನ್ನು ಬೃಂದಾ ಕಾರಟ್ ಮಂಡಿಸಿದರು, ಜಿ.ರಾಮಕೃಷ್ಣನ್ ಅದನ್ನು ಅನುಮೋದಿಸಿದರು. 'ಪಶ್ಚಿಮ ಬಂಗಾಲದಲ್ಲಿನ ಸನ್ನಿವೇಶ' ಕುರಿತ ನಿರ್ಣಯವನ್ನು ಕೊಡಿಯೇರಿ ಬಾಲಕೃಷ್ಣನ್ ಮಂಡಿಸಿದರು, ಅಶೋಕ ಧವಳೆ ಅದನ್ನು ಅನುಮೋದಿಸಿದರು.



ಮಾಧ್ಯಮ ಮಂಥನ

ಅಪ್ಪನ ಹುಟ್ಟುಹಬ್ಬ + ಮಗನ ಸಿನಿಮಾ ಎಂಟ್ರಿ ಸುದ್ದಿ...

ಯಾವ ವಿಚಾರಕ್ಕೆ ಆದ್ಯತೆ ನೀಡಬೇಕು ಎಂಬ ವಿಚಾರದಲ್ಲಿ ಮುಖ್ಯವಾಹಿನಿ ಮಾಧ್ಯಮಗಳು -ಪತ್ರಿಕೆಗಳು ಹಾಗೂ ಟಿವಿ ಚಾನೆಲ್‌ಗಳು- ತಮ್ಮ ಧೋರಣೆಯನ್ನು ಬದಲಾಯಿಸಿಕೊಳ್ಳುವುದೇ ಇಲ್ಲ ಎಂಬುದನ್ನು ಈಗೊಂದು ವಾರದ ವಿದ್ಯಮಾನಗಳನ್ನು ಅವಲೋಕಿಸಿದಾಗ ಸ್ಪಷ್ಟವಾಗುತ್ತದೆ. 'ಹೊಸ ಸಮಾಜದ ನಿರ್ಮಾಣಕ್ಕಾಗಿ', 'ಭರವಸೆಯ ಬೆಳಕು' ಎಂಬಿತ್ಯಾದಿಯಾದ ಘೋಷಣೆಗಳನ್ನು ಹೊಂದಿದ್ದರೂ ಬಂಡವಾಳಶಾಹಿ ವ್ಯವಸ್ಥೆಯ ಎಲ್ಲಾ ಬಗೆಯ ಅನ್ಯಾಯಗಳನ್ನು ಸ್ಥಾಯಿಗೊಳಿಸಲೇ ನಾವು ಕೆಲಸ ಮಾಡುವುದು ಎಂಬುದನ್ನು ಅವು ಸಾರಿ ಹೇಳುತ್ತಿವೆ.

ಜನತೆಯ ಬದುಕು-ಭಾಷೆ ಹಸನಾಗಬೇಕಾದರೆ ಬಂಡವಾಳಶಾಹಿ ವ್ಯವಸ್ಥೆಯ ಮಿತಿಯ ಒಳಗಡೆಯೇ ಏನೆಲ್ಲಾ ಕೆಲಸಗಳು ಆಗಬೇಕು, ಮಾಡಲು ಸಾಧ್ಯ ಎನ್ನುವುದನ್ನು ಗುರುತಿಸುವಲ್ಲಿ ಕಾರ್ಪೊರೇಟ್ ಹಿಡಿತದಲ್ಲಿರುವ ಮಾಧ್ಯಮಗಳು ವಿಫಲವಾಗಿರುವುದನ್ನು ಈ ಬೆಳವಣಿಗೆಗಳು ತೋರಿಸುತ್ತವೆ.

ವೈಜ್ಞಾನಿಕ ಆಧಾರದೊಂದಿಗೆ ಭಾಷಾವಾರು ರಾಜ್ಯಗಳು ರಚನೆಯಾಗಿ ಆರು ದಶಕಗಳು ಪೂರ್ಣಗೊಂಡ ಸಂದರ್ಭವನ್ನು ಗುರುತಿಸುವಲ್ಲಿ ಕರ್ನಾಟಕದಲ್ಲಿನ ಮಾಧ್ಯಮಗಳು, ಸಾಹಿತ್ಯ ವಲಯ, ತಥಾಕಥಿತ ಕನ್ನಡಪರ ಸಂಘಟನೆಗಳು ಮತ್ತು ಸರಕಾರವೂ ವಿಫಲವಾಗಿರುವಾಗ ಅದನ್ನು ಗುರುತಿಸಿ ಅರ್ಥಪೂರ್ಣ ರೀತಿಯಲ್ಲಿ ಆಚರಿಸಲು ಮುಂದಾಗಿದ್ದು ದುಡಿಯುವ ಜನರ ಪ್ರಾಣಮಿತ್ರ 'ಜನಶಕ್ತಿ' ವಾರಪತ್ರಿಕೆ.

'ಭಾಷಾವಾರು ರಾಜ್ಯಗಳ ಅಧಿಕಾರಗಳ ಸವೆತ' ಸುದ್ದಿ ಅಲ್ಲ

ಡಿಸೆಂಬರ್ 13 ರಂದು ಜನಶಕ್ತಿ ಉತ್ಸವದ ಅಂಗವಾಗಿ ಅದು ಏರ್ಪಡಿಸಿದ್ದ 'ಭಾಷಾವಾರು ರಾಜ್ಯಗಳ ಅಧಿಕಾರಗಳ ಸವೆತ' ವಿಚಾರ ಸಂಕಿರಣ ಒಂದು ಮಹತ್ವದ ಕಾರ್ಯಕ್ರಮವಾಗಿತ್ತು. ಅಧಿಕಾರದ ಕೇಂದ್ರಬಿಂದು ವಿಧಾನಸೌಧದ ಪಾಸಲೆಯಲ್ಲೇ ಇರುವ ಸೆಕ್ರೆಟಾರಿಯೇಟ್ ಕ್ಲಬ್‌ನಲ್ಲಿ ಈ ಸಂಕಿರಣ ನಡೆಯಿತು. ಸ್ವಾತಂತ್ರ್ಯ ಹೋರಾಟದ ಜತೆಯಲ್ಲೆ ಬೆಸೆದುಕೊಂಡು ಬಂದ ಭಾಷಾವಾರು ರಾಜ್ಯ ರಚನೆಯ ಪರಿಕಲ್ಪನೆ ಹಾಗೂ ಅದರ ಮಹತ್ವವನ್ನು ನೆನಪಿಸಿಕೊಳ್ಳುತ್ತಲೇ ಕರ್ನಾಟಕವೂ ಸೇರಿದಂತೆ ಭಾಷಾವಾರು ರಾಜ್ಯಗಳ ಇಂದಿನ ಸ್ಥಿತಿ ಏನಾಗಿದೆ, ಒಕ್ಕೂಟ ವ್ಯವಸ್ಥೆ ಇದ್ದರೂ ರಾಜ್ಯಗಳು ಯಾವ ರೀತಿಯಲ್ಲಿ ಕೇಂದ್ರದ ಅಡಿಯಾಳಾಗಿ ಇರಬೇಕಾದ ಸನ್ನಿವೇಶ ನಿರ್ಮಾಣವಾಗಿದೆ ಇತ್ಯಾದಿ ಗಂಭೀರ ವಿಚಾರಗಳನ್ನು ಸಂಕಿರಣದಲ್ಲಿ ಚರ್ಚಿಸಲಾಯಿತು. ಕೇರಳದ ಮಾಜಿ ಸಚಿವ ಎಂ.ಎ. ಬೇಬಿ, ಕಲಬುರ್ಗಿ ಕೇಂದ್ರೀಯ ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿ ಪ್ರೊ. ಎಸ್. ಚಂದ್ರಶೇಖರ್, ಮಾಜಿ ಶಾಸಕ ಜಿ.ವಿ. ಶ್ರೀರಾಮರೆಡ್ಡಿ, ಚಿಂತಕ ಜಿ.ಎನ್. ನಾಗರಾಜ್, ಹಿರಿಯ ಕಾರ್ಮಿಕ ಮುಖಂಡ ವಿ.ಜೆ.ಕೆ. ನಾಯರ್ ಮೊದಲಾದವರು ರಾಜ್ಯಗಳ ಅಧಿಕಾರಗಳಿಗೆ ಬಂದಿರುವ ಕುತ್ತು, ಜನರ ಜೀವನ ಎದುರಿಸುತ್ತಿರುವ ಅಡ್ಡಿ ಆತಂಕಗಳು ಮುಂತಾದ ಸಂಗತಿಗಳನ್ನು ವಿವರವಾಗಿ ತೆರೆದಿಟ್ಟರು.

ಆದರೆ ಯಾವುದೇ ಟಿವಿ ವಾಹಿನಿಗೆ ಇದೊಂದು ಪ್ರಸಾರ ಮಾಡಬೇಕಾದ ಸುದ್ದಿ ಎನಿಸಲಿಲ್ಲ. ಹೋಗಲಿ, ಮರುದಿನ ಪತ್ರಿಕೆಗಳಲ್ಲಾದರೂ ಈ ಬಗ್ಗೆ ವರದಿಗಳು ಬರಬಹುದು ಎಂಬ ನಿರೀಕ್ಷೆಯೂ ಸುಳ್ಳಾಯಿತು.

ಆದರೆ, ಅದೇ ದಿನ ಅಂದರೆ ಡಿಸೆಂಬರ್ 13 ರಂದು 'ಕಲಿ' ಎಂಬ ಸಿನಿಮಾದ ಟೈಟಲ್ ಲಾಂಚ್ ಕಾರ್ಯಕ್ರಮ ಅದು ರಾತ್ರಿಹೊತ್ತು ನಡೆದರೂ ಚಾನೆಲ್‌ಗಳಲ್ಲಿ ಪ್ರಸಾರವಾದವು, ಮರುದಿನ ಪತ್ರಿಕೆಗಳ ಮುಖಪುಟಗಳಲ್ಲೇ ಅದರ ಸುದ್ದಿ ರಾರಾಜಿಸಿದವು. ಶಿವರಾಜ್‌ಕುಮಾರ್ ಮತ್ತು ಸುದೀಪ್ ಒಟ್ಟಾಗಿ ನಟಿಸುತ್ತಾರೆ ಹಾಗೂ ಇದು ನೂರು ಕೋಟಿ ರೂಪಾಯಿ ಬಜೆಟ್‌ನ ಸಿನಿಮಾ ಎನ್ನುವುದು ಮಾಧ್ಯಮಗಳ ಸಂಭ್ರಮಕ್ಕೆ ಕಾರಣವಾಗಿತ್ತು!

ಅಪ್ಪನ ಹುಟ್ಟುಹಬ್ಬ ಪ್ಲಸ್ ಮಗನ ಸಿನಿಮಾ ಎಂಟ್ರಿ.. ಸಂಭ್ರಮದ ಸುದ್ದಿ

ಅದಾದ ಮೂರನೇ ದಿನ ಅಂದರೆ ಡಿಸೆಂಬರ್ 16ರಂದು ಮಾಜಿ ಮುಖ್ಯಮಂತ್ರಿ ಹಾಗೂ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿಯವರ 57ನೇ ಹುಟ್ಟುಹಬ್ಬ (ಮತ್ತು) . **ಅದೇ ಸಂದರ್ಭದಲ್ಲಿ** ಅವರ



ಮಗ ಸಿನಿಮಾ ಕ್ಷೇತ್ರಕ್ಕೆ ಕಾಲಿಡುವ ಕಾರ್ಯಕ್ರಮ. ಕುಮಾರಸ್ವಾಮಿ ಕುಟುಂಬದ **ಮಾಲಿಕತ್ವದ ಚಾನೆಲ್‌ನಲ್ಲಿ ಬೆಳಗ್ಗಿನಿಂದಲೇ ಕ್ಷಣ ಕ್ಷಣದ ಮಾಹಿತಿಯ ಪ್ರಸಾರ. ಹೌದು, ತಮ್ಮದೇ** ಮಾಲಿಕತ್ವದ ಚಾನೆಲ್‌ನಲ್ಲಿ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಯಿತು ಎಂದರೆ ಅದು ಸ್ವಲ್ಪ ಮಟ್ಟಿಗೆ ಸಹ್ಯ ಎಂದು ಹೇಳಬಹುದೇನೋ. ಆದರೆ ಆ ದಿನ ಆಗಿದ್ದೇನು? ಇರುವ ಎಲ್ಲಾ ಕನ್ನಡ ಚಾನೆಲ್‌ಗಳ ಪೈಕಿ ಒಂದೋ ಎರಡೋ ವಾಹಿನಿಗಳನ್ನು ಹೊರತುಪಡಿಸಿದರೆ ಉಳಿದಂತೆ ಎಲ್ಲಾ ವಾಹಿನಿಗಳು ಈ 'ಸಂಭ್ರಮ'ದ ನೇರ ಪ್ರಸಾರದಲ್ಲಿ ತೊಡಗಿಕೊಂಡಿದ್ದವು. ಇರುವ ಒಂದು ಇಂಗ್ಲಿಷ್ ಚಾನೆಲ್ ಕೂಡ ಇದರಿಂದ ಹೊರತಾಗಿರಲಿಲ್ಲ.

ಕುಮಾರಸ್ವಾಮಿಯವರ ಮಗ ಚಿತ್ರರಂಗಕ್ಕೆ ಕಾಲಿಟ್ಟಿದ್ದರಿಂದ ಇಡೀ ರಾಜ್ಯದ ಜನರ, ಯುವಜನರ ಭಾಗ್ಯದ ಬಾಗಿಲು ತೆರೆಯಿತೇನೋ ಎನ್ನುವ ಪರಿಯಲ್ಲಿ ಕಾರ್ಯಕ್ರಮವನ್ನು ಬಿತ್ತರಿಸಲಾಯಿತು. ಮರುದಿನ ಪತ್ರಿಕೆಗಳ ವರದಿಗಳೂ ಹಾಗೇ ಇದ್ದವು.

ನೋಡಿ, ಅವರದೇ ಕುಟುಂಬದ ಚಾನೆಲ್ ಇದ್ದರೂ ನಾವೆಲ್ಲ ಅವರ ಕಾರ್ಯಕ್ರಮವನ್ನೂ ಗರಿಷ್ಠ ಕಾಳಜಿಯೊಂದಿಗೆ ಪ್ರಸಾರ ಮಾಡಿ 'ನಿಷ್ಪಕ್ಷಪಾತಿ ಧೋರಣೆ' ಪ್ರದರ್ಶಿಸಿದ್ದೇವೆ ಎಂದೇನಾದರೂ ಇತರ ಚಾನೆಲ್‌ಗಳು ಹೇಳಿಕೊಳ್ಳುತ್ತವೋ ಏನೋ ಗೊತ್ತಿಲ್ಲ.

ಈ ನಡುವೆ, ಲಕ್ಷಾಂತರ ಜನರ ಬದುಕಿನೊಂದಿಗೆ ಸಂಬಂಧ ಹೊಂದಿರುವ ರೇಷ್ಮೆ ಬೆಳೆಗಾರರ ಬವಣೆಯ ಬಗ್ಗೆ 15 ರಂದು ನಡೆದ ಸಾವಿರಾರು ರೈತರ ವಿಧಾನಸೌಧ ಚಲೋ ಕಾರ್ಯಕ್ರಮ ಚಾನೆಲ್‌ಗಳಿಗೆ ಕಾಣಿಸಲಿಲ್ಲ. ಮರುದಿನದ ಪತ್ರಿಕೆಗಳಲ್ಲಿ ಅಲ್ಪಸ್ವಲ್ಪ ಸಚಿತ್ರ ವರದಿ ಪ್ರಕಟವಾದವು ಎನ್ನುವುದು ಸಮಾಧಾನದ ಸಂಗತಿ.

ಅದೇ ರೀತಿ, ಮೌಢ್ಯವನ್ನು ಪ್ರತಿಪಾದಿಸುವ ಎಡೆಸ್ನಾನಕ್ಕೆ ಪ್ರತಿರೋಧವಾಗಿ ನಡೆದ ಪ್ರತಿಭಟನಾ ಚಳವಳಿಗಳು ಕೂಡ ಪತ್ರಿಕೆಗಳಿಗೂ ಬೇಡವಾಯಿತು, ಇಲೆಕ್ಟ್ರಾನಿಕ್ ಮಾಧ್ಯಮಕ್ಕೂ ಬೇಡವಾಯಿತು. ಸ್ವಲ್ಪ ಸಮಾಧಾನ ಪಡುವ ಸಂಗತಿಯೆಂದರೆ ಒಂದೇ ಒಂದು ವಾಹಿನಿ (ರಾಜ್ ನ್ಯೂಸ್) ಆ ದಿನ ಒಂದು ಪ್ಯಾನೆಲ್ ಚರ್ಚೆ ಏರ್ಪಡಿಸಿತ್ತು. ಅದು ಮೌಢ್ಯವನ್ನು ಪ್ರತಿಪಾದಿಸುವವರ ಮುಖವಾಡವನ್ನು ಬಯಲು ಮಾಡುವಲ್ಲಿ ನೆರವಾಗುವಂತಿತ್ತು.

ಈ ರೀತಿಯಾಗಿ ಗಮನಿಸುತ್ತಾ ಹೋದರೆ ಮಾಧ್ಯಮಗಳು ಒಟ್ಟಾರೆಯಾಗಿ ಸಮಾಜಕ್ಕೆ ಹಿತಬಯಸುವ ಶಕ್ತಿಗಳ ಚಟುವಟಿಕೆಗಳನ್ನು ನಿರ್ಲಕ್ಷಿಸುತ್ತಾ ಸಮಾಜದಲ್ಲಿ ಭ್ರಮೆಯನ್ನು ಹುಟ್ಟಿಸುವ ಪ್ರಕ್ರಿಯೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡುವುದು ಕಂಡುಬರುತ್ತದೆ. **– ವಿಶ್ವಾಸ್**

ಫೇಸ್‌ಬುಕ್‌ನ ದಿಕ್ಕುತಪ್ಪಿಸುವ ಜಾಹೀರಾತುಗಳು.. ಪುಟ 7 ರಿಂದ

ಜಾಹಿರಾತುಗಳ ಆದಾಯ ಮಾತ್ರವಲ್ಲ, ಅದು ಆಯ್ಕೆ ಮಾಡುವ ಐದಾರು ಜಾಲತಾಣಗಳಿಂದಲೂ ಹಣ ವಸೂಲಿ ಮಾಡುತ್ತದೆ. ಗ್ರಾಹಕರು ಸಹ ಅವರು ಕೊಡುವ 'ಪ್ರಾಥಮಿಕ' ಜಾಲತಾಣಗಳು ಸಾಕಾಗದೆ ದುಬಾರಿ ಬೆಲೆ ಕೊಟ್ಟು ಬೇರೆ ಜಾಲತಾಣಗಳನ್ನು ನೋಡುತ್ತಾರೆ.

ಹೀಗೆ ಫೇಸ್ ಬುಕ್ ನ 'ಫ್ರೀ ಬೇಸಿಕ್ಸ್' 'ಫ್ರೀ'ನೂ ಅಲ್ಲ. 'ಬೇಸಿಕ್ಕೂ' ಅಲ್ಲ.

'ಜಾಲದಲ್ಲಿ ಸಮಾನತೆ'ಯ ಪ್ರಾಮುಖ್ಯತೆ:

'ಜಾಲದಲ್ಲಿ ಸಮಾನತೆ' ಅಥವಾ 'Net Neutrality' ಸಮಸ್ಯೆಯು ಬಹಳ ಸಂಕೀರ್ಣ ವಿಷಯದಂತೆಯೂ, ಕೇವಲ ನೆಟ್ ಬಳಕೆದಾರರಿಗೆ ಮಾತ್ರವೇ ಸಂಬಂಧಿಸಿರುವಂತೆಯೂ ಮೇಲ್ನೋಟಕ್ಕೆ ಕಾಣುತ್ತಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಇಂಟರ್ ನೆಟ್ ಮೇಲಿನ ನಿಯಂತ್ರಣಕ್ಕಾಗಿ ನಡೆಯುತ್ತಿರುವ ಕಾಳಗದ ರಣಭೂಮಿಯೇ 'ಜಾಲದಲ್ಲಿ ಸಮಾನತೆ' ಎಂಬ ಪರಿಕಲ್ಪನೆ. ಅಂ-ದರೆ, ಭೌತಿಕ ನೆಟ್‌ವರ್ಕ್‌ಗಳ ಮಾಲೀಕತ್ವ ಹೊಂದಿರುವವರು ಅಥವಾ ನಿಯಂತ್ರಿಸುತ್ತಿರುವವರು, ಆ ನೆಟ್‌ವರ್ಕ್‌ಗಳ ಮೇಲೆ ಹರಿಯುವ ಇಂಟರ್‌ನೆಟ್ ಮುಖೇನಾ ಒದಗಿಸಲಾಗುವ ವಿವಿಧ ರೀತಿಯ ಸೇವೆಗಳು ಅಥವಾ ಜಾಲತಾಣಗಳ ನಡುವೆ ತಾರತಮ್ಯ ಮಾಡಬಾರದು. ಇದು ತಾರತಮ್ಯ-ರಹಿತ ತತ್ವವಾಗಿದ್ದು, ತಂತಿಗಳ ಮೇಲೆ ಏಕಸ್ವಾಮ್ಯ ಹೊಂದಿರುವ ಟೆಲಿಕಾಂ ಕಂಪನಿಗಳು ಅಥವಾ ತರಂಗಗಳ ಮೇಲೆ ಏಕಸ್ವಾಮ್ಯ ಹೊಂದಿರುವ ಮೊಬೈಲ್ ಕಂಪನಿಗಳು ಬಳಕೆದಾರರದಿಂದ ಅಗಾಧ ಪ್ರಮಾಣದ ಶುಲ್ಕ ವಿಧಿಸುವುದನ್ನು ತಡೆಯುತ್ತದೆ. ಇದಕ್ಕಾಗಿ: ಎಲ್ಲಾ ಜಾಲ ತಾಣ ಬಳಸುವುದಕ್ಕೂ ಸಮಾನ ಅವಕಾಶ, ಒಂದೇ ತೆರನಾದ ವೇಗ, ಮತ್ತು ಒಂದೇ ದತ್ತಾಂಶ ವೆಚ್ಚ ಇರಬೇಕು. ಜಾಲದಲ್ಲಿ ಸಮಾನತೆ ಎಂದರೆ, ಟೆಲಿಕಾಂ ಕಂಪನಿಗಳಿಗೆ ವೆಬ್ ಸೈಟ್ ಹೊಂದಿರುವ ಕಂಪನಿಗಳು ಹಣ ನೀಡಲಿ ಅಥವಾ ನೀಡದಿರಲಿ, ಎಲ್ಲ ವೆಬ್ ಸೈಟ್ ಡೌನ್ ಲೋಡ್ ವೇಗ ಒಂದೇ ಇರಬೇಕು.

ಈ ಹಿನ್ನೆಲೆಯಲ್ಲಿ ಭಾರತೀಯ ಟೆಲಿಕಾಂ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ವು ಟೆಲಿಕಾಂ ಕಂಪನಿಗಳು ಮತ್ತು ಅತಿದೊಡ್ಡ ನೆಟ್ ಕಂಪನಿಗಳ ಲಾಬಿಗೆ ಮಣಿಯದೇ ಜಾಲದಲ್ಲಿ ಸಮಾನತೆ ಕಾಯುವ ನಿಟ್ಟಿನಲ್ಲಿ ಬಲಿಷ್ಠ ನಿಯಮಗಳನ್ನು ರೂಪಿಸಬೇಕು. ಇದಕ್ಕಾಗಿ ಎಲ್ಲ ಸಣ್ಣ & ಮಧ್ಯಮ ಇಂಟರ್ ನೆಟ್ ಕಂಪನಿಗಳು, ನೆಟ್ ಬಳಕೆದಾರರು, ಕಂಪ್ಯೂಟರ್ ಬಳಕೆದಾರರು, ಮತ್ತು ಜನ ಸಾಮಾನ್ಯರು ಇಂಟರ್ ನೆಟ್ ಸೇವೆಗಳು ಸರಕಾಗದಂತೆ ಪ್ರಜ್ಞಾವಂತಿಕೆಯಿಂದ ಒತ್ತಾಯ ತರಬೇಕು.

ಅಭಿವೃದ್ಧಿ ಮತ್ತು ಲಿಂಗ ಸಮಾನತೆ .... ಪುಟ 6 ರಿಂದ

ಪಂಜಾಬ್, ಹರಿಯಾಣ, ರಾಜಸ್ಥಾನ್ ಮುಂತಾದ ರಾಜ್ಯಗಳಲ್ಲಿ 0–6 ವಯೋಮಾನದ ಮಕ್ಕಳ ಲಿಂಗ ಅನುಪಾತ 900ಕ್ಕಿಂತ ಕಡಿಮೆಯಿದೆ. ಕರ್ನಾಟಕದಲ್ಲಿ ಒಟ್ಟು ಮಕ್ಕಳ ಲಿಂಗ ಅನುಪಾತ 2011ರಲ್ಲಿ 948ರಷ್ಟಿದ್ದರೆ ಪ.ಜಾ. ಮತ್ತು ಪ.ಪಂ.ಗಳಲ್ಲಿ ಅದು ಕ್ರಮವಾಗಿ 963 ಮತ್ತು 964ರಷ್ಟಿದೆ.

ಲಿಂಗ ತಾರತಮ್ಯ ಅನ್ನುವುದು ಕೇವಲ ಮಹಿಳೆಯರಿಗೆ ಸಂಬಂಧಿಸಿದ ಸಮಸ್ಯೆಯಲ್ಲ. ಅದು ಇಡೀ ಸಮಾಜಕ್ಕೆ ಸಂಬಂಧಿಸಿದೆ. ಇದು ಪ್ರಧಾನವಾಗಿ ಅಭಿವೃದ್ಧಿಗೆ ಸಂಬಂಧಿಸಿದ ಸಂಗತಿ. ಲಿಂಗ ಅಸಮಾನತೆಯು ತನ್ನ ದುಷ್ಪರಿಣಾಮಗಳನ್ನು ತಲೆಮಾರಿನಿಂದ ತಲೆಮಾರಿಗೆ ಸಾಗಿಸುತ್ತಿರುತ್ತದೆ.

ವಿಶ್ವಬ್ಯಾಂಕು ಲಿಂಗ ಸಮಾನತೆಯನ್ನು 'ಸ್ಮಾರ್ಟ್ ಇಕನಾಮಿಕ್ಸ್' ಎಂದು ಕರೆದಿದೆ(2012, ವಿಶ್ವ ಅಭಿವೃದ್ಧಿ ವರದಿ). ಅಮರ್ತ್ಯಸೇನ್(1990) ಮಹಿಳೆಯರ ದುಡಿಮೆಯನ್ನು 'ಸಾಮಾಜಿಕ ತಂತ್ರಜ್ಞಾನ' ಎಂದು ಕರೆದಿದ್ದಾನೆ. ರಾಷ್ಟ್ರದ ಅಭಿವೃದ್ಧಿಗೆ ಅವರು ಅಪಾರ ಕಾಣಿಕೆ ನೀಡುತ್ತಿದ್ದರೂ ಅದನ್ನು ಗುರುತಿಸುವ, ಮನ್ನಿಸುವ, ಮಾಪನ ಮಾಡುವ ಕ್ರಮಗಳು ಜಾರಿಯಲ್ಲಿಲ್ಲ. ಈ ಬಗ್ಗೆ ಕರ್ನಾಟಕ ದಿಟ್ಟ ಹೆಜ್ಜೆಗಳನ್ನು ಇಡಬೇಕಾಗಿದೆ. ಲಿಂಗ ಸಮಾನತೆಯನ್ನು ಸಾಧಿಸಿಕೊಳ್ಳಲು ಬಂಡವಾಳ, ವಿದೇಶಿ ಬಂಡವಾಳದ ಅಗತ್ಯವಿಲ್ಲ. ಆದರೆ ಅದು ಅಭಿವೃದ್ಧಿಯ ಚಾಲಕ ಶಕ್ತಿಯಾಗಿದೆ. ಇನ್ನೆರಡು ತಿಂಗಳುಗಳಲ್ಲಿ ನಮ್ಮ ಸರ್ಕಾರ ತನ್ನ 2016–2017ನೆಯ ಸಾಲಿನ ಬಜೆಟ್ಟನ್ನು ಮಂಡಿಸುತ್ತದೆ. ಅದರಲ್ಲಿ ವಿಶೇಷವಾಗಿ ದುಡಿಯುವ ಮಹಿಳೆಯರಿಗೆ ಸಂಬಂಧಿಸಿದಂತೆ ವಿಶಿಷ್ಟವಾದ ಕ್ರಮಗಳನ್ನು, ಕಾರ್ಯಕ್ರಮಗಳನ್ನು, ಹೆಚ್ಚು ಸಂಪಲ್ಮೂಲಗಳನ್ನು, ನೀಡುವ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಭಾವಿಸಬಹುದು.

ಕರ್ನಾಟಕದಲ್ಲಿ 2011ರ ಜನಗಣತಿ ಪ್ರಕಾರ 96.72 ಲಕ್ಷ ದುಡಿಯುವ ಮಹಿಳೆಯರಿದ್ದಾರೆ. ಇವರಲ್ಲಿ ಪ.ಜಾ. ಮತ್ತು ಪ.ಪಂ. ದುಡಿಯುವ ಮಹಿಳೆಯರ ಪ್ರಮಾಣ ಕ್ರಮವಾಗಿ ಶೇ 20.73 ಮತ್ತು ಶೇ9.14. ಅವರ ಸಂಖ್ಯೆ ಸಣ್ಣದೇನಲ್ಲ. ಇದರಲ್ಲಿ ಭೂರಹಿತ ದಿನಗೂಲಿ ಮಹಿಳಾ ದುಡಿಮೆಗಾರರ ಸಂಖ್ಯೆ 56.99 ಲಕ್ಷ. ಇವರಲ್ಲಿ ಪ.ಜಾ. ಮಹಿಳೆಯರ ಸಂಖ್ಯೆ 13.09 ಲಕ್ಷ ಮತ್ತು ಪ.ಪಂ. ಮಹಿಳೆಯರ ಸಂಖ್ಯೆ 5.5.

ಒಟ್ಟು ಮಹಿಳೆಯರಿಗೆ, ಅದರಲ್ಲಿ ಭೂರಹಿತ ದಿನಗೂಲಿ ಪರಿಶಿಷ್ಟ ಮಹಿಳೆಯರಿಗೆ ಬಜೆಟ್ಟಿನಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ. 'ಅಹಿಂದ' ಸಿದ್ಧಾಂತಕ್ಕೆ ಮಹಿಳಾ ಮುಖವಿದೆ ಅನ್ನುವುದನ್ನು ಸರ್ಕಾರ ಗಮನಿಸಬೇಕು. ಅಹಿಂದ ತತ್ವವನ್ನು ಅಪ್ಪಿಕೊಂಡಿರುವ ನಮ್ಮ ಸರ್ಕಾರ ಈ ಬಗ್ಗೆ ಕ್ರಾಂತಿಕಾರಕ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ನಾವು ಭಾವಿಸಿದ್ದೇವೆ.

ನಮ್ಮ

@soniandtv

ಸೋನಿಯಾ ಸಿಂಗ್ : ಹ್ಯಾಪಿ ನ್ಯೂ ಈಯರ್ ಮತ್ತು ನ್ಯೂ ಏರ್. ದೆಹಲಿ ನಾಗರಿಕರ ಬೆಂಬಲದಿಂದ ಈ ವರೆಗೆ #IamWithOddEven ಯಶಸ್ಸು ಕಂಡಿದೆ. 2016ರ ಒಂದು ಅಮೋಘ ಆರಂಭ.

– ದೆಹಲಿಯ ಸಮ-ಬೆಸ ತಾರೀಕಿನಂದು ಸಮ-ಬೆಸ ಸಂಖ್ಯೆಯ ವಾಹನಗಳನ್ನು ಮಾತ್ರ ಓಡಿಸುವ ದೆಹಲಿ ಸರಕಾರದ ಹವಾಮಾಲಿನ್ಯ ತಡೆಯ ಯೋಜನೆಯ ಜಾರಿಯ ಮೊದಲ ದಿನದ ಪ್ರತಿಕ್ರಿಯೆ

ವಿಶ್ವ ಮಾನವ ದಿನದಂದು ಒಂದು ನೆನಪು



ಡಿಸೆಂಬರ್ 29 ಕುವೆಂಪು ಅವರ ಜನ್ಮದಿನ. ಈ ನೆಪದಲ್ಲಿ ಕುವೆಂಪು ಅವರನ್ನು, ಕುವೆಂಪು ಅವರ ನೆಪದಲ್ಲಿ ಸಮಾಜಮುಖಿ ಚಿಂತನೆಗಳನ್ನು ಜಾಗೃತಗೊಳಿಸಿಕೊಳ್ಳುವ ಇರಾದೆ ನಮ್ಮದಾಗಬೇಕು. ಯಾಕೆಂದರೆ ಕುವೆಂಪು ಕೇವಲ ಮಹಾಕವಿಯಲ್ಲ; ಸಾಹಿತ್ಯ ಮೂಲದ ಸಾಮಾಜಿಕ ರೂಪಕ; ಸಮಾಜಮುಖಿ ಸಾಂಸ್ಕೃತಿಕ ಚಿಂತಕ. ಅವರದು ಶಿಖರ ಪ್ರಾಯಪ್ರತಿಭೆ. ಆತ್ಮಶ್ರೀ ಸಂಪತ್ತಿನ ನಿರಂಕುಶ ಪ್ರಭೆ.

ಪರಂಪರೆಯ ವಸ್ತು ಸಾಮಗ್ರಿಯಿಂದ ಪ್ರಜ್ಞೆಯ ಹೊಸ ಆಕೃತಿಗಳನ್ನು ಸೃಷ್ಟಿಸಿದವರು ಕುವೆಂಪು. ಜ್ಞಾನ ಮತ್ತು ತಪಸ್ಸುಗಳ ಎಲ್ಲರ ಹಕ್ಕು ಎಂದು ನಂಬಿ, ಪ್ರತಿಪಾದಿಸಿದವರು ಬೇಂದ್ರೆಯವರು 'ಸೃಷ್ಟಿಯಲ್ಲಿ ಯಾವುದೂ ವಿಫಲವಲ್ಲ' ಎಂದರೆ ಕುವೆಂಪು 'ತೆಗೆಜಡವೆಂಬುದು ಬರಿಸುಳ್ಳು' ಎಂದು ಸಾರಿದರು. ಸೃಷ್ಟಿಯ ಕಣಕಣದಲ್ಲೂ ಚೈತನ್ಯವನ್ನು ಕಂಡರು. 'ಗೊಬ್ಬರ' ಎಂಬ ಕವಿತೆಯ ಮೂಲಕ ಶ್ರಮವನ್ನು ರೂಪಕವಾಗಿಸಿದರು. ನಿಸರ್ಗದಲ್ಲಿ ಮೈಮರೆಯದೆ 'ಹೂವಿನ ಸೊಬಗನು ನೋಡುತ ನೀನು ಕೋಮಲವೆನ್ನುತ ಮುತ್ತಿಡುವೆ ಹೂವಿನ ಪೆಂಪಿಗೆ ಬಾಳನು ಕೊಟ್ಟ ಮೊಳಕೆಯ ಗೋಳನು ನೀನರಿಯೆ' ಎನ್ನುವ ಮೂಲಕ ಸೌಂದರ್ಯದ ಮೂಲ ಶ್ರಮ ಎಂದು ಹೇಳಿದರು. ಒಟ್ಟಾರೆ ಹೇಳುವುದಾದರೆ ಶ್ರಮ ಮೂಲ ಮಾನವೀಯ ಮೊತ್ತವೇ ಕುವೆಂಪು.

– ಬರಗೂರು ರಾಮಚಂದ್ರಪ್ಪ

ಕನ್ನಡ ಸಾಹಿತಿ ಬಳಗ ಕೈಗಾರಿಕೆಗಳನ್ನು ಹೀಗಳೆಯುವಾಗ, ಯಂತ್ರಗಳನ್ನು ಕಳಚೋಣ ಎನ್ನುತ್ತಿರುವಾಗ ಯಂತ್ರರ್ಷಿ ನಿನಗೆ ಜಯಮಕ್ಕೆ, ನಿನಗೆ ಸೊಗಮಕ್ಕೆ ಎಂದು ಯಂತ್ರಗಳನ್ನು ಸ್ವಾಗತಿಸಿದ ಕುವೆಂಪುರವರ ವೈಜ್ಞಾನಿಕ ಮನಸ್ಸು ನಮ್ಮ ಸಾಂಸ್ಕೃತಿಕ ಲೋಕಕ್ಕೆ ಮಾದರಿಯಾಗಲಿ. ನೇಗಿಲು ಗುಳದೊಳಗಡಗಿದೆ ಧರ್ಮ, ನೇಗಿಲು ಮೇಲೆಯೇ ನಿಂತಿದೆ ಧರ್ಮ ಎಂದು ದುಡಿಮೆಯ ಔನ್ನತ್ಯವನ್ನು ಎತ್ತಿಹಿಡಿದು ಕುವೆಂಪುರವರ ಪುರೋಹಿತಶಾಹಿ ವಿಚಾರಗಳನ್ನು ತಲೆಕೆಳಗಾಗಿಸಿದ ಕುವೆಂಪುರವರ ಚಿಂತನೆ ದುಡಿವ ಜನರಲ್ಲಿ ಹರಡಲಿ.

ಗೊಬ್ಬರದ ಮೇಲೆ ಬರೆವುದೇ ಕಬ್ಬಮಂ ಎಂದು ಹಂಗಿಸಿದವರಿಗೆ ಸವಾಲಾದ, ಏಕಲವ್ಯ, ಶಂಬೂಕ ಮೊದಲಾದ ಶೂದ್ರರಿಗಾದ ಅನ್ಯಾಯದ ವಿರುದ್ಧ ಸೆಟೆದು ನಿಂತು ಸಾಹಿತ್ಯಕ ನ್ಯಾಯ ಸಲ್ಲಿಸಿದ ಕುವೆಂಪುರವರ ಕೃತಿಗಳನ್ನು ಓದೋಣ. ಗುತ್ತಿ, ತಿಮ್ಮಿ, ಪೀಂಚಲು, ಐತ, ಸುಬ್ಬಮ್ಮ ಹೆಗ್ಗಡತಿ, ಸೀತೆಯರ ಸಂಕಟಗಳು, ಸಂತೋಷಗಳನ್ನು ನಾವೂ ಅನುಭವಿಸೋಣ. ಹೆಚ್ಚು ಮಾನವರಾಗೋಣ. ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು ಎಂದು ನವಯುಗವಾಣಿ ಘೋಷಿಸಿದೆ ಕೇಳಿ ಎಂದ ಕುವೆಂಪುರವರ ಆಶಯಗಳನ್ನು ವಾಸ್ತವಗೊಳಿಸುವ ಗುರಿ ಮತ್ತು ದೃಢ ನಿಶ್ಚಯವುಳ್ಳ ಸಿಪಿಐ(ಎಂ) ಪಕ್ಷಸೇರಿ, ಬಲಗೊಳಿಸಿ.

– ಜಿ.ಎನ್.ನಾಗರಾಜ್

ಕುವೆಂಪು ಅವರ 'ಗೊಬ್ಬರ' ಕವನ ಕೇವಲ ಭೌತಿಕಸ್ಥಿತಿಯನ್ನು ಮಾತ್ರ ತಿಳಿಸುವುದಲ್ಲ. ಪ್ರಜಾಪ್ರಭುತ್ವದ ಶಕ್ತಿಯನ್ನೂಸೂಚಿಸುವಂತದ್ದು. ದೇಶದ ಕನಿಷ್ಠ ಪ್ರಜೆಗೆ ಮನ್ನಣೆ ದೊರೆಯಬೇಕು, ಶ್ರಮಸಂಸ್ಕೃತಿಗೆ ಸಮಾನ ಸ್ಥಾನ ನೀಡಬೇಕು. ಯಾರೂ ಕೀಳಲ್ಲ ಯಾರೂ ಮೇಲಲ್ಲ. ದೇವಾಲಯದ ಪುರೋಹಿತನಿಗಿಂತಲೂ ಅನ್ನಕೊಡುವ ರೈತ ಕುವೆಂಪು ಅವರಿಗೆ ಮಿಗಿಲಾಗಿ, ಗೌರವದ ವ್ಯಕ್ತಿಯಾಗಿ ಕಂಡಿದ್ದಾನೆ. ಆದ್ದರಿಂದಲೇ ರೈತನಿಗೆ ಬೇಕಾದ ವಸ್ತುಗಳನ್ನು ಕಾವ್ಯಪ್ರತಿಮೆಯಲ್ಲಿ ಹಿಡಿದು ಅವುಗಳ ಘನತೆಯನ್ನು ಹೆಚ್ಚಿಸುವ ಪ್ರಾಮಾಣಿಕ ಪ್ರಯತ್ನಕ್ಕೆ ಕೈ ಹಾಕಿದ್ದಾರೆ, ಆ ದೃಷ್ಟಿಯಿಂದ ಗೊಬ್ಬರದ ಈ ಮಹತ್ವದ ಕವಿತೆಯನ್ನು ನಮ್ಮ ಓದುಗರ ಗಮನಕ್ಕೆ ತರುತ್ತಿದ್ದೇವೆ.

ಗೊಬ್ಬರ

"ಗೊಬ್ಬರದ ಮೇಲೆ ಬರೆವುದೆ ಕಬ್ಬಮಂ? ಹಾ
ಕಡುಕಷ್ಟ ! ಕಲಿಕಾಲಕೇನೇನು ಬಂದಪುದೊ?
ಸಾಲದೇಂ ಪ್ರಲಯಕಿದೆ ಪೀಠಿಕೆ? ಇನ್ನೇನು
ಕಾರಣಂ ಬೇಕಯ್ಯ ನಿನಗೆ, ತಾಂಡವ ಮೂರ್ತಿ,
ಕಲ್ಕ್ಯವತಾರವನೆತ್ತಿಬರೆ ? ಇದಕಿಂತ
ಧರ್ಮವಧೆ ಬೇರುಂಟೆ? ನಿರ್ಮಲ ಸರಸ್ವತಿಯ
ವೀಣೆಯಂ ಶೂದ್ರಂ ಕಸಿದುಕೊಂಡು ಗೊಬ್ಬರದ
ಗುಂಡಿಯನ್ನಗೆಯೆ ಗುದ್ದಲಿಯ ಮಾಡಿಹನಲ್ಲ!
ಶಿವನೆ, ಭೈರವನಾಗಿ ಬಂದು ಹಣೆಗಣ್ಣಿನಿಂ
ಕಿಡಿಗೆದರಿ ಬೂದಿ ಮಾಡದೆ ಸುಮ್ಮನಿಹೆಯಲ್ಲ!"

"ಕವಿತೆ, ಭೂಪಾಲರರಮನೆಯಲ್ಲಿ ಕೈ ಕೆಸರು
ಮಾಡಿಕೊಳದೆಯೆ ಮೊಸರನುಣುತಿರ್ದ ಪಂಡಿತರ
ದಿವ್ಯಜಿಹ್ವಾ ಲಸದ್ರಂಗದಲಿ ಕುಣಿದಾಡಿ
ಸುಳಿದಾಡಿ ನಲಿದಾಡಿದಾ ನೀನು, ಹಾ!ಇಂದು
ಕೊಳೆತು ನಾರುವ ರೈತನೊಡಗೂಡಿ ಒದ್ದಾಡಿ,
ಗಂಧ ಪುನುಗು ಜವಾದಿ ಕಸ್ತೂರಿಗಳನುಳಿದು
ಸೆಗಣಿಗಂಪಾಘ್ರಾಣಿಪಂತಾಯ್ತೆ? ಕೋಕಿಲೆಯ
ಸ್ತೋತ್ರಗೈದಾ ನೀನು ಪಾಳು ಗೂಬೆಯ ಕುರಿತು
ಪಾಡುವಂತಾಯ್ತೆ? ಪೆರೆನೊಸಲು, ಕೆಂದುಟಿ, ಕೆನ್ನೆ,

ಚಂದ್ರಾನನಂ, ಕಮಲನಯನಂ, ಲಸನ್ನೀಲ
ಕುಂತಳಂ, ಚಾರು ವಕ್ಷಸ್ಥಳಂ, ನುಣ್ಬುತೊಡೆ,
ಜಘನಂ ನಿತಂಬಗಳಲ್ಲಿ, ಕೆಂದಾವರೆಯ
ಮೆಲ್ಲಡಿಗಳಲಿ ವಿಹರಿಸಿದ ಕಾವ್ಯ ಪಂಕಜೆಯೆ,
ನಿನಗಿಂದು ಕೆಸರೆ ಮನೆಯಾಗಿದೆಯೆ? ನಂದನಂ
ಮರುಭೂಮಿಯಾದುದೇ? ರಣವೀರ ಪಾರ್ಥಿವರ
ರಕ್ತತೃಷ್ಣೆಯಕರ್ಮಮಂ, ಖಡ್ಗ ಧನುಗಳಂ,
ಬಾಣಪ್ರಯೋಗ ಕೌಶಲಮಂ, ಕಿರೀಟಾದಿ
ವಸನ ಭೂಷಣ ತನುತ್ರ ಶಿರತ್ರ ವಿಭವಮಂ
ವರ್ಣಿಸಿದ ನೀನಿಂದು ನೇಗಿಲಂ ಹಾರೆಯಂ
ಮಣ್ಣಗೆವಕಜ್ಜಮಂ ನೆರೆ ವರ್ಣಿಪಂತಾಯ್ತೆ?
ದುಷ್ಯಂತ ದಶರಥ ಶ್ರೀರಾಮನರ್ಜುನಂ
ಕೌಶಿಕ ಪರಶುರಾಮ ಭೀಷ್ಮದ್ರೋಣಾದ್ಯರಂ
ಬಣ್ಣಿಸಿದ ನೀನು_ಕರಿಸಿದ್ದ ಕಿಟ್ಟಯ್ಯರಂ,
ದುರ್ದಮ ಕುರುಕ್ಷೇತ್ರಮಂ ಮೇಣ್ ಪುರಾಣದಾ
ಲಂಕೆಯನ್ನುಳಿದು ಹಾ! ಒಂಟಿಕೊಪ್ಪಲಿನಾಚೆ
ಬೋಡಾದ ಬೋರೆಯಂ, ಮಲೆನಾಡಕೊಂಪೆಯಾ
ಕಾಡು ಮೇಡುಗಳಂ ಕುರಿತ್ತುಲಿವ ಗತಿಯಾಯ್ತೆ?"

"ಕಬ್ಬಿಲರು ಕಬ್ಬಿಗರು ತಾವೆನುತ್ತಬ್ಬರಿಸಿ
ಬೊಬ್ಬಿರಿಯೆ ಕಬ್ಬವಾದುದೆ? ಗೊಬ್ಬರದ ಮೇಲೆ
ಕಬ್ಬವೊಡೆಗಂಡುಗಬ್ಬವಾದಂತಲ್ತೆ ?
ಅಬ್ಬಬ್ಬ, ಕಲಿಕಾಲಕೇನಾದರಾಗುತದೆ?"

"ಗೊಬ್ಬರವನಲ್ಲಗಳೆಯುವೆ ಏಕೆ ಮರದ ತುದಿ
ನಲ್ಲಂಪುವೆತ್ತು ತಂಗಾಳಿಗೊಲೆಯುವ ಹೂವೆ?
ಬೇರುಗಳಿಗಿಲ್ಲದಿರೆ ಗೊಬ್ಬರಂ, ಹೇಳೆನಗೆ,
ವೃಕ್ಷಕೆಲ್ಲಿಯದು ಹೂವಿನ ಹಬ್ಬ? ಗೊಬ್ಬರದ
ಜೀವವನೆ ಹೀರಿ ಕೊಬ್ಬಿಹ ಹೂವೆ, ಕಬ್ಬಕ್ಕೆ
ನೀಂ ಮಾತ್ರ ವಸ್ತುವೇಂ? ನಿನ್ನಂತೆ ಗೊಬ್ಬರಂ
ಕಬ್ಬಕ್ಕೆ ಸಾಮಗ್ರಿಯಾಗಬಾರದೆ ಹೇಳು?
ಹಳಿಯದಿರೊ; ಇಂದೊ ನಾಳೆಯೊ ನೀನು ಕೆಳಗುರುಳಿ
ಗೊಬ್ಬರದೊಳೊಂದಾಗುವಾ ಮುಂದೆ ಕಾದಿಹುದು!

"ಹೆಚ್ಚಿಕೊಳ್ಳಿರೊ ಹೆಚ್ಚಿಕೊಳ್ಳಿ ಪರಿಮಳಗಳಂ
ಗಂಧಅತ್ತರ ಪುನುಗು ಕಸ್ತೂರಿ ಇತ್ಯಾದಿ
ತರತರದ ಭೋಗಮಂ! ಇನ್ನೇಸು ದಿನ ತಾನೆ
ಹೆಚ್ಚಿಕೊಳ್ಳುವಿರದನು ನಾ ಕಣ್ಣಿನಲಿ ಕಾಂಬೆ!
ನಾಮ ಮುದ್ರೆ ವಿಭೂತಿಗಳ ಬಳಿದುಕೊಂಬವರು
ಕತ್ತೆಯಂದದಿ ಗದ್ದೆಯಲಿ ಗೆಯ್ದು ಮೈಬೆವರು
ಸುರಿಸಿ ಗೊಬ್ಬರ ಮಣ್ಣು ಬಳಿದುಕೊಂಬರಿಗಿಂತ
ಮೇಲೆಂಬ ಭಾವ ತಲೆಕೆಳಗಾಗಿ ಹೋಗುತಿದೆ
ನೇಗಿಲಂ ಕುಳಂ ದೊರೆಯ ಕತ್ತಿಯಂ ಕಿತ್ತೆಸೆದು,
ಮುತ್ತಿನುಂಡೆಯ ಮುಡಿವ ಸಿರಿನೆತ್ತಿಯನ್ನುತ್ತು
ಬತ್ತಮಂ ಬಿತ್ತಿ ಬೆಳೆಯುವ ಉತ್ತಮದ ಹೊತ್ತು
ಹತ್ತಿರಕೆ ಹತ್ತಿರಕೆ ಬರುತಿರುವುದೊತ್ತೊತ್ತಿ!
ಗೊಬ್ಬರಂ ಸಿಂಹಾಸನಕ್ಕೇರಿದಾ ದಿನಂ
ತನ್ನ ಹೊಗಳಿದ ಕಬ್ಬಿಲನ ಕಬ್ಬಿಗನ ಮಾಡಿ
ಮೆರೆಯುವುದು! ಅಂದು ಗೊಬ್ಬರದ ಕಂಪೆಲ್ಲರ್ಗೆ
ಪರಿಮಳದ್ರವ್ಯ ತಾನಾದಪುದು! ಏತಕೆನೆ,
ಸಿರಿವೆರಸು ಶಕ್ತಿಯಿರೆ ಗೊಬ್ಬರವೆ ಪರಿಮಳಂ ;
ಇಲ್ಲದಿರೆ ಪುನುಗು ತಾನಾದೊಡಂ ಗೊಬ್ಬರಂ!

ಐ.ಎಂ.ವಿ. ಕಾಯ್ದೆ ದುರುಪಯೋಗ ಆಟೋ ಚಾಲಕರ ಪ್ರತಿಭಟನೆ

ಐ.ಎಂ.ವಿ. ನಿಯಮದಲ್ಲಿ ಸಂಚಾರಿ ಪೊಲೀಸರಿಗೆ ನೀಡಿರುವ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಆಟೋ ಚಾಲಕರಿಗೆ 2 ರಿಂದ 8 ಸಾವಿರದವರೆಗೂ ಕೋರ್ಟ್ ದಂಡ ವಿಧಿಸುತ್ತಿರುವುದನ್ನು ಖಂಡಿಸಿ ಆಟೋ ರಿಕ್ಷಾ ಚಾಲಕರ ಸಂಘ(ಎ.ಆರ್.ಡಿ.ಯು.)ದ ನೇತೃತ್ವದಲ್ಲಿ ಬೆಂಗಳೂರಿನ ಸಂಚಾರಿ ಪೊಲೀಸ್ ಠಾಣೆಗಳ ಮುಂದೆ ಪ್ರತಿಭಟನೆ ನಡೆಸಿ ಮನವಿ ಪತ್ರ ಸಲ್ಲಿಸಿದರು.

ಸಂಚಾರ ಪೊಲೀಸರು ಸಮವಸ್ತ್ರ ಧರಿಸದೆ ಪ್ರಯಾಣಿಕರಂತೆ ಬಂದು ಆಟೋಗಳನ್ನು ವಶಪಡಿಸಿಕೊಳ್ಳುತ್ತಿದ್ದಾರೆ. ಸಂಚಾರ ಪೊಲೀಸರು ಕಾನೂನಿನಂತೆ ಕ್ರಮ ಕೈಗೊಳ್ಳಬೇಕೆಂದು ಸಂಘವು ಒತ್ತಾಯಿಸುತ್ತದೆ.

ಆಟೋಗಳ ಮೇಲಿನ ಸಿಂಪ್ಯೂಟರ್ ಕೇಸ್‌ಗಳನ್ನು ವಜಾ ಮಾಡಬೇಕು ಮತ್ತು ಚಾಲಕರ ಗಮನಕ್ಕೆ ಬಾರದಂತೆ ಕೇಸು ದಾಖಲಿಸುವುದನ್ನು ಕೈ ಬಿಡಬೇಕು. ಬೆಂಗಳೂರು ನಗರದ ರಹದಾರಿ ಇಲ್ಲದ ಫೇರ್ ಮೀಟರ್ ಇಲ್ಲದೆ ಕಾನೂನು ಬಾಹಿರವಾಗಿ ಚಲಿಸುತ್ತಿರುವ ಟ್ಯಾಕ್ಸಿಗಳು, ಮ್ಯಾಕ್ಸಿಕ್ಯಾಬ್‌ಗಳ ಮೇಲೆ ಕಾನೂನು ಕ್ರಮ ಕೈಗೊಳ್ಳದ ಪೊಲೀಸರು ಆಟೋ ಚಾಲಕರ ಮೇಲೆ ಸುಳ್ಳುಕೇಸು ಹಾಕುವುದು ಕೈ ಬಿಡಬೇಕೆಂದು ಆಗ್ರಹಿಸಿದೆ.

ಬೆಂಗಳೂರು ನಗರದ ಎಲ್ಲಾ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಸೇವಾ ವಾಹನ ಆಟೋರಿಕ್ಷಾಗೆ ನಿಲ್ದಾಣಗಳನ್ನು ನೀಡಬೇಕು. ಸಂಚಾರ ನಿಯಮದ ಎಲ್ಲಾ ಆರೋಪಗಳಿಗೂ ಚಾಲನಾಪತ್ರ ಅಮಾನತ್ತಿಗೆ ಕಳಿಸುವುದನ್ನು ಕೈ ಬಿಡಬೇಕು ಈ ಎಲ್ಲಾ ಹಕ್ಕೊತ್ತಾಯಗಳ ಈಡೇರಿಕೆಗಾಗಿ ಯಶವಂತಪುರ, ರಾಜಾಜಿನಗರ, ಉಪ್ಪಾರಪೇಟೆ, ಕಲಾಸಿಪಾಳ್ಯ ಪ್ರದೇಶದ ಸಂಚಾರಿ ಠಾಣೆಗಳ ಮುಂದೆ ಪ್ರತಿಭಟನೆಯ ಮೂಲಕ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ ಮತ್ತು ಪದಾಧಿಕಾರಿಗಳಾದ ಬಿ.ರಾಜಶೇಖರಮೂರ್ತಿ, ಬಿ.ಎನ್.ರಘು, ಎನ್.ಶ್ರೀನಿವಾಸ್, ಗೋವಿಂದಪ್ಪ, ಟಿ.ಕೆ.ಸುಬ್ರಮಣಿ, ಎನ್.ನಾಗರಾಜ್, ಸಿ.ಎನ್.ಶ್ರೀನಿವಾಸ್, ಹೆಚ್.ಬಿ.ಗಂಗರಾಜು, ನವೀನ್ ಶೆಣೈ, ಇನ್ನಿತರ ಮುಖಂಡರು ಭಾಗವಹಿಸಿದ್ದರು.



ಈ ವಾರ ಚರಿತ್ರೆಯಲ್ಲಿ



ಸಫ್ದರ್ ಹಶ್ಮಿ ಹುತಾತ್ಮರಾದ ದಿನ ಜನವರಿ 1 1989

ಈ ದಿನ ದೆಹಲಿಯಲ್ಲಿ ಎಡ ಪ್ರಗತಿಪರ 'ಜನಮ್' (ಜನ ನಾಟ್ಯ ಮಂಚ್) ರಂಗ ತಂಡ ಕಾರ್ಮಿಕರ ಕನಿಷ್ಠ ವೇತನ ವ್ಯಾಪಕ ಚಳುವಳಿ ಬೆಂಬಲಾರ್ಥ 'ಹಲ್ಲಾ ಬೋಲ್' ಎಂಬ ಬೀದಿ ನಾಟಕ ಪ್ರದರ್ಶನದಲ್ಲಿ ತೊಡಗಿದ್ದಾಗ ಮಾಲಿಕರ–ಪರ ಕಾಂಗ್ರೆಸ್ ಗೂಂಡಾಗಳ ದಾಳಿಗೆ ಸಫ್ದರ್ ಹಶ್ಮಿ ಬಲಿಯಾದ ದಿನ. ಸಫ್ದರ್ 'ಜನಮ್' ರಂಗತಂಡದ ಸ್ಥಾಪಕ ಸದಸ್ಯರು, ನಾಟಕಕಾರರು, ಲೇಖಕರು ಆಗಿದ್ದರು. ಸಿಪಿಐ(ಎಂ) ಸದಸ್ಯರು ದುಡಿಯುವ ವರ್ಗದ ಕ್ರಾಂತಿಕಾರಿ ಚಳುವಳಿಯ ಬೆಂಬಲಿಗರು ಆಗಿದ್ದ ಸಫ್ದರ್ ಹುತಾತ್ಮರಾದಾಗ ದೇಶದ ತುಂಬಾ ತೀವ್ರ ಸಾಂಸ್ಕೃತಿಕ ಪ್ರತಿರೋಧ ಉಂಟು ಮಾಡಿತ್ತು. ಅವರು ಸಾಂಸ್ಕೃತಿಕ ಪ್ರತಿರೋಧದ ಪ್ರತೀಕ ಆಗಿಬಿಟ್ಟಿದ್ದಾರೆ. ಸಂಗಾತಿಯ ಸಾವಿನ ದು:ಖದಲ್ಲೂ ಸಫ್ದರ್ ಮಡದಿ ಮಾಲೊಶ್ರೀ ಸೇರಿದಂತೆ ಇಡೀ ತಂಡ ಜನವರಿ 4ರಂದು ಅದೇ ಜಾಗಕ್ಕೆ ಮರಳಿ 'ಹಲ್ಲಾ ಬೋಲ್' ಪ್ರದರ್ಶನ ಮುಂದುವರೆಸಿತ್ತು. ಪ್ರತಿ ವರ್ಷ ಜನವರಿ 1ನ್ನು (ದಾಳಿ ನಡೆದ ದಿನ) ಇಡೀ ದೇಶದಲ್ಲಿ 'ಸಫ್ದರ್ ಹಶ್ಮಿ ದಿನ'ವಾಗಿ ಆಚರಿಸಲಾಗುತ್ತದೆ. 'ಜನಮ್' ಉಳಿದ ಕಾರ್ಯಕ್ರಮಗಳೊಂದಿಗೆ ಅದೇ ಜಾಗದಲ್ಲಿ ಬೀದಿ ನಾಟಕ ಪ್ರದರ್ಶನ ಕೊಡುತ್ತದೆ.

ಬಿಜೆಪಿ ಆಳ್ವಿಕೆಯ ಮಹಾರಾಷ್ಟ್ರದಲ್ಲಿ ರೈತರ ಆತ್ಮಹತ್ಯೆಗಳು ಕಾಂಗ್ರೆಸ್-ಎನ್‌ಸಿಪಿ ಸರಕಾರದ ಆಳ್ವಿಕೆಗಿಂತ ದುಪ್ಪಟ್ಟು

2015ರ ವರ್ಷದ ಕೊನೆಯ ತಿಂಗಳಲ್ಲಿ ಮಹಾರಾಷ್ಟ್ರದ ಮರಾಠವಾಡ ಪ್ರದೇಶದಲ್ಲಿ 112 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ಡಿ.29ರಂದು ವರದಿ ಮಾಡಿದೆ.

ಇದರೊಂದಿಗೆ 2015ರ ವರ್ಷದಲ್ಲಿ ಈ ಪ್ರದೇಶದ ಎಂಟು ಜಿಲ್ಲೆಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ 1109 ಆಗಿದೆ. ಪ್ರತಿವಾರ 20ರಿಂದ 30 ರೈತರ ಆತ್ಮಹತ್ಯೆಗಳು ವರದಿಯಾಗಿವೆಯಂತೆ. ಇದು ಹಿಂದಿನ ವರ್ಷಕ್ಕಿಂತ ದುಪ್ಪಟ್ಟು, ಅಷ್ಟೇ ಅಲ್ಲ, ಕಳೆದ ಹತ್ತು ವರ್ಷಗಳಲ್ಲೇ ಇದು ಅತಿ ಹೆಚ್ಚು ಎನ್ನಲಾಗಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರದ ನವ ಉದಾರವಾದಿ ಧೋರಣೆಗಳ ಜಾರಿ 'ಒಳ್ಳೆಯ ದಿನ'ಗಳಲ್ಲಿ ದುಪ್ಪಟ್ಟು ವೇಗದಿಂದ ಮುಂದುವರೆಯುತ್ತಿರುವುದಕ್ಕೆ ಅನುಗುಣವಾಗಿ ಬಿಜೆಪಿ ಆಳ್ವಿಕೆಯ ಮಹಾರಾಷ್ಟ್ರದಲ್ಲಿ ರೈತರ ಆತ್ಮಹತ್ಯೆಗಳೂ ಕಾಂಗ್ರೆಸ್-ಎನ್‌ಸಿಪಿ ಸರಕಾರದ ಆಳ್ವಿಕೆಗಿಂತ ದುಪ್ಪಟ್ಟು ಆಗಿರುವುದರಲ್ಲಿ ಆಶ್ಚರ್ಯವೇನಿಲ್ಲ ಎನ್ನೋಣವೇ?

ಡಿಸೆಂಬರ್ 27 ರ ವರೆಗೆ ಈ ಎಂಟು ಜಿಲ್ಲೆಗಳಲ್ಲಿ ಅತಿ ಹೆಚ್ಚು ಆತ್ಮಹತ್ಯೆಗಳನ್ನು ಕಂಡ ಮೊದಲ ಮೂರು ಜಿಲ್ಲೆಗಳು ರಾಜ್ಯದ ಅಇಶಯ ಮಹಾಶಯರ ಜಿಲ್ಲೆಗಳು ಎಂಬುದು ಕೇವಲ ಕಾಕತಾಳಿಯವೇ? ಗೊತ್ತಿಲ್ಲ.


ಅತಿ ಹೆಚ್ಚು ಅಂದರೆ 299 ಆತ್ಮಹತ್ಯೆಗಳನ್ನು ಕಂಡ ಬೀಡ್ ಜಿಲ್ಲೆಯ ಒಬ್ಬ ಪ್ರಮುಖ ಶಾಸಕಿ ಎಂದರೆ ಪಂಕಜಾ ಮುಂಡೆ. ಈಕೆ ಹಿಂದಿನ ಬಿಜೆಪಿ-ಶಿವಸೇನಾ ಸರಕಾರದಲ್ಲಿ ಉಪಮುಖ್ಯಮಂತ್ರಿಗಳಾಗಿದ್ದ ಗೋಪೀನಾಥ ಮುಂಡೆ ಅವರ ಮಗಳು. ಇಸ್ರೇಲಿ ಮಾದರಿಇ ಬೇಸಾಯ ಅನುಸರಿಸಿದರೆ ಎಲ್ಲವೂ ಸರಿ ಹೋಗುತ್ತದೆ ಎಂಬುದು ಈಕೆಯ ನಂಬಿಕೆ.

ಎರಡನೆ ಸ್ಥಾನದಲ್ಲಿರುವ ನಾಂದೇಡ್ ರಾಜ್ಯದ ಹಿಂದಿನ ಕಾಂಗ್ರೆಸ್ ಮುಖ್ಯಮಂತ್ರಿ ಅಶೋಕ ಚವಾಣ್ ರವರ ಸ್ವಂತ ಜಿಲ್ಲೆ. ಅಲ್ಲಿ 187 ಆತ್ಮಹತ್ಯೆಗಳು ದಾಖಲಾಗಿವೆ. ಅವರು ಇದಕ್ಕೆ ಕೇಂದ್ರ ಮತ್ತು ರಾಜ್ಯದಲ್ಲಿನ ಬಿಜೆಪಿ ಸರಕಾರಗಳ ವಿಫಲತೆ ಕಾರಣ ಎನ್ನುತ್ತಾರೆ.

160 ಆತ್ಮ ಹತ್ಯೆಗಳನ್ನು ಕಂಡಿರುವ ಒಸ್ಮಾನಾಬಾದ್ ಜಿಲ್ಲೆಯಲ್ಲಿ ರಾಜ್ಯ ಸರಕಾರ 'ಶೂನ್ಯ ಆತ್ಮಹತ್ಯೆ' ಯೋಜನೆಯನ್ನು ಜಾರಿಗೊಳಿಸಿದೆ.

"ಸರಕಾರ ರೈತರಿಗೆ ಎಲ್ಲವನ್ನೂ ಕೊಡುತ್ತಿದೆ, ಆಹಾರಧಾನ್ಯಗಳು, ಬೀಜಗಳು, ಹಣಕಾಸು ನೆರವು, ಪರಿಣಿತರ ಸಲಹೆ, ವಿಮಾ ನೆರವು, ಮಾನಸಿಕ ಸಲಹೆ ಇತ್ಯಾದಿ. ಆದರೂ ಆತ್ಮಹತ್ಯೆಗಳ ಪ್ರಮಾಣ ಇಳಯುತ್ತಿಲ್ಲ. ನಾವು ಒಸ್ಮಾನಾಬಾದ್‌ನ್ನು ಶೂನ್ಯ ಆತ್ಮಹತ್ಯೆ ಯೋಜನೆಗೆ ಆರಿಸಿಕೊಂಡಿದ್ದೇವೆ. ಅಲ್ಲಿ ನಾವು ಯಶಸ್ವಿಯಾಗಿ ಬೇರೆ ಜಿಲ್ಲೆಗಳಲ್ಲೂ ಅದನ್ನು ಅಳವಡಿಸಿಕೊಳ್ಳಬಹುದು ಎಂಬುದು ನಮ್ಮ ನಿರೀಕ್ಷೆ" ಎನ್ನುತ್ತಾರೆ ಅಲ್ಲಿನ ಡಿವಿಜನಲ್ ಕಮಿಶನರ್.

ಆದರೆ ಇದುವರೆಗೆ ಏನಾದರೂ ಯಶಸ್ಸು ಕಂಡು ಬಂದಿಲ್ಲ. ಅಥವ ಆಡಳಿತಗಾರರಿಗೆ ಸಮಸ್ಯೆಯೇ ಅರಿವಾಗಿಲ್ಲವೇನೋ ಎಂದು ಕೆಲವರು ವೀಕ್ಷಕರ ಭಾವನೆ.



'ಒಳ್ಳೆಯ ದಿನ'ಗಳು: ಬುಲೆಟ್ ರೈಲುಗಳಿಂದಲೋ, ಸಾರ್ವಜನಿಕ ಆರೋಗ್ಯದಿಂದಲೋ?

ಬುಲೆಟ್ ರೈಲು ಬಿಜೆಪಿಯ ಮುದ್ದಿನ ಯೋಜನೆಗಳಲ್ಲೊಂದು. ದೇಶದ ಎಲ್ಲ ಪ್ರಮುಖ ನಗರಗಳ ನಡುವೆ ಅತಿವೇಗದ ರೈಲುಗಳನ್ನು ಓಡಿಸುವುದು ಅದರ 'ಒಳ್ಳೆಯ ದಿನ'ಗಳ ಕನಸುಗಳಲ್ಲೊಂದು. ಕಳೆದ ವಾರ ಜಪಾನೀ ಪ್ರಧಾನ ಮಂತ್ರಿಗಳ ಭೇಟಿಯ ಕಾದಲ್ಲಿ ಆ ದಏಶದೊಂದಿಗೆ ಮುಂಬೈ-ಅಹಮದಾಬಾದ್ ಬುಲೆಟ್ ರೈಲು ನಿರ್ಮಾಣಕ್ಕೆ ಒಪ್ಪಂದ ಮಾಡಿಕೊಳ್ಳುವುದರೊಂದಿಗೆ ಈ ನಿಟ್ಟಿನಲ್ಲಿ ಅಡಯಿಡಲಾಗಿದೆ, ಇದೊಂದು ಮಹತ್ವದ ಸಾಧನೆ ಎಂದು ಅದು ಹೇಳಿಕೊಳ್ಳುತ್ತಿದೆ. ಈ ಎರಡು ನಗರಗಳ ನಡುವಿನ ಪ್ರಯಾಣದ ಸಮಯವನ್ನು ಕೇವಲ 2ಗಂಟೆಗಳಷ್ಟು ಇಳಿಸುವ, ಈಗಾಗಲೇ ಒಳ್ಳೆಯ ದಿನಗಳನ್ನು ಅನುಭವಿಸಿರುವ ಕೆಲವರಿಗಷ್ಟೇ ಪ್ರಯೋಜನವಾಗಬಹುದಾದ ಈ ಮಹಾ ಪ್ರಾಜೆಕ್ಟಿಗೆ ತಗಲುವ ವೆಚ್ಚ 98000 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ.

ಬುಲೆಟ್ ರೈಲಿನಂತೆ ಸಾರ್ವತ್ರಿಕ ಆರೋಗ್ಯಪಾಲನೆ ಕೂಡ ಬಿಜೆಪಿಯ ಚುನಾವಣಾ ಪ್ರಣಾಳಿಕೆ ಕೊಟ್ಟಿರುವ ಪ್ರಮುಖ ಭರವಸೆ. ಆದರೆ ನಿಜಕ್ಕೂ ಕೋಟ್ಯಂತರ ಜನಗಳಿಗೆ 'ಒಳ್ಳೆಯ ದಿನ'ಗಳನ್ನು ತರಬಹುದಾದ ಇದನ್ನು ಹಣಕಾಸು ತೊಂದರೆಯ ಕಾರಣ ಹೇಳಿ ಕಡಿತ ಮಾಡಲಾಗಿದೆ.

ಈ ಕೆಳಗಿನ ಗ್ರಾಫ್ ನೋಡಿ, 'ಒಳ್ಳೆಯ ದಿನ'ಗಳು ಯಾರಿಗೆ ಎಂದು ಸ್ಪಷ್ಟವಾಗುತ್ತದೆ.

ವಿವಿಧ ಬಾಬ್ತುಗಳಿಗೆ ಸರಕಾರ ಮಾಡುವ ಖರ್ಚುಗಳ ಹೋಲಿಕೆ: (ಮೊತ್ತ ಸಾವಿರ ಕೋಟಿ ರೂ.ಗಳಲ್ಲಿ)

ಮುಂಬೈ-ಅಹಮದಾಬಾದ್ ಬುಲೆಟ್ ರೈಲು	98
ಹೆದ್ದಾರಿಗಳು 2015-16	43
ಶಾಲಾಶಿಕ್ಷಣ 2015-16	42
ರೈಲ್ವೆ 2015-16	42
ಆರೋಗ್ಯಪಾಲನೆ 2015-16	30
ರೈಲ್ವೆ ಸುರಕ್ಷಿತತೆ 2015-16	25
ಸ್ವಚ್ಛ ಭಾರತ 2014-15	2.4

ಇದು ಮನದ ಮಾತು: ಹಣ/ಶ್ರಮ ಯಾರದೋ, ಕೀರ್ತಿ ಯಾರಿಗೋ!

ಕಳೆದ ವಾರ ಪ್ರಧಾನಿಗಳ 15ನೇ 'ಮನದ ಮಾತು' ಪ್ರಸಾರವಾಯಿತು. ಇದುವರೆಗಿನ ಮಾತುಗಳನ್ನು ಆಲಿಸಿದ ಮೇಲೆ ಮಹಾರಾಷ್ಟ್ರದ ಮರಾಠವಾಡ ಪ್ರದೇಶದ ರೈತರ ಆತ್ಮಹತ್ಯೆಗಳ ಬಗ್ಗೆ ಮನದ ನೋವನ್ನಾಗಲೀ, ಸ್ವತಃ ಬಿಜೆಪಿಯ ಒಬ್ಬ ಸಂಸದನ ಅಮಾನತಿಗೆ ಕಾರಣವಾದ ಹಣಕಾಸು ಮಂತ್ರಿಗಳ ಮೇಲಿನ ಭ್ರಷ್ಟಾಚರದ ಆಪಾದನೆಯ ಪ್ರಸ್ತಾಪವಾಗಲೀ ಅದರಲ್ಲಿ ನಿರೀಕ್ಷಿಸುವಂತಿರಲಿಲ್ಲ. ನಿಜ, ಈ ಬಾರಿ ಮಧ್ಯಪ್ರದೇಶದ ಒಬ್ಬ ಸಾಮಾನ್ಯ ಗಾರೆ ಕೆಲಸಗಾರರ ಪ್ರಸ್ತಾಪವಿತ್ತು. ತನ್ನ ಸ್ವಚ್ಛ ಭಾರತ ಆಂದೋಲನ ಭಾರೀ ಯಶಸ್ಸು ಕಂಡಿದೆ ಎಂದು ಬೆನ್ನು ತಟ್ಟಿಕೊಳ್ಳುತ್ತ ಅವರು 71 ವರ್ಷದ ದಿಲೀಪ್ ಸಿಂಗ್ ಮಾಳ್ವೀಯ ಶೌಚಾಲಯ ಕಟ್ಟುವ ಸಾಮಗ್ರಿಗಳನ್ನು ಒದಗಿಸಿದರೆ ತಾನು ಅದನ್ನು ಪುಕ್ಕಟೆಯಾಗಿ ಕಟ್ಟಿಸಿಕೊಡುವುದಾಗಿ ಹೇಳಿದ್ದಾರೆ ಎಂದರು.

"ಅವರು ದಏಶದ ರಾಜ, ಅವರಿಂದ ಈ ಮಾತು ಕೇಳಿ ಬಹಳ ಚಂದ ಅನಿಸುತ್ತದೆ" ಎಂದಿರುವ ಆತ ತಾನು ಮಜೂರಿಯಿಲ್ಲದೆ ಶೌಚಾಲಯ ಕಟ್ಟಿಸಿ ಕೊಡುತ್ತೇನೆ ಎಂದೇನೂ ಹೇಳಿಲ್ಲ, ನಿಮಗೆ ಸರಕಾರದಿಂದ ಹಣ ಬಂದಾಗ ನನಗೆ ಕೊಡಿ ಎಂದಷ್ಟೇ ಹೇಳಿದ್ದೆನಷ್ಟೇ ಎಂದಿರುವುದಾಗಿ ಪತ್ರಿಕೆಗಳು ವರದಿ ಮಾಡಿವೆ.

ತನ್ನ ಹಳ್ಳಿಯಲ್ಲಿ ಈಗ ಕಟ್ಟಿರುವ 53 ಶೌಚಾಲಯಗಳಲ್ಲಿ 27 ನ್ನು ಸ್ವತಃ ಕಟ್ಟಿರುವ, ಉಳಿದವಕ್ಕೆ ಇತರ ಗಾರೆಯವರಿಗೆ ಮಾರ್ಗದರ್ಶನ ನೀಡಿರುವ ಇವರು 'ನನಗೂ ಸಂಸಾರದ ಜವಾಬ್ದಾರಿಯಿದೆ. ನನ್ನ ಒಂದೆಕ್ರೆ ಹೊಲದಲ್ಲಿ ಈ ಬಾರಿ ಬೆಳೆ ಬಂದಿಲ್ಲ. (ಶೌಚಾಲಯ ಕಟ್ಟಿದ್ದಕ್ಕೆ) ಕೆಲವರು ಮಜೂರಿ ಕೊಟ್ಟಿದ್ದಾರೆ, ಉಳಿದವರು ಕೊಡಬಹುದು' ಎಂದು ಹೇಳಿದ್ದಾರಂತೆ.

ನಿಜ, ಪ್ರಧಾನ ಮಂತ್ರಿಗಳಿಗೆ ತಪ್ಪು ಮಾಹಿತಿ ಹೋಗಿರಬಹುದು.

ಆದರೆ, ಈ 'ಒಳ್ಳೆಯ ದಿನ'ಗಳ ಒಂದು ಮುಖ್ಯ ಲಕ್ಷಣವೆಂದರೆ ಹಲವಾರು ಯೋಜನೆಗಳನ್ನು ಪ್ರಕಟಿಸಿ ಸುದ್ದಿ ಮಾಡಲಾಗಿದೆ, ಆದರೆ ಅವುಗಳಲ್ಲಿ ಹೆಚ್ಚಿನವಕ್ಕೆ ಈ ಸರಕಾರ ತನ್ನ ಬೊಕ್ಕಸದಿಂದ ಮಾಡುವ ಖರ್ಚು ಬಹಳ ಕಡಿಮೆ ಎಂಬುದು ಈಗ ದೇಶದ ಬಹಳಷ್ಟು ಮಂದಿಯ ಮನದ ಮಾತು. ಸೇವಾ ತೆರಿಗೆಯ ಮೇಲೆ 'ಸ್ವಚ್ಛಭಾರತ' ಸೆಸ್ ಇದಕ್ಕೆ ಇತ್ತೀಚಿನ ಉದಾಹರಣೆ. ಈ ಚಾಳಿಗೆ ಅನುಗುಣವಾಗಿಯೇ ಮಧ್ಯಪ್ರದೇಶದ ಆ ಬಡ ಗಾರೆಯವರಿಂದಲೂ ಪುಕ್ಕಟೆ ಶ್ರಮವನ್ನು ನಿರೀಕ್ಷಿಸಿರಬಹುದೇ ಎಂಬ ಸಂದೇಹವೂ ಬರದಿರದು.

> ಲಾಹೋರಿಗೆ ಪ್ರಧಾನಿಗಳ 'ಆಶ್ಚರ್ಯಕರ' ಭೇಟಿಯ ದಿನವೇ ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಆರೆಸ್ಸೆಸ್‌ನ 'ಅಖಂಡ ಭಾರತ' ಪರಿಕಲ್ಪನೆಯನ್ನು ಪುನರುಚ್ಚರಿಸಿದ್ದು ಬಿಜೆಪಿಗೆ ಮುಜುಗರ ಉಂಟು ಮಾಡಿದೆ- ಸುದ್ದಿ

ಮಹಾಭಾರತ,
ವೈದಿಕ ಭಾರತ
ಅಖಂಡ ಭಾರತ,
ಜಯ ಭಾರತ



ಭೂತಕಾಲಕ್ಕೆ ಗುರಿಯಡಲು ನಮ್ಮ 'ಹಿಂಬದಿ ನೋಟದ ರಾಜಕೀಯ' ಎಂಬ ತರಬೇತಿ ಶಿಬಿರ

"ಅದು ಗೋಮಾಂಸವಲ್ಲವೆಂದಾದರೆ ಅವರು ನನ್ನ ತಂದೆಯನ್ನು ವಾಪಾಸು ಬದುಕಿಸಬಲ್ಲರೇ?"

ಇದು ಅಕ್ಟೋಬರ್ 1, 2015 ರಂದು ದಾದ್ರಿಯ ಮಹಮ್ಮದ್ ಅಖ್ಲಾಕ್‌ನ ಮಗಳು ಕೇಳಿದ್ದ ಪ್ರಶ್ನೆ.

ಅಖ್ಲಾಕ್‌ನ ಮನೆಯಲ್ಲಿ ಪೋಲೀಸರು ವಶಪಡಿಸಿಕೊಂಡಿದ್ದ ಮಾಂಸ ದನದ್ದಲ್ಲ, ಅದು ಕುರಿ ಮಾಂಸ ಎಂದು ಉತ್ತರ ಪ್ರದೇಶದ ಪಶುವೈದ್ಯ ಇಲಾಖೆಯ ತನಿಖೆಯಿಂದ ತಿಳಿದು ಬಂದಿದೆ ಎಂಬ ಸುದ್ದಿ ಈಗ ಮಾಧ್ಯಮಗಳಲ್ಲಿ ಪ್ರಕಟವಾಗಿದೆ.

ಊರ ದೇವಸ್ಥಾನದಲ್ಲಿ ಈ ಬಗ್ಗೆ ಸುಳ್ಳು ಸುದ್ದಿ ಹರಡಿಸಿದ್ದರಿಂದ ಅಖ್ಲಾಕ್ ಮನೆಗೆ ನುಗ್ಗಿದ ಜನಜಂಗುಳಿಯ ಎದುರು ಅಖ್ಲಾಕ್ ಮತ್ತು ಆತನ ಕುಟುಂಬದವರು ಇದನ್ನೇ ಅಂಗಲಾಚಿ ಹೇಳಿದ್ದರು. ಆದರೂ ಅದಕ್ಕೆ ಕಿವಿಗೊಡದೆ ಆತನನ್ನು ಚಚ್ಚಿ ಸಾಯಿಸಲಾಯಿತು. ನಂತರವೂ ಬಿಜೆಪಿ ಮತ್ತು ಸಂಘ ಪರಿವಾರದ ಮುಖಂಡರು ಈ ಸುಳ್ಳು ಸುದ್ದಿಯ ಸುತ್ತವೇ ಕ್ರಿಯೆ-ಪ್ರತಿಕ್ರಿಯೆ ನಡೆಸಿಕೊಂಡು ಬಂದಿದ್ದಾರೆ.

ನಿಜ, ದೇಶದ ಸಂಸ್ಕೃತಿ ಮಂತ್ರಿಗಳು ಅದೊಂದು 'ಅಕ್ಸಿಡೆಂಟ್' ಎಂದಿದ್ದರು. ಬಹಶಃ ಅವರು ಅದನ್ನೇ ಈಗ ಪುನರಾವರ್ತಿಸಬಹುದು. ಅಖ್ಲಾಕ್‌ನ ಮಗಳಿಗೆ ಉತ್ತರ ಕೊಡಬೇಕೆಂದೇನೂ ಅವರಿಗೂ ಅನಿಸುತ್ತಿರಲಿಕ್ಕಿಲ್ಲ, ಇನ್ನು ಈ ಘಟನೆಯಿಂದ ಕಲ್ಲು ಹೊಡಿಸಿಕೊಳ್ಳುವ ನಾಯಿಯನ್ನು ಮಾತ್ರ ಕಲ್ಪಿಸಿಕೊಳ್ಳಬಲ್ಲ ಇನ್ನೊಬ್ಬ ಮಂತ್ರಿಯ ಮುಂದಂತೂ ಆ ಪ್ರಶ್ನೆಯೇ ಇಲ್ಲ.

"ನನ್ನ ತಂದೆಯನ್ನು ಗೋಮಾಂಸದ ಹೆಸರಲ್ಲಿ ರಾಜಕೀಯ ಮಾಡುವವರು ತಮ್ಮ ಲಾಭಕ್ಕಾಗಿ ಕೊಂದು ಹಾಕಿದರು. ಅವರೀಗ ಮತ್ತೆ ಬರಲಾರರು. ಬೇರೆ ಯಾರೊಂದಿಗೂ ಹೀಗಾಗದಿರಲಿ ಎಂದು ಈ ದೇಶದ ಜನತೆಯನ್ನು ನಾನು ಕೇಳಿಕೊಳ್ಳುತ್ತೇನೆ" ಎಂದಿದ್ದಾರೆ ಈ 'ಆಕ್ಸಿಡೆಂಟ್' ವೇಳೆ ದಾದ್ರಿಯಲ್ಲಿರದ್ದರಿಂದ ಉಳಿದುಕೊಂಡ ಅಖ್ಲಾಕ್‌ರ ಹಿರಿಯ ಮಗ ಸರ್ತಾಜ್.

ತನ್ನ ಸಂಪುಟದ ಆ ಇಬ್ಬರ ಟಿಪ್ಪಣಿಗಳಿಗೂ ತುಟಿಪಿಟಕ್ಕೆನ್ನದ ಅವರ ಮುಖ್ಯಸ್ಥರ ಮನಕ್ಕೆ ಈ ಮಾತು ಕೇಳಿರಬಹುದೇ? ದೇಶದ ಜನರ ಮನಸ್ಸಿಗೆ ಇದನ್ನು ಅವರು ಕೇಳಿಸಬಲ್ಲರೇ?

ಎಮ್ಮೆ ಮಾಂಸ ರಫ್ತು ಮಾಡುವ ಕಂಪನಿಗಳಿಂದಲೇ 2ಕೋಟಿ ರೂ.. ದೇಣಿಗೆ!

ಭಾರತದ ಚುನಾವಣಾ ಆಯೋಗಕ್ಕೆ ಬಿಜೆಪಿ ಸಲ್ಲಿಸಿದ 2013-14 ಮತ್ತು 2014-15ರ ದೇಣಿಗೆಗಳ ವರದಿಯ ಪ್ರಕಾರ ಎಮ್ಮೆ ಮಾಂಸ ರಫ್ತು ಮಾಡುವ ಕಂಪನಿಗಳಿಂದ 2.5 ಕೋಟಿ ರೂ. ದೇಣಿಗೆ ಪಡೆದಿದೆ. 2014 ಚುನಾವಣೆ ವರೆಗೆ ಮೂರು ಫ್ರಿಗೊರಿಫಿಕೊ ಅಲ್ಲಾನ ಲಿ., ಕಾನ್ವರ್ವ ಅಲ್ಲಾನ ಲಿ. ಮತ್ತು ಇಂಡಾಗ್ರೊ ಫುಡ್ಸ್‌ಲಿ. 2 ಕೋಟಿ ರೂ. ಗಳನ್ನು ಬಿಜೆಪಿಗೆ ನೀಡಿವೆ. ಈ ಮೂರೂ ಕಂಪನಿಗಳು ಮುಂಬೈಯ ಅಲ್ಲಾನ ಸನ್ಸ್ ಕಂಪನಿಯ ಉಪ ಕಂಪನಿಗಳು. ತಾವು ಜಗತ್ತಿನ ಅತಿ-ದೊಡ್ಡ ಕಲಾಲ್ ಎಲುಬುಮುಕ್ತ ಎಮ್ಮೆ ಮಾಂಸದ ಉತ್ಪಾದಕರು ಇಂದು ಇವು ಹೇಳಿಕೊಳ್ಳುತ್ತವೆ. ಟೈಂಸ್ ಸುದ್ದಿ ಜಾಲ ಟಿಎನ್‌ಎನ್ ಡಿಸೆಂಬರ್ 16ರಂದು ಇದನ್ನು ವರದಿ ಮಾಡಿದೆ

ಈ ದೇಣಿಗೆ ತಗೊಂಡಿರುವಾಗಲೇ ಆಗ ಪ್ರಧಾನಿ ಪಟ್ಟಾಕಾಂಕ್ಷಿಯಗಿದ್ದ ಮೋದಿಯವರು ಗೋಮಾಂಸ, ಎಮ್ಮೆ ಮಾಂಸದ ರಫ್ತು ಹೆಚ್ಚುತ್ತಿರುವುದನ್ನು 'ಗುಲಾಬಿ ಕ್ರಾಂತಿ' ಎಂದು ಲೇವಡಿ ಮಾಡಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.



ಚಿತ್ರ ಕೃಪೆ: ಇಂಡಿಯಾಟೈಮ್ಸ್.ಕಾಂ



ಉದಾರವಾದಿಗಳು ಸಮರ್ಥಿಸುವ ಬಂಡವಾಳಶಾಹಿ

ಬಂಡವಾಳಶಾಹಿ ವ್ಯವಸ್ಥೆಯ ಪಿಡುಗುಗಳನ್ನು ಗುಣಪಡಿಸಲು ಮದ್ಯಪ್ರವೇಶ ಮಾಡಬೇಕಿದ್ದ ಪ್ರಭುತ್ವವನ್ನೇ ಮಾರುಕಟ್ಟೆ ನುಂಗಿದೆ. ಬಂಡವಾಳಶಾಹಿ ಬಗ್ಗೆ ಉದಾರಿಗಳ ಸಮರ್ಥನೆಗಳು ಬರಡಾಗಿವೆ. ಅವರಿಗೆ, ಇಂದು ಸಮಾಜವಾದದ ವಿರುದ್ಧ ಪ್ರತಿವಾದಗಳೂ ಇಲ್ಲ, ನಂಬಲರ್ಹ ಸಿದ್ಧಾಂತವೂ ಇಲ್ಲ. ಸಮಾಜವಾದ ಇಂದಿನ ದಿನಕ್ಕೆ ಸಲ್ಲುವಂತೆ ಸಜ್ಜಾಗಬೇಕು. ಸಮಾಜವಾದಿ ಚಳುವಳಿ ಮುನುಗ್ಗಬೇಕು ಎಂಬುದಾಗಿ ಟಿಪ್ಪಣಿ ಮಾಡಿದ್ದಾರೆ, ಪ್ರೊ. ಪ್ರಭಾತ್ ಪಟ್ನಾಯಕ್. ಅವರ ಟಿಪ್ಪಣಿಯ ಸಾರಾಂಶ ಇಲ್ಲಿದೆ.

ಕೆ.ಎಂ.ನಾಗರಾಜ್

ಬಂಡವಾಳಶಾಹಿ ಆರ್ಥಿಕ ಪದ್ಧತಿಯ ಸಮರ್ಥನೆಯಲ್ಲಿ ಎರಡು ಭಿನ್ನವಾದ ಉದಾರಿ ನಿರೂಪಣೆಗಳಿವೆ. ಮೊದಲನೆಯದು, ಒಟ್ಟು ಸರಕುಗಳ ಉತ್ಪಾದನೆಗೆ ಎಷ್ಟು ಬೇಕೋ ಅಷ್ಟೇ ಪ್ರಮಾಣದ ಸಂಪನ್ಮೂಲಗಳನ್ನು ಬಂಡವಾಳಶಾಹಿಯು ಎಷ್ಟು ಸಮರ್ಥವಾಗಿ ಬಳಸಿಕೊಳ್ಳುತ್ತದೆ ಎಂದರೆ, ಒಂದೇ ಒಂದು ಐಟಂ ಸರಕನ್ನು ಅಧಿಕವಾಗಿ ಉತ್ಪಾದಿಸಬೇಕಾದರೂ ಮತ್ತೊಂದು ಐಟಂ ಸರಕಿನ ಉತ್ಪಾದನೆ ಕಡಿಮೆ ಮಾಡದ ಹೊರತು ಸಾಧ್ಯವಾಗದು ಎಂಬುದು.

ಇದು ನಂಬಲರ್ಹವಲ್ಲ. ಏಕೆಂದರೆ, ನಿರುದ್ಯೋಗ ಮತ್ತು ಅದರ ಜೊತೆಯಲ್ಲಿ ಉತ್ಪಾದನಾ ಉಪಕರಣಗಳು ಬಳಕೆಯಾಗದೆ ಉಳಿಯುವುದು ಬಂಡವಾಳಶಾಹಿಯ ಶಾಶ್ವತ ಲಕ್ಷಣಗಳು ಎಂಬುದನ್ನು ಬಂಡವಾಳಶಾಹಿಯ ಚರಿತ್ರೆಯುದ್ದಕ್ಕೂ ಕಾಣಬಹುದು. ಹಾಗಾಗಿ, ಈ ನಿರೂಪಣೆ ಅವಾಸ್ತವಿಕವೆಂದು ಒಪ್ಪಿಕೊಳ್ಳುವ ಪ್ರಾಮಾಣಿಕ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರು ಇನ್ನೊಂದು ಧಾರೆಯ ನಿರೂಪಣೆಯ ಮೊರೆ ಹೋಗುತ್ತಾರೆ.

ಏಕ ಕಾಲದಲ್ಲಿ ಕೆಲಸಗಾರರು ನಿರುದ್ಯೋಗಿಗಳಾಗಿರುವುದು ಮತ್ತು ಅದರ ಜೊತೆಯಲ್ಲೇ ಉತ್ಪಾದನಾ ಉಪಕರಣಗಳು ಪೂರ್ಣವಾಗಿ ಬಳಕೆಯಾಗದಿರುವುದು ಬಂಡವಾಳಶಾಹಿಯ ದೋಷವೆಂದೂ ಮತ್ತು ಅದನ್ನು ಪ್ರಭುತ್ವದ ಮದ್ಯಪ್ರವೇಶದ ಮೂಲಕ ಸರಿಪಡಿಸಬಹುದು ಎಂಬುದು ಎರಡನೆಯ ನಿರೂಪಣೆ. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಹೊರಗೆ ಅಸ್ತಿತ್ವ ಉಳ್ಳ ಪ್ರಭುತ್ವವು ತನ್ನಷ್ಟಕ್ಕೆ ತಾನೇ ಮದ್ಯಪ್ರವೇಶಮಾಡಿ ಬಂಡವಾಳಶಾಹಿಯ ಅಡ್ಡಪರಿಣಾಮಗಳನ್ನು ತೊಡೆದುಹಾಕುತ್ತದೆ ಎಂದು ಈ ನಿರೂಪಣೆ ಬಗೆಯುತ್ತದೆ.

ಇಪ್ಪತ್ತನೇ ಶತಮಾನದ ಪ್ರಸಿದ್ಧ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೀನ್ಸ್ ಅವರ ಪ್ರತಿಪಾದನೆಗಳು ಈ ಎರಡನೆಯ ಧಾರೆಗೆ ಸೇರುತ್ತವೆ. ಅದರ ಪಾಡಿಗೆ ಅದನ್ನು ಬಿಟ್ಟರೆ, ಬಂಡವಾಳಶಾಹಿ ವ್ಯವಸ್ಥೆಯು ಯಾವಾಗಲೂ ಬಿಕ್ಕಟ್ಟುಗಳಿಂದ ಆವರಿಸಿರುತ್ತದೆ ಮತ್ತು ಅದು ಮರುಕ ಉಳ್ಳ ಸಮಾಜದ ಅವಶ್ಯಕತೆಗಳಿಗೆ ಹೊಂದಿಕೆಯಾಗುವುದಿಲ್ಲ ಎಂಬ ಮಾರ್ಕ್ಸ್‌ವಾದಿ ಗ್ರಹಿಕೆಯನ್ನು ಕೀನ್ಸ್ ಪರಂಪರೆ ಒಪ್ಪುತ್ತದೆ. ಆದರೆ, ರೋಗಗ್ರಸ್ತವಾಗಿರುವ ಬಂಡವಾಳಶಾಹಿ ಸಮಾಜವನ್ನು ಗುಣಪಡಿಸಲು ಪ್ರಭುತ್ವವು ಪರಿಣಾಮಕಾರಿಯಾಗಿ ಮದ್ಯಪ್ರವೇಶ ಮಾಡಬಹುದು ಎಂಬ ಮಾರ್ಕ್ಸ್‌ವಾದಿ ಗ್ರಹಿಕೆಯನ್ನು ಕೀನ್ಸ್ ಅಲ್ಲಗಳೆಯುತ್ತಾರೆ. ಸಮಾಜವಾದಿಗಳು ಬಯಸುವಂತೆ ಉತ್ಪಾದನಾ ಸಾಧನಗಳನ್ನು ಸಾಮಾಜಿಕ ಒಡೆತನಕ್ಕೆ ಒಳಪಡಿಸುವ ಅವಶ್ಯಕತೆ ಇಲ್ಲ. ಬದಲಿಗೆ, ಹೂಡಿಕೆಯ ಸಮಾಜೀಕರಣವಾದರೆ ಬಂಡವಾಳಶಾಹಿಯ ಮೂಲ ದೋಷವನ್ನೂ ಪರಿಹರಿಸಬಹುದು ಎನ್ನುತ್ತಾರೆ ಕೀನ್ಸ್. ಅವರ ಪ್ರಕಾರ, ಹೂಡಿಕೆಯ ಸಮಾಜೀಕರಣವೆಂದರೆ, ಸಂಪೂರ್ಣ ಉದ್ಯೋಗಗಳಿರುವ ಪರಿಸ್ಥಿತಿಯಲ್ಲಿ ಆಗುವಷ್ಟು ಉತ್ಪತ್ತಿಯ ಮೇಲಿನ ಒಟ್ಟು ಬೇಡಿಕೆಯಲ್ಲಿ ಕೊರತೆಯಾಗದಂತೆ ತಡೆಯುವುದಕ್ಕೆ ಬೇಕಾಗುವಷ್ಟು ಮಟ್ಟದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಯಾಗುವಂತೆ ನಿಯಂತ್ರಣಗಳ ಮೂಲಕ ಖಾತ್ರಿಪಡಿಸಿಕೊಳ್ಳಬಹುದು ಎಂಬುದು. ಈ ಬಗ್ಗೆ ಮಾರ್ಕ್ಸ್‌ವಾದಿ ವಿಮರ್ಶೆಯನ್ನು ಇಲ್ಲಿ ಪ್ರಸ್ತಾಪಿಸಿಲ್ಲ.

ಬಂಡವಾಳಶಾಹಿ ಸಮರ್ಥನೆಯಲ್ಲಿನ ಎರಡನೆಯ ಧಾರೆಯ ನಿರೂಪಣೆಯ ತರ್ಕವನ್ನು ಅದರದ್ದೇ ಆದ ನಿಯಮಗಳ ಪ್ರಕಾರ ಒರೆಗೆ ಹಚ್ಚಿದಾಗ ಮತ್ತು ಅದು ಎಷ್ಟರಮಟ್ಟಿಗೆ ಸಮಕಾಲೀನ ಬಂಡವಾಳಶಾಹಿಗೆ ಅನುಗುಣವಾಗಿದೆ ಎಂದು ವಿಚಾರಮಾಡಿದಾಗ ನಿಸ್ಸಂಶಯವಾದ ಒಂದು ಪ್ರಶ್ನೆ ಉದ್ಭವವಾಗುತ್ತದೆ: ಸಂಪೂರ್ಣ ಉದ್ಯೋಗದ ಗುರಿ ಸಾಧಿಸಲು ಪ್ರಭುತ್ವ ಮದ್ಯಪ್ರವೇಶ ಮಾಡವುದಾದರೂ ಹೇಗೆ– ಬಂಡವಾಳಶಾಹಿಗಳು ಅಂತಹ ಮದ್ಯಪ್ರವೇಶವನ್ನು ವಿರೋಧಿಸುತ್ತಿರುವಾಗ? ಈ ಪ್ರಶ್ನೆಗೆ ಉತ್ತರವಾಗಿ ಕೀನ್ಸ್ ಹೀಗೆ ಹೇಳಿದ್ದರು: ಪ್ರಭುತ್ವದ ಮದ್ಯಪ್ರವೇಶವನ್ನು ಬಂಡವಾಳಗಾರರು ವಿರೋಧಿಸುವುದಿಲ್ಲ. ಏಕೆಂದರೆ, ಅವರಿಗೆ ಅದರಿಂದ ಲಾಭವಿದೆ. ಅಂದರೆ, ಪ್ರಭುತ್ವದ ಮದ್ಯಪ್ರವೇಶದಿಂದಾಗಿ ಒಟ್ಟು ಬೇಡಿಕೆ ವೃದ್ಧಿಸುತ್ತದೆ. ಆಗ, ಕೆಲಸಗಾರರಿಗೆ ಉದ್ಯೋಗಾವಕಾಶಗಳು ದೊರೆಯುತ್ತವೆ ಮತ್ತು ಬಂಡವಾಳಗಾರರ ಲಾಭವೂ ಹೆಚ್ಚುತ್ತದೆ. ಆದರೆ, ಮೀಸಲು ನಿರುದ್ಯೋಗಿಗಳ ಪಡೆಯೇ ಇಲ್ಲದ ಪರಿಸ್ಥಿತಿಯಲ್ಲಿ ಕೆಲಸಗಾರರು ತಮ್ಮ 'ಕೈ ತಪ್ಪಿ' ಹೋಗುತ್ತಾರೆಂಬ ಭಯದಿಂದ ಬಂಡವಾಳಗಾರರು 'ಸಂಪೂರ್ಣ ಉದ್ಯೋಗ'ದ ಸ್ಥಿತಿಯನ್ನು–ಅದರ ನಿಜ ಅರ್ಥದಲ್ಲಿಯೂ– ವಿರೋಧಿಸುವವರೇ ಎಂಬುದನ್ನು ಎರಡನೇ ಧಾರೆಯ ಪ್ರತಿಪಾದಕರು ಒಪ್ಪಿಕೊಳ್ಳುತ್ತಾರೆ. ಆದರೂ, ಈ ಕ್ರಮದಿಂದಾಗಿ, ಉದ್ಯೋಗಗಳ ಮಟ್ಟ ಇನ್ನೂ ಹೆಚ್ಚುತ್ತದೆ ಎಂದು ಕಳವಳಪಡುತ್ತಾರೆ.

ಇನ್ನೊಂದು ಪ್ರಶ್ನೆಯೂ ಏಳುತ್ತದೆ: ಪ್ರಭುತ್ವದ ಮದ್ಯಪ್ರವೇಶ ಕೆಲಸಗಾರರಿಗೆ ಮತ್ತು ಬಂಡವಾಳಗಾರರಿಗೆ ಲಾಭವಾಗುವಂತಿದ್ದರೆ ಅಂತಹ ಪ್ರಯತ್ನ ಯಾಕೆ ಮಾಡಿಲ್ಲ? ಈ ಪ್ರಶ್ನೆಗೆ ಕೀನ್ಸ್ ಹೀಗೆ ಉತ್ತರಿಸಿದ್ದರು: ಸೈದ್ಧಾಂತಿಕ ತಿಳುವಳಿಕೆಯ ಕೊರತೆಯಿಂದ ಬಂಡವಾಳಗಾರರು ಪ್ರಭುತ್ವದ ಮದ್ಯಪ್ರವೇಶವನ್ನು ವಿರೋಧಿಸಿದರು. ಬೇಡಿಕೆಯ ಕೊರತೆ ಏಕೆ ಉಂಟಾಗುತ್ತದೆ ಮತ್ತು ಪ್ರಭುತ್ವ ಹೇಗೆ ಅದನ್ನು ನಿರ್ವಹಿಸುತ್ತದೆ ಎಂಬುದರ ಸರಿಯಾದ ತಿಳುವಳಿಕೆ ಮೂಡಿದಾಗ ಅವರ ವಿರೋ ಧ ಮರೆಯಾಗುತ್ತದೆ.

ಬಂಡವಾಳಗಾರರಿಗೆ ಒಂದು ವೇಳೆ ಅಂತಹ ತಿಳುವಳಿಕೆ ಇದ್ದಿದ್ದರೂ, ವೈಯುಕ್ತಿಕ ನೆಲೆಯಲ್ಲಿ ಬೇಡಿಕೆ ಕೊರತೆಯ ಸಮಸ್ಯೆಯನ್ನು ಎದುರಿಸಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ, ಸಾಧ್ಯವಾದಷ್ಟು ಲಾಭಗಳಿಸುವ ("ಖಾಸಗಿ ವಿವೇಚನಾಶೀಲತೆ") ಬೋನಿನಲ್ಲಿ ಸಿಕ್ಕಿಹಾಕಿಕೊಂಡಿದ್ದ ಅವರಿಗೆ ಈ ಸಮಸ್ಯೆಯನ್ನು ಎದುರಿಸಲು "ಸಾಮಾಜಿಕ ವಿವೇಚನಾಶೀಲತೆ" ಉಳ್ಳ ಶಕ್ತಿಯೊಂದು ಬೇಕಿತ್ತು – ಬಂಡವಾಳಶಾಹಿ ಪ್ರಭುತ್ವ.

ಬಾಹ್ಯ ಅಸ್ತಿತ್ವದ ಪ್ರಭುತ್ವ

ಅದರ ಅರ್ಥವೆಂದರೆ, ಮಾರುಕಟ್ಟೆಯ ಆದೇಶ ಮೀರುವ ತಾಕತ್ತಿರುವ, ಅದರ ಮಾನದಂಡಗಳಿಗೆ ಬಗ್ಗದ, ಮತ್ತು ಅದರ "ಹೊರಗೆ" ಸ್ವತಂತ್ರ ಅಸ್ತಿತ್ವ ಉಳ್ಳ ಪ್ರಭುತ್ವದ ಅವಶ್ಯಕತೆ ಬಂಡವಾಳಶಾಹಿಗಿತ್ತು. ಈ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ಅದು ಅನೇಕ ಸಂಸ್ಥೆಗಳನ್ನು ಸ್ಥಾಪಿಸಿತು. ಈ ಸಂಸ್ಥೆಗಳು ತೆಗೆದುಕೊಂಡ ಮೂರು ಕ್ರಮಗಳು ಬಹಳ ಮುಖ್ಯವಾಗಿವೆ.

ಮೊದಲನೆಯದು, ಗಡಿಗಳಾಚೆ ಬಂಡವಾಳದ ಹರಿವಿನ ಮೇಲೆ ಪ್ರಭುತ್ವದ ನಿಯಂತ್ರಣ. ಅತೃಪ್ತರ ಹಣ ಹಿಂತೆಗೆಯುವ ಬೆದರಿಕೆಗಳಿಗೆ ಪ್ರಭುತ್ವ ಬಗ್ಗುತ್ತಿರಲಿಲ್ಲ. ಹಾಗಾಗಿ, ಎಲ್ಲ ದೇಶಗಳಲ್ಲೂ ಬಂಡವಾಳ ಹರಿವಿನ ಮೇಲೆ ನಿಯಂತ್ರಣವಿತ್ತು.

ಎರಡನೆಯದು, ವಿತ್ತೀಯ ಕೊರತೆ ನೀಗಿಕೊಳ್ಳಲು ಪ್ರಭುತ್ವ ಸಾಲ ಮಾಡುವಾಗ ಮಾರುಕಟ್ಟೆಯ ಭಾವನೆಗಳಿಗೆ ಸೊಪ್ಪುಹಾಕುತ್ತಿರಲಿಲ್ಲ.

ಮೂರನೆಯದು, ಪ್ರಭುತ್ವ ಆರೋಗ್ಯ, ಶಿಕ್ಷಣ ಮುಂತಾದ ಸೇವೆಗಳಿಗೆ ಮಾಡುತ್ತಿದ್ದ ಖರ್ಚುಗಳನ್ನು ಲಾಭ–ನಷ್ಟದ ದೃಷ್ಟಿಯಿಂದ ಖಾಸಗಿ ಸಂಸ್ಥೆಗಳ ಖರ್ಚಿನೊಂದಿಗೆ ಹೋಲಿಕೆ ಮಾಡುವುದಾಗಲಿ, ಖರ್ಚುಗಳ ಅವಶ್ಯಕತೆಯ ಬಗ್ಗೆಯಾಗಲಿ ಅಥವಾ ಸರ್ಕಾರದ ಲಾಭ ನಷ್ಟಗಳ ಮೇಲಾಗಲಿ ವಿವಾದಗಳಿರಲಿಲ್ಲ. ಮಾರುಕಟ್ಟೆಯ ಅಂಜಿಕೆ ಇಲ್ಲದೆ ಪ್ರಭುತ್ವ ತನಗೆ ಬೇಕಾದಂತೆ ಖರ್ಚುಮಾಡುತ್ತಿತ್ತು.

ಈ ಸಂಸ್ಥೆಗಳು/ಕ್ರಮಗಳು ಈಗ ಇಲ್ಲವಾಗಿವೆ. ಹಣಕಾಸು ಜಾಗತೀಕರಣ ಈಗ ಹೊಸ ಅರ್ಥವನ್ನೇ ಪಡೆದಿದೆ. ಅಂತಾರಾಷ್ಟ್ರೀಯ ಹೂಡಿಕೆದಾರರ ವಿಶ್ವಾಸ ಕಳೆದುಕೊಳ್ಳುವ ಭಯದಿಂದ ಪ್ರಭುತ್ವ ಅನುಸರಿಸುವ ನೀತಿಗಳು ಬಲವಂತಕ್ಕೊಳಗಾಗಿವೆ. ಹೂಡಿಕೆದಾರರು ಸರ್ಕಾರಗಳ ಬಜೆಟ್ ಕೊರತೆ ನೀತಿಗೆ ಆಕ್ಷೇಪಿಸುವುದರಿಂದ ಅನೇಕ ದೇಶಗಳು ತಮ್ಮ ಬಜೆಟ್ ಕೊರತೆಯನ್ನು ಜಿಡಿಪಿಯ ಶೇ.3ರ ಮಿತಿಯಲ್ಲಿಡುತ್ತಿವೆ. ಅದೇ ರೀತಿಯಲ್ಲಿ, ಕೇಂದ್ರ ಬ್ಯಾಂಕ್‌ನ (ರಿಸರ್ವ್ ಬ್ಯಾಂಕ್) ಸ್ವಾಯತ್ತತೆ ಹಣಕಾಸು ಬಂಡವಾಳದ ಒತ್ತಡಕ್ಕೆ ಒಳಗಾಗಿದೆ. ಅಂದರೆ, ಸಾರ್ವಜನಿಕ ಸಾಲ ಎತ್ತಲು ಅದು ಮಾರುಕಟ್ಟೆಯ ಭಾವನೆಗಳಿಗೆ ತಲೆಬಾಗಬೇಕು. ಸರ್ಕಾರದ ಖರ್ಚುಗಳ ಮೇಲೆ ಮತ್ತು ಅದರ ಸಾಲಗಳ ಮೇಲೆ ಹಣ ಕಾಸು ಬಂಡವಾಳ ಮಿತಿ ಹಾಕಿರುವುದರಿಂದ ಸರ್ಕಾರದ ಅನೇಕ ಸೇವೆಗಳು ಖಾಸಗೀಕರಣಗೊಂಡಿವೆ. ಹಾಗಾಗಿ, ಸಾರ್ವಜನಿಕ ಸೇವೆ ಒದಗಿಸುವ ಸರ್ಕಾರಿ ಸಂಸ್ಥೆಗಳು ಹಾಸಿಗೆ ಇದ್ದಷ್ಟು ಕಾಲು ಚಾಚುವ ಪರಿಸ್ಥಿತಿಯಲ್ಲಿವೆ.

ಮಾರುಕಟ್ಟೆಯ ಸೆರೆಯಾಳು

ಈ ಎಲ್ಲ ವಿವರಣೆಯ ಸಾರ ಏನೆಂದರೆ, ಪ್ರಭುತ್ವ ಮಾರುಕಟ್ಟೆಯ ಸೆರೆಯಾಳಾಗಿದೆ. ಬಂಡವಾಳಶಾಹಿ ಸಮರ್ಥನೆಯ ಎರಡನೆಯ ನಿರೂಪಣೆಯ ಪ್ರತಿಪಾದಕರು ಅಂದುಕೊಂಡಿದ್ದಂತೆ ಮಾರುಕಟ್ಟೆಯ ಹೊರಗಿದ್ದ ಪ್ರಭುತ್ವ ಖಾಸಗಿ ವಿವೇಚನಾಶೀಲತೆಯ ಪರಿಧಿಯಲ್ಲಿದ್ದ ಮಾರುಕಟ್ಟೆಯ ಲೋಪ ದೋಷಗಳನ್ನು ಸರಿಪಡಿಸುವ ಸಾಮಾಜಿಕ ವಿವೇಚನಾಶೀಲತೆಯ ಪ್ರತಿರೂಪವಾಗುವುದರ ಬದಲು ಪ್ರಭುತ್ವವೇ ಮಾರುಕಟ್ಟೆಯ ಸೆರೆಯಾಳಾಗಿದೆ. ಮಾರುಕಟ್ಟೆಯಲ್ಲಿ ಭಾಗವಹಿಸುವವರಲ್ಲಿ ಒಬ್ಬರ ಮಟ್ಟಕ್ಕೆ ಪ್ರಭುತ್ವ ಇಳಿದಿರುವ ಅಂಶವನ್ನು ಮೂಡೀಸ್ ಎಂಬ ರೇಟಿಂಗ್ ಎಜೆನ್ಸಿಯು ಒಮ್ಮೆ ಅಮೆರಿಕಾದ ಸರ್ಕಾರವನ್ನು ಸಾಲ ಮರುಪಾವತಿಯ ಸಾಮರ್ಥ್ಯದ ಬಗ್ಗೆ ತನ್ನ ಮಾನದಂಡದ ಪ್ರಕಾರ ಕೆಳದರ್ಜೆಗಿಳಿಸಿದ್ದ ಪರಿಸ್ಥಿತಿಯ ಮೂಲಕ ಕಾಣಬಹುದು. ಒಂದೇ ಮಾತಿನಲ್ಲಿ ಹೇಳುವುದಾದರೆ ಪ್ರಭುತ್ವವು ತನ್ನ ಅಧಿಕಾರ/ವಿಚಾರಶೀಲತೆಯನ್ನು ವ್ಯವಸ್ಥೆಯ ಮೇಲೆ ಜಾರಿಮಾಡುವ ಪರಿಸ್ಥಿತಿಯಲ್ಲಿಲ್ಲ.

ಬಂಡವಾಳಶಾಹಿ ಸಂಪೂರ್ಣ ಉದ್ಯೋಗ ಒದಗಿಸುತ್ತದೆ ಮತ್ತು ದಕ್ಷತೆಯಿಂದ ಕಾರ್ಯಪ್ರವೃತ್ತವಾಗಿರುತ್ತದೆ. ಆದ್ದರಿಂದ, ಪ್ರಭುತ್ವ ಮದ್ಯಪ್ರವೇಶ ಮಾಡುವ ಅಗತ್ಯವಿಲ್ಲ ಎಂಬ ಎರಡನೆಯ ಧಾರೆಯ ಉದಾರಿ ಆರ್ಥಿಕ ಸಿದ್ಧಾಂತವು ಸರಿ ಎನ್ನುವುದಾದರೆ, ಆಗ, ಮಾರುಕಟ್ಟೆಯೊಂದಿಗೆ ಪ್ರಭುತ್ವದ ಏಕೀಕರಣ ಅಥವಾ ಪ್ರಭುತ್ವವನ್ನು ಮಾರುಕಟ್ಟೆ ವಶಪಡಿಸಿಕೊಂಡಿರುವ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ. (ಮಾರ್ಕ್ಸ್‌ವಾದಿ ದೃಷ್ಟಿಕೋನದಲ್ಲಿ ಇದು, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ತಾನು ಹೇಳಿದಂತೆಯೇ ಕೇಳಬೇಕೆಂದು ಪ್ರಭುತ್ವದ ಮೇಲೆ ಹಾಕಿರುವ ಒತ್ತಡವಲ್ಲದೆ ಬೇರೇನೂ ಅಲ್ಲ). ಆದರೆ, ಪ್ರಭುತ್ವವನ್ನು ಮಾರುಕಟ್ಟೆ ವಶಪಡಿಸಿಕೊಂಡಿರುವುದನ್ನು ಉದಾರವಾದಿಗಳು ಒಂದು ಸೈದ್ಧಾಂತಿಕ ಸಮರ್ಥನೆಯಾಗಿ ಒಡ್ಡುತ್ತಿರುವುದು ಹಾಸ್ಯಾಸ್ಪದವಾಗಿದೆ. ಮುಂದುವರಿಯುತ್ತಿರುವ ಬಂಡವಾಳಶಾಹಿ ಬಿಕ್ಕಟ್ಟಿನಿಂದಾಗಿ ಅಮೆರಿಕಾದ ದುಡಿಯುವವರ ಸಂಖ್ಯೆಯಲ್ಲಿ ಕಡಿಮೆ ಅಂದರೂ ಶೇ.11 ಮಂದಿ ನಿರುದ್ಯೋಗಿಗಳಿರುವುದು, ಯೂರೊ ವಲಯದಲ್ಲಿ ಹಾಗೂ ಮೂರನೆ ಜಗತ್ತಿನಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯ ನಿರುದ್ಯೋಗಿಗಳಿರುವುದು, ಬಂಡವಾಳಶಾಹಿ ಸಂಪೂರ್ಣ ಉದ್ಯೋಗ ಒದಗಿಸುತ್ತದೆ ಎಂಬ ವಾದದ ಅಸಂಬದ್ಧತೆಯನ್ನು ದೃಢಪಡಿಸುತ್ತದೆ.

ಬಂಡವಾಳಶಾಹಿ ಸಮರ್ಥನೆಯಲ್ಲಿ ಮೊದಲ ಧಾರೆಯ ಉದಾರಿ ಆರ್ಥಿಕ ಸಿದ್ಧಾಂತವು ತಪ್ಪಾಗಿರುವುದರಿಂದ ಮತ್ತು ಎರಡನೆಯ ಧಾರೆಯ ಸಿದ್ಧಾಂತವು ಬರಡಾಗಿರುವುದರಿಂದ (ಅಂದರೆ, ಬಂಡವಾಳಶಾಹಿ ವ್ಯವಸ್ಥೆಯ ಪಿಡುಗುಗಳನ್ನು ಗುಣಪಡಿಸಲು ಯಾವ ಪ್ರಭುತ್ವದ ಮೇಲೆ ನಂಬುಗೆ ಇಟ್ಟು ಅದರ ಮದ್ಯಪ್ರವೇಶ ಬಯಸಿದ್ದರೊ, ಅದೇ ಪ್ರಭುತ್ವವನ್ನು ಮಾರುಕಟ್ಟೆಯೇ ನುಂಗಿರುವುದರಿಂದ ಬಂಡವಾಳಶಾಹಿಗೆ ಬೇರೆ ದಾರಿಯೇ ಇಲ್ಲ), ಇಂದು ಸಮಾಜವಾದದ ವಿರುದ್ಧವಾಗಿ ನವ ಉದಾರವಾದಿಗಳ ಪ್ರತಿವಾದವೇ ಇಲ್ಲವಾಗಿದೆ. ಸಮಾಜವಾದಿ ಸಿದ್ಧಾಂತ ಇಂದಿನ ದಿನಕ್ಕೆ ಸಲ್ಲುವಂತೆ ಸಜ್ಜಾಗಬೇಕು ಮತ್ತು ಸಮಾಜವಾದಿ ಚಳುವಳಿ ಮುನ್ನುಗ್ಗುವ ವೇಗ ಪಡೆಯಬೇಕು. ಈ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿರುವ ವಾತಾವರಣ ಹೇಗಿದೆ ಎಂದರೆ, ಆ ವಾತಾವರಣದಲ್ಲಿ ಸಮಾಜವಾದಕ್ಕೆ ನಂಬಲರ್ಹ ಉದಾರಿ ಸೈದ್ಧಾಂತಿಕ ವಿರೋಧವೇ ಇಲ್ಲ.

ತ್ರಿಪುರಾ ಸ್ಥಳೀಯ ಸಂಸ್ಥೆ ಚುನಾವಣೆ:

ಎಡಪಕ್ಷಗಳ ಜಯಭೇರಿ

2015ರ ಡಿಸೆಂಬರ್ 9ರಂದು ತ್ರಿಪುರಾದಲ್ಲಿ ನಡೆದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಎಡರಂಗ ಅದ್ಭುತ ಜಯಭೇರಿ ಬಾರಿಸಿದೆ. ಅಗರ್ತಲಾ ಮುನಿಸಿಪಲ್ ಕಾರ್ಪೋರೇಷನ್, 13 ಮುನಿಸಿಪಲ್ ಮಂಡಳಿಗಳು ಮತ್ತು ಐದು ನಗರ ಪಂಚಾಯತ್ ಸೇರಿದಂತೆ 19 ಸಂಸ್ಥೆಗಳಿಗೆ ಅಂದು ನಡೆದ ಚುನಾವಣೆಗಳಲ್ಲಿ ಎಡರಂಗಕ್ಕೆ ಜಯ ದೊರಕಿದೆ. ಹಿಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಗೆದ್ದಿದ್ದ ಅಂಬಸ್ಸಾ ಮುನಿಸಿಪಲ್ ಕೌನ್ಸಿಲ್ ಮತ್ತು ಸಬ್‌ರೂಮ್ ನಗರ ಪಂಚಾಯತಿಯನ್ನು ಕೂಡ ಈ ಬಾರಿ ಎಡಪಕ್ಷಗಳು ಗೆದ್ದಿವೆ.

ಡಿಸೆಂಬರ್ 12 ರಂದು ಪ್ರಕಟವಾದ ಫಲಿತಾಂಶಗಳು ತ್ರಿಪುರಾ ರಾಜ್ಯದ ನಗರ ಪ್ರದೇಶಗಳಲ್ಲಿ ವಾಸಿಸುವ ಜನರು ಎಡರಂಗ ಸರಕಾರದಲ್ಲಿ ಮತ್ತೆ ವಿಶ್ವಾಸ ವ್ಯಕ್ತಪಡಿಸಿರುವುದರ ದ್ಯೋತಕವಾಗಿದೆ. ಅಗರ್ತಲಾ ಮುನಿಸಿಪಲ್ ಕಾರ್ಪೋರೇಷನ್‌ನ 49 ವಾರ್ಡ್‌ಗಳ ಪೈಕಿ 45 ರಲ್ಲಿ ಎಡರಂಗ ಜಯ ದಾಖಲಿಸಿದೆ. ಉಳಿದ ನಾಲ್ಕನ್ನು ಕಾಂಗ್ರೆಸ್ ಪಡೆದಿದೆ. ಹಿಂದಿನ ಬಾರಿ ಚುನಾವಣೆ ನಡೆದಾಗ ಅಲ್ಲಿ 35 ವಾರ್ಡ್‌ಗಳಿದ್ದವು. ಅದರಲ್ಲಿ 27ರಲ್ಲಿ ಎಡರಂಗ ಗೆದ್ದಿತ್ತು.

ಬೆಲೋನಿಯಾ, ಸಂತಿರ್‌ಬಜಾರ್, ಮೆಲಘಡ್, ಮೋಹನೋರ, ರನಿರ್‌ಬಜಾರ್, ತೇಲಿಮುರ್ರಾ ಮತ್ತು ಖೊವೈ ಮುನಿಸಿಪಲ್ ಕೌನ್ಸಿಲ್‌ಗಳಲ್ಲಿ ಪ್ರತಿಪಕ್ಷಗಳು ಮಾಡಿರುವುದು ಶೂನ್ಯ ಸಂಪಾದನೆ. ಅಲ್ಲಿ ಒಂದೇ ಒಂದು ಸ್ಥಾನವನ್ನೂ ಗೆಲ್ಲುವಲ್ಲಿ ಅವು ವಿಫಲವಾಗಿವೆ. ಸಬ್‌ರೂಮ್, ಕಮಲಾಪುರ, ಅಮರ್‌ಪುರ ಮತ್ತು ಪಾನಿಸಾಗರ್ ನಗರ ಪಂಚಾಯತ್‌ಗಳಲ್ಲಿ ಕೂಡ ಪ್ರತಿಪಕ್ಷಗಳ ಸಾಧನೆ ಶೂನ್ಯವಾಗಿದೆ.

ಒಟ್ಟಾರೆಯಾಗಿ ನಗರ ಸ್ಥಳೀಯ ಸಂಸ್ಥೆಗಳ ಒಟ್ಟು 310 ಸ್ಥಾನಗಳ ಪೈಕಿ ಎಡರಂಗ 291ರಲ್ಲಿ ಗೆದ್ದಿದೆ. ಕಾಂಗ್ರೆಸ್ 13, ಬಿಜೆಪಿ ನಾಲ್ಕು ಮತ್ತು ಇತರರು ಎರಡು ಕ್ಷೇತ್ರಗಳಲ್ಲಷ್ಟೆ ಗೆಲುವು ಸಾಧಿಸಿದ್ದಾರೆ. ಜಯ ಸಾಧಿಸಿದ 291 ಸ್ಥಾನಗಳ ಪೈಕಿ ಸಿಪಿಐ(ಎಂ) 278 ಸ್ಥಾನಗಳಲ್ಲಿ ಗೆಲುವಿನ ಸವಿ ಉಂಡಿದೆ. ಸಿಪಿಐ ಐದು, ಆರ್‌ಎಸ್‌ಪಿ ಆರು ಮತ್ತು ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಎರಡರಲ್ಲಿ ಗೆದ್ದಿವೆ.

ಜೈರಾನಾ ನಗರ ಪಂಚಾಯತ್‌ನ ಎಲ್ಲಾ 11 ಸ್ಥಾನಗಳಲ್ಲಿ ಎಡರಂಗ ಅವಿರೋಧವಾಗಿ ಆಯ್ಕೆಯಾಗಿದ್ದು ಅಮರಪುರದಲ್ಲಿ 11 ಸ್ಥಾನಗಳ ಪೈಕಿ ಆರರಲ್ಲಿ ಹಾಗೂ ಖೊವೈ ನಗರ ಪಂಚಾಯತ್‌ನ 15 ಸ್ಥಾನಗಳ ಪೈಕಿ ಎರಡರಲ್ಲಿ ಅವಿರೋಧವಾಗಿ ಗೆದ್ದಿದೆ. ಎಡರಂಗದ ಒಟ್ಟಾರೆ ಸಾಧನೆ ಶೇಕಡಾ 93.87. ತೃಣಮೂಲ ಕಾಂಗ್ರೆಸ್ ಪಕ್ಷ ಒಂದೇ ಒಂದು ಸ್ಥಾನದಲ್ಲೂ ಗೆಲ್ಲುವಲ್ಲಿ ವಿಫಲವಾಗಿದೆ ಎನ್ನುವುದು ಇಲ್ಲಿ ಗಮನಾರ್ಹ. ಆದರೆ ಎರಡು ನಗರ ಮಂಡಳಿಗಳಲ್ಲಿ ಬಿಜೆಪಿ ತಲಾ ಎರಡು ಸ್ಥಾನಗಳನ್ನು ಗಳಿಸಿರುವುದು ಕಳವಳದ ಸಂಗತಿಯಾಗಿದೆ. ಕಾಂಗ್ರೆಸ್‌ನ ಗಣನೀಯ ಪ್ರಮಾಣದ ಮತಗಳು ಬಿಜೆಪಿಗೆ ಹೋಗಿರುವುದು ಹೌದಾದರೂ ಬೇರೆ ಯಾವ ಅಂಶಗಳು ಬಿಜೆಪಿಯ ಜಯಕ್ಕೆ ಕಾರಣವಾದವು ಎಂಬುದನ್ನು ಗಂಭೀರವಾಗಿ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ಡಿಸೆಂಬರ್ 9ರ ಚುನಾವಣೆ ಹಬ್ಬದ ವಾತಾವರಣದಲ್ಲಿ ಸಂಪೂರ್ಣ ಶಾಂತಿಯುತವಾಗಿ ನಡೆದಿತ್ತು. ಶೇಕಡಾ 88.9 ಮತದಾರರು ಮತವನ್ನು ಚಲಾಯಿಸಿದ್ದರು.

ಫಲಿತಾಂಶ ಪ್ರಕಟಣೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಡರಂಗ ಸಂಚಾಲಕ ಕಾಮ್ರೇಡ್ ಖಗೇನ್‌ದಾಸ್ ಎಡರಂಗದ ಪರವಾಗಿ ತೀರ್ಪು ನೀಡಿದ ರಾಜ್ಯದ ಜನರು ಹಾಗೂ ಮತದಾರರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಈ ಭಾರೀ ವಿಜಯವು, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಮಾತ್ರವೇ ನಿಜವಾದ ಪರ್ಯಾಯ ಎಂಬ ಸಂದೇಶವನ್ನು ಇಡೀ ದೇಶಕ್ಕೆ ಸಾರಿದೆಎಂದು ಕಾ. ದಾಸ್ ಹೇಳಿದರು. ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಮತ್ತು ಶಾಂತಿ ಹಾಗೂ ನೆಮ್ಮದಿಯನ್ನು ಕಾಯ್ದುಕೊಳ್ಳಲು ಎಡರಂಗ ನೀಡಿದ ಕರೆಗೆ ಜನತೆ ಬೆಂಬಲ ನೀಡಿದ್ದಾರೆ ಎನ್ನುವುದನ್ನು ಈ ವಿಜಯ ತೋರಿಸಿಕೊಟ್ಟಿದೆ ಎಂದರು. ಇದು ಮೋದಿ ಸರಕಾರದ ಜನವಿರೋಧಿ ನೀತಿಗಳು ಮತ್ತು ಆರ್‌ಎಸ್‌ಎಸ್‌ನ ವಿಚ್ಛಿದ್ರಕಾರಿ ಹಿಂದೂರಾಷ್ಟ್ರ ಅಜೆಂಡಾಕ್ಕೆ ಜನತೆ ನೀಡಿರುವ ತಕ್ಕ ಉತ್ತರವಾಗಿದೆ ಎಂದೂ ಅವರು ಅಭಿಪ್ರಾಯಪಟ್ಟರು. ರಾಜ್ಯದ ಅಭಿವೃದ್ಧಿಗಾಗಿ ಏನನ್ನೂ ಮಾಡದ ಕಾಂಗ್ರೆಸ್‌ಗೆ ಜನರು ತಕ್ಕ ಶಿಕ್ಷೆ ನೀಡಿದ್ದಾರೆ ಎಂಬುದು ಸ್ಪಷ್ಟವಾಗಿದೆ ಎಂದರು. ಏನೇ ಇದ್ದರೂ ಬಿಜೆಪಿಯ ಛಿದ್ರಕಾರಿ ರಾಜಕೀಯ ಮತ್ತು ಐಪಿಎಫ್‌ಟಿಯ ಪ್ರತ್ಯೇಕ ರಾಜ್ಯ ಘೋಷಣೆಯ ಬಗ್ಗೆ ಎಚ್ಚರದಿಂದ ಇರಬೇಕು ಎಂದು ಅವರು ಪ್ರತಿಪಾದಿಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿಜನ್‌ಧರ್, ಫಾರ್ವರ್ಡ್ ಬ್ಲಾಕ್ ರಾಜ್ಯ ಅಧ್ಯಕ್ಷ ಬ್ರಿಜ್‌ಗೋಪಾಲ್ ರಾಯ್, ಸಿಪಿಐ ರಾಜ್ಯ ಕಾರ್ಯದರ್ಶಿ ರಣಜಿತ್ ಮಜುಂದಾರ್ ಹಾಗೂ ಆರ್‌ಎಸ್‌ಪಿ ನಾಯಕ ದೀಪಕ್‌ದೇವ್ ಸುದ್ದಿಗೋಷ್ಠಿಯಲ್ಲಿ ಇದ್ದರು.

ಸಿಪಿಐ(ಎಂ) ಮತ್ತು ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಪ್ರತ್ಯೇಕ ಸಂದೇಶಗಳಲ್ಲಿ ರಾಜ್ಯದ ಜನತೆಯನ್ನು ಅಭಿನಂದಿಸಿದ್ದಾರೆ.

ಎಸ್.ಎಫ್.ಐ.-45 ರ ಸಂಭ್ರಮ

ಭಾರತ ವಿದ್ಯಾರ್ಥಿ ಫೆಡರೇಷನ್ ಸಂಘಟನೆ ಈಗ 45ರ ಸಂಭ್ರಮ, ಸಂಭ್ರಮ ಎನ್ನುವುದಕ್ಕಿಂತ ವಿದ್ಯಾರ್ಥಿಗಳಿಗೆ ಎದುರಾಗುತ್ತಿರುವ ಹೊಸ ಸವಾಲುಗಳನ್ನು ಎದುರಿಸಿ ಹೋರಾಟವನ್ನು ತೀವ್ರಗೊಳಿಸುವ ಅನಿವಾರ್ಯತೆ ಈಗಿನ ಅಗತ್ಯವೆನ್ನಬಹುದು. ಸ್ವಾತಂತ್ರ ನಂತರದಲ್ಲಿ ಬಂದ ಸರ್ಕಾರಗಳು ಶಿಕ್ಷಣವನ್ನು ಎಲ್ಲರಿಗೂ ನೀಡುವ ಬದಲು, ಉಳ್ಳವರಿಗೆ ಮಾತ್ರ ಶಿಕ್ಷಣ ಎಂಬ ಅನಾದಿ ಕಾಲದ ನೀತಿಯನ್ನೇ ಮುಂದುವರೆಸಿದ್ದವು. ಶಿಕ್ಷಣವನ್ನು ಖಾಸಗೀಕರಣದ ವಿರುದ್ಧ ಮತ್ತುಎಲ್ಲರಿಗೂ ಎಂಬ ಧ್ಯೇಯದೊಂದಿಗೆ 1970ರಲ್ಲಿ ತಿರುವನಂತಪುರಂನಲ್ಲಿ ನಡೆದ ಅಖಿಲ ಭಾರತ ಸಮ್ಮೇಳನದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್‌ಎಂದುದೇಶದಲ್ಲಿ ಪ್ರಾರಂಭವಾಯಿತು.

ಕಳೆದ 45 ವರ್ಷಗಳಿಂದ ಶಿಕ್ಷಣದ ಖಾಸಗೀಕರಣ, ಕೋಮುವಾದೀಕರಣದ ವಿರುದ್ಧ, ಸರ್ಕಾರದ ನೀತಿಗಳಿಂದಾಗಿ ಶಿಕ್ಷಣಕ್ಕೆ ವಿನಿಯೋಗಿಸುವ ಹಣಕಾಸಿನ ಪ್ರಮಾಣವನ್ನು ವರ್ಷದಿಂದ ವರ್ಷಕ್ಕೆಕಡಿಮೆ ಮಾಡುವುದನ್ನು ವಿರೋಧಿಸಿ, ಸರ್ಕಾರಿ ಶಾಲಾ–ಕಾಲೇಜುಗಳನ್ನು ಉಳಿಸಬೇಕೆಂದು, ಹಣ ಉಳ್ಳವರಿಗೆ ಮಾತ್ರ ಶಿಕ್ಷಣವಲ್ಲ, ಎಲ್ಲರಿಗೂ ಶಿಕ್ಷಣ ನೀಡಬೇಕೆಂದು ನಿರಂತರ ಹೋರಾಟವನ್ನು ಸಂಘಟಿಸುತ್ತಾ ಬಂದಎಸ್.ಎಫ್.ಐ. ಸಂಘಟನೆಯ 45ನೇ ವರ್ಷದ ಸಂಭ್ರಮಾಚರಣೆಯನ್ನು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗಿತ್ತು.

ಹಾವೇರಿಯಲ್ಲಿ ಎಸ್‌ಎಫ್‌ಐ 45ರ ಸಮಾರೋಪ ಸಮಾರಂಭ ಹಾಗೂ ಬಹುಮಾನ ವಿತರಣಾ ಕಾರ್ಯಕ್ರಮ

ಎಸ್‌ಎಫ್‌ಐಹಾವೇರಿಜಿಲ್ಲಾಸಮಿತಿಯುನಡೆಸಿದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ನಗರದ ಎಸ್‌ವಿಐ ವಿಜ್ಞಾನ ಪದವಿ ಪೂರ್ವಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೌಢ್ಯ ಪ್ರತಿಬಂಧಕ ಕಾಯ್ದೆ ಜಾರಿ ಬೇಕಾ ಅಥವಾ ಬೇಡಾ ಎಂಬ ವಿಷಯದಚರ್ಚಾ ಸ್ಪರ್ಧೆಯಲ್ಲಿ ಮಾತನಾಡಿದ ಎಸ್‌ವಿಐ ಕಾಲೇಜಿನ ವಿದ್ಯಾರ್ಥಿನಿ ಸ್ಫೂರ್ತಿ ಈ.ಟಿ. ಪ್ರಥಮ ಬಹುಮಾನ ಪಡೆದರು, ಇದೇ ವಿಷಯದ ವಿರೋಧವಾಗಿ ಮಾತನಾಡಿದ ಜಿ.ಹೆಚ್‌ಕಾಲೇಜು ವಿದ್ಯಾರ್ಥಿ ಸಾಗರ ಸುಳ್ಳಿಹಳ್ಳಿ ಪ್ರಥಮ ಬಹುಮಾನ ಪಡೆದರು. 40 ಜನ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಪ್ರಬಂಧ ಸ್ಪ ರ್ಧೆ ಹಾಗೂ ಭಾಷಣ ಸ್ಪರ್ಧೆಯಲ್ಲಿ ಬಾಗವಹಿಸಿದ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷರಾದ ಬಸವರಾಜ ಪೂಜಾರ, ಎಸ್‌ಎಫ್‌ಐನ ಮಾಜಿ ಮುಖಂಡರು ಹಾಗೂ ಸಿಐಟಿಯುನ ಹಾವೇರಿ ಜಿಲ್ಲಾ ಸಂಚಾಲಕರಾದ ವಿನಾಯಕ ಕುರುಬರ ಮತ್ತು ಹಿರಿಯ ವಕೀಲರಾದ ಜಿ.ಎ.ಹಿರೇಮಠ ಮಾತನಾಡಿದರು. ಎಸ್‌ಎಫ್‌ಐಜಿಲ್ಲಾ ಅಧ್ಯಕ್ಷರಾದ ರೇಣುಕಾ ಕಹಾರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಸುಭಾಸ ಎಂ. ಪ್ರಾಸ್ತಾವಿಕವಾಗಿ ಮಾತನಾಡಿದದರು. ಎಸ್‌ವಿಐ ವಿಜ್ಞಾನ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಡಾ||ಶ್ರೀಗೌರಿ ಎಂ.ಪಿ.ಎಂ ವೇದಿಕೆ ಮೇಲಿದ್ದರು. ವಿಜಯಕುಮಾರ ಎಸ್. ಕಾರ್ಯಕ್ರಮವನ್ನು ನಿರ್ವಹಿಸಿದರು. ಕಾರ್ಯಕ್ರಮ ಆರಂಭಕ್ಕೂ ಮುನ್ನ ಎಸ್‌ಎಫ್‌ಐನ ಶ್ವೇತ ಪತಾಕೆಯ ಧ್ವಜಾರೋಹಣ ಮಾಡಲಾಯಿತು.

ಗದಗ ಜಿಲ್ಲೆಯ ಗಜೇಂದ್ರಗಡದ ಕೆ.ವಿ.ಎಸ್.ಆರ್. ಪಿಯು ಕಾಲೇಜಿನಲ್ಲಿ ಎಸ್.ಎಫ್.ಐ ಘಟಕದಿಂದ ನಡೆದ 45ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಕಾರ್ಯಕ್ರಮವನ್ನು ಎಸ್.ಎಫ್.ಐ ಮಾಜಿ ಮುಖಂಡರಾದ ಎಂ.ಎಸ್.ಹಡಪದ ಉದ್ಘಾಟಿಸಿದರು. ಉಪನ್ಯಾಸಕರಾದ ಸತೀಶ ಪಾಸಿ, ಎಸ್.ಎಫ್.ಐ ಜಿಲ್ಲಾ ಕಾರ್ಯದರ್ಶಿ ಶಿವಾನಂದ ಬೋಸ್ಲೆ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ಉಪ ಪ್ರಾಚಾರ್ಯರಾದ ಆರ್.ಎಸ್.ಪೂಜಾರ ವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಎಸ್.ಎಫ್.ಐ ಮುಖಂಡ ಕೃಷ್ಣ ಪೂಜಾರ ಸ್ವಾಗತವನ್ನು ಸುನೀಲ ಲಮಾಣಿ ಹಾಗೂ ವಂದನಾರ್ಪಣೆಯನ್ನು ಹನಮಂತ ಮಂಜುಗುಡ್ಡ ನಡೆಸಿ ಕೊಟ್ಟರು. ಈ ವೇಳೆ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಉತ್ತರಕನ್ನಡ ಜಿಲ್ಲೆಯ ಕಾರವಾರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಣೇಶ ರಾಥೋಡ್ ಚಾಲನೆ ನೀಡಿ ಮಾತನಾಡಿದರು. ಎಸ್.ಎಫ್.ಐ ವಿದ್ಯಾರ್ಥಿ ಚಳುವಳಿಯ ಮಾಜಿರಾಜ್ಯ ಮುಖಂಡರಾದ ಸಿಐಟಿಯುನ ಯಮುನಾಗಾಂವ್ಕರ್ ಮುಖ್ಯ ಭಾಷಣ ಮಾಡಿದರು. ರಾಜಸ್ತಾನದ ಸಿತಾರ್ ಜಿಲ್ಲೆಯಲ್ಲಿ ನಡೆಯಲಿರುವ ಎಸ್‌ಎಫ್‌ಐನ ರಾಷ್ಟ್ರ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಹೋಗಲಿರುವ ಸಂಗಾತಿಗಳಿಗೆ ರೈತ ಸಂಘದ ತಾಲೂಕಾ ಕಾರ್ಯದರ್ಶಿ ಶ್ಯಾಮನಾಥ ನಾಯ್ಕ ಅಭಿನಂದಿಸಿದರು. ವಿದ್ಯಾರ್ಥಿ ಉಪಸಮಿತಿ ಮುಖಂಡರಾದ ಸೌಮ್ಯ ಕಾಂಬಳೆ, ಶ್ವೇತಾ ಪಿಳ್ಳೈ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಮುಖಂಡರಾದ ಮೋಹಿನಿ ನಮ್ಸೇಕರ್, ವಿಮಲಾ, ಮಂಜುಳಾ, ಮಾಯಾ ಭಾಗವಹಿಸಿದ್ದರು.

ಉಡುಪಿ ಜಿಲ್ಲೆಯ ಎಸ್‌ಎಫ್‌ಐ ಕುಂದಾಪುರ ತಾಲ್ಲೂಕು ಸಮಿತಿ ವತಿಯಿಂದ 45ರ ಸಂಭ್ರಮವನ್ನು ಸಡಗರದಿಂದ ಆಚರಿಸಲಾಯಿತು. ಎಸ್‌ಎಫ್‌ಐ ಮಾಜಿ ಮುಖಂಡರಾದ ರಮಾನಾಥ ಭಂಡಾರಿರವರು ಧ್ವಜಾರೋಹಣ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ, ತಾಲ್ಲೂಕು ಅಧ್ಯಕ್ಷರಾದ ಅಕ್ಷಯ್ ವಡೇರ ಹೋಬಳಿ ಮಾತನಾಡಿದರು. ಈ ಸಂದರ್ಭದಲ್ಲಿ ಡಿವೈಎಫ್‌ಐನ ತಾಲ್ಲೂಕು ಕಾರ್ಯದರ್ಶಿ ರಾಜೇಶ್ ವಡೇರ ಹೋಬಳಿ, ಅಲ್ವಿನ್, ವಿನಯ್ ಪ್ರಭು, ಮತ್ತು ವಿದ್ಯಾರ್ಥಿ–ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ವತಿಯಿಂದ ಬೆಂಗಳೂರಿನ ಬಸವನಗುಡಿಯಲ್ಲಿರುವ ಜ್ಯೋತಿಬಸು ಭವನದಲ್ಲಿ ವಿದ್ಯಾರ್ಥಿಗಳು ಕೇಕ್‌ಕತ್ತರಿಸುವ ಮೂಲಕ ಎಸ್‌ಎಫ್‌ಐನ 45ರ ದಿನಾಚರಣೆ ಆಚರಿಸಲಾಯಿತು. ಮೆರವಣಿಗೆ ಹೊರಟ ವಿದ್ಯಾರ್ಥಿಗಳು ಆಶ್ರಮ ಸರ್ಕಲ್‌ನಲ್ಲಿರುವ ವಿವೇಕಾನಂದರವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಎಸ್‌ಎಫ್‌ಐ ಮಾಜಿ ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂರವರು ಸೇರಿದಂತೆ ಬೆಂ.ದಕ್ಷಿಣ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್, ಬೆಂ.ಉತ್ತರ ಜಿಲ್ಲಾ ಕಾರ್ಯದರ್ಶಿ ಚಿಕ್ಕರಾಜು ಮತ್ತಿತರ ಮುಖಂಡರು ಭಾಗವಹಿಸಿದ್ದರು.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಸಂಕಲ್ಪ ಪಿ.ಯು. ಕಾಲೇಜಿನಲ್ಲಿ ಎಸ್‌ಎಫ್‌ಐ 45ರ ಸಂಭ್ರಮವನ್ನು ಹಿರಿಯ ಸಾಹಿತಿ ಫೀರಭಾಷರವರು ಉದ್ಘಾಟಿಸಿದರು. ಗ್ಯಾನೇಶ ಕಡದಗ ಮಾತನಾಡಿದರು. ಪ್ರಾಂಶುಪಾಲರಾದ ಬಸವರಾಜರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಲಿಂಗಪ್ಪ ಹಣವಾಳ, ಬಾಳಪ್ಪ ಮತ್ತು ವಿದ್ಯಾರ್ಥಿಗಳು ಮುಖಂಡರು ಭಾಗವಹಿಸಿದ್ದರು.

ಇದಲ್ಲದೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಎಸ್. ಎಫ್.ಐ ಸಂಘಟನೆಯ ಸಂಭ್ರಮಾಚರಣೆಯನ್ನು ಆಚರಿಸಲಾಗಿದೆ ಎಂದು ವರದಿಗಳು ಬರುತ್ತಿವೆ.

PEA½ZAAY

ದೇವನೂರರು ಆಪರೇಷನ್ ಮಾಡಲು ಮುಂದಾಗಿರುವುದು ಒಂದು ಘಟ ಸರ್ಪವನ್ನು. ಆಪರೇಷನ್ ಮಾಡುವಾಗ ಆ ಸರ್ಪ ಸಾಯಲೂಬಹುದು ಅಥವಾ ಬದುಕಿ ನಮ್ಮನ್ನೆ ಕುಕ್ಕಬಹುದು. ದೇಹದ ಯಾವುದೋ ಒಂದು ಭಾಗವಾಗಿದ್ದರೆ ಕತ್ತರಿಸಿ ಬಿಸಾಡಬಹುದಿತ್ತು. ಮೈಯೆಲ್ಲಾ ವಿಷವಿರುವ ಸರ್ಪವನ್ನು ಹೇಗೆ ಆಪರೇಷನ್ ಮಾಡುವುದು? .. .. ಭಗವದ್ಗೀತೆಯಲ್ಲಿರುವ ತಾರತಮ್ಯತೆಯ ರೋಗದ ಗೆಡ್ಡೆಯನ್ನು ಆಪರೇಷನ್ ಮಾಡಿ ಬಿಸಾಡಿ ಗೀತೆಯನ್ನು ಉಳಿಸಿಕೊಳ್ಳಬೇಕಿದೆ ಎಂಬ ಹೇಳಿಕೆಯನ್ನು ಕೂಡಿ, ಕಳೆದು, ಗುಣಿಸಿ, ಭಾಗಿಸಿದರು ಸಿಗುವುದು ಒಂದೇ ಉತ್ತರ. ಯಾಕೆಂದರೆ ಭಗವದ್ಗೀತೆಯು ಬ್ಲಡ್ ಕ್ಯಾನ್ಸರ್ ಪೇಶೆಂಟ್. ಗಂಟಲು ಹಾಗೂ ಮೆದುಳು ಮತ್ತು ನಾಲಿಗೆಯ ಮೇಲೆ ಬೆಳೆಯುವ ಗೆಡ್ಡೆಯಾದರೆ ತೆಗೆಯಬಹುದು. ಆದರೆ ಇದು ಬ್ಲಡ್ ಕ್ಯಾನ್ಸರ್ ತುಂಬಿರುವ ಹಾವಿನ ರೂಪದ ಪೇಶೆಂಟ್.

– ಹಾರೋಹಳ್ಳಿ ರವೀಂದ್ರ

ಸ್ಪೈನಿನಲ್ಲೂ ಯುರೋಕೂಟದ ಮಿತವ್ಯಯ ನೀತಿಗೆ ತಡೆ



ಸ್ಪೈನಿನಲ್ಲಿ ಇತ್ತೀಚೆಗೆ ನಡೆದ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಜನತೆ ಅಭೂತಪೂರ್ವ ತೀರ್ಪು ಇತ್ತಿದ್ದಾರೆ. ದೇಶವನ್ನು ಆಳುತ್ತಾ ಬಂದ ಬಲಪಂಥೀಯ ಪೀಪಲ್ಸ್ ಪಾರ್ಟಿ(ಪಿಪಿ) ಮತ್ತು ಸೋಶಲಿಸ್ಟ್ ಪಾರ್ಟಿಗಳೆರಡೂ ಬಹುಮತ ಪಡೆಯಲು ವಿಫಲವಾಗಿವೆ. ದೇಶವನ್ನು ಫ್ರಾಂ–ಕೊ ಫ್ಯಾಸಿಸ್ಟ್ ಪತನದ ನಂತರದ ಪ್ರಜಾಪ್ರಭುತ್ವ ಪುನಃಸ್ಥಾಪನೆಯ ನಂತರ ಹಲವು ದಶಕಗಳು ಇವು ಆಳಿದ್ದು ಮೊದಲ ಬಾರಿಗೆ ಎರಡೂ ಬಹುಮತ ಪಡೆದಿಲ್ಲ. ಎರಡೂ ಪಕ್ಷಗಳು ತಮ್ಮ ಅತ್ಯಂತ ಕಡಿಮೆ ಸೀಟುಗಳನ್ನು ಪಡೆದಿವೆ. 350 ಸೀಟುಗಳ ಪಾರ್ಲಿಮೆಂಟಿನಲ್ಲಿ ಪಿಪಿ 123 ಸೀಟು ಪಡೆದರೆ, ಸೋಶಲಿಸ್ಟ್ ಪಾರ್ಟಿ 90 ಸೀಟು ಪಡೆದಿದೆ. ಮೊದಲ ಬಾರಿಗೆ 100 ಸೀಟುಗಳಿಗಿಂತ ಕಡಿಮೆ ಪಡೆದಿದೆ. 1982ರ ನಂತರ ಮೊದಲ ಬಾರಿಗೆ ಆಳುವ ಪಕ್ಷದ ಪರಾಭವ ಇಷ್ಟು ತೀವ್ರವಾಗಿತ್ತು. ಹಿಂದಿನ ಆಳುವ ಪಕ್ಷ ಪಿಪಿ 64 ಸೀಟುಗಳನ್ನು ಮತ್ತು ಶೇ. 16 ಮತಗಳನ್ನು ಕಳೆದುಕೊಂಡಿದೆ.

ಹೊಸ ಮಿತವ್ಯಯ–ವಿರೋಧಿ ಪಕ್ಷ ಪೊದೆಮೊಸ್ ಪಕ್ಷ ಹಿಂದೆಂದೂ ಮೂರನೇ ಪಕ್ಷ ಗಳಿಸದಷ್ಟು, 69 (ಹಿಂದಿನ ಅತ್ಯಧಿಕ 23, 1979ರಲ್ಲಿ) ಸೀಟು ಗಳಿಸಿದೆ. ಇನ್ನೊಂದು ಹೊಸ ಪಕ್ಷ ಸಿಯುದದನೋಸ್ 40 ಸೀಟು ಗಳಿಸಿದೆ. ಇದು ಈ ಎರಡೂ ಪಕ್ಷಗಳು ಯುರೋ ಕೂಟದ ಮಿತವ್ಯಯದ ನೀತಿಗಳ ಹೆಸರಲ್ಲಿ ಜನಕಲ್ಯಾಣದ ಯೋಜನೆಗಳ ತೀವ್ರ ಕಡಿತದ ಜನ–ವಿರೋಧಿ ನೀತಿಗಳನ್ನು ಜಾರಿ ಮಾಡಿದ್ದರ ಫಲ. ಇದು



ಒಟ್ಟಾರೆಯಾಗಿ ಯುರೋಕೂಟದ ಮಿತವ್ಯಯದ ನೀತಿಗಳ ವಿರುದ್ಧ ಪ್ರತಿಭಟನಾ ಮತ. ಈ ಪ್ರತಿಭಟನೆ ಎಷ್ಟು ತೀವ್ರವಾಗಿದೆಯೆಂದರೆ ಯಾವುದೇ ಒಂದು ಅಥವಾ ಎರಡು ಪಕ್ಷ ಸರಕಾರ ರಚಿಸಲಾಗದ ರಾಜಕೀಯ ಬಿಕ್ಕಟ್ಟು ಉಂಟಾಗಿದೆ.

ನಡು–ಎಡಪಂಥೀಯ ಸೋಶಲಿಸ್ಟ್ ಮತ್ತು ಎಡಪಂಥೀಯ ಪೊದೆಮೊಸ್ ಒಟ್ಟು ಸೇರಿದರೂ ಬಹುಮತ ಇಲ್ಲ. ಬಲಪಂಥೀಯ ಪಿಪಿ ಮತ್ತು ನಡು–ಬಲಪಂಥೀಯ ಸಿಯುದದನೋಸ್ ಒಟ್ಟು ಸೇರಿದರೂ ಬಹುಮತ ಇಲ್ಲ. ಪಿಪಿ–ಸೋಶಲಿಸ್ಟ್ ಅಥವಾ ಸೋಶಲಿಸ್ಟ್–ಪೊದೆಮೊಸ್–ಸಿಯುದದನೋಸ್ ಕೂಟ ಮಾತ್ರ ಭದ್ರ ಸರ್ಕಾರ ನೀಡಬಲ್ಲುದು. ಇವು ಎರಡೂ ಹೆಚ್ಚು ಕಡಿಮೆ ಅಸಾಧ್ಯ ಎಂದು ಹೇಳಲಾಗಿದೆ. ಪಿಪಿಯ ಭ್ರಷ್ಟಾಚಾರ ಹಗರಣಗಳು ಮತ್ತು ಯು–ರೋಕೂಟದ ಮಿತವ್ಯಯ ನೀತಿಗಳಿಗೆ ಬಲವಾದ ಬೆಂಬಲದಿಂದಾಗಿ ಅದರ ಜತೆ ಯಾವ ಪಕ್ಷವೂ ಸರಕಾರ ರಚಿಸಲು ತಯಾರಿಲ್ಲ. ಸ್ಪೈನಿನ ಕೆಲವು (ಬಾಸ್ಕ್, ಕ್ಯಾಟಲೊನಿಯಾ ಇತ್ಯಾದಿ) ಪ್ರಾಂತ್ಯಗಳಲ್ಲಿ ಪ್ರತ್ಯೇಕತಾ ಚಳುವಳಿ ನಡೆಯುತ್ತಿದ್ದು ಪೊದೆಮೊಸ್ ಪ್ರತಿ ಪ್ರಾಂತ್ಯಕ್ಕೆ ಪ್ರತ್ಯೇಕವಾಗುವ ಹಕ್ಕು ಇರಬೇಕು ಎಂದು ಪ್ರತಿಪಾದಿಸುತ್ತದೆ. ಇತರ ಮೂರು ಪಕ್ಷಗಳು ಇದನ್ನು ವಿರೋಧಿಸುತ್ತವೆ. ಸ್ಪೈನಿನಲ್ಲಿ ಮಿಶ್ರ ಮತದಾನ ವ್ಯವಸ್ಥೆ (ಕೆಲವು ಸೀಟುಗಳು ನೇರ ಚುನಾವಣೆ, ಉಳಿದದ್ದು ಮತಗಳಿಕೆಯ ಅನುಪಾತಕ್ಕೆ ಅನುಗುಣವಾಗಿ ಪಕ್ಷಗಳ ಪಟ್ಟಿಯಿಂದ) ಇದ್ದು ಮತಗಳಿಕೆಗೂ ಸೀಟುಗಳ ಸಂ–ಖ್ಯೆಗೂ ನೇರ ಸಂಬಂಧ ಇಲ್ಲ. ಪಿಪಿ, ಸೋಶಲಿಸ್ಟ್, ಪೊದೆಮೊಸ್, ಸಿಯುದದನೋಸ್ ಅನುಕ್ರಮವಾಗಿ ಶೇ. 29, 22, 21, 14 ಮತಗಳನ್ನು ಗಳಿಸಿವೆ.

ಪೊದೆಮೋಸ್, ಗ್ರೀಸಿನ ಸಿರಿಝಾ ಪಕ್ಷ–ಕ್ಕೆ ಹತ್ತಿರವಿದ್ದು ಆ ಪಕ್ಷ ಯುರೋಕೂಟದ ವಿರುದ್ಧ ಪ್ರತಿರೋಧ ಬಿಟ್ಟು ಕೊಟ್ಟ ಮೇಲೆ, ಅದು ಇಂತಹ ಮತಗಳಿಕೆ ಪಡೆದೀತು ಎಂದು ಸಮೀಕ್ಷೆಗಳು ನಿರೀಕ್ಷಿಸಿರಲಿಲ್ಲ. ಅದು ಹೆಚ್ಚು ಕಡಿಮೆ ಎರಡನೇ ಅತಿ ದೊಡ್ಡ ಪಕ್ಷವಾಗುವ ಹತ್ತಿರ ಬಂದಿತ್ತು. ಆದರೆ ಅತಂತ್ರ ಸ್ಥಿತಿ ನಿರ್ಮಾಣವಾಗುತ್ತದೆ ಎಂದು ಗೊತ್ತಿದ್ದೂ ಸ್ಪಾನಿಷ್ ಜನತೆ ಹೊಸ ಪಕ್ಷ ಪೊದೆಮೋಸ್ ಗೆ ಮತ ನೀಡಿದ್ದಾರೆ. ಇದರರ್ಥ ಯುರೋಕೂಟದ ಮಿತವ್ಯಯ ನೀತಿಗಳ ಮೇಲೆ ಆಧಾರಿತ 'ಭದ್ರ ಸರಕಾರ'ಕ್ಕಿಂತ ಅತಂತ್ರವೇ ಲೇಸು ಎಂದು ಜನ ನಿರ್ಧರಿಸಿದ್ದಾರೆ. ಭ್ರಷ್ಟಾಚಾರದ ವಿರುದ್ಧ ತೀವ್ರ ಪ್ರಚಾರ ಕೈಗೊಂಡಿದ್ದ ಸಿಯುದದನೋಸ್ ಎರಡನೇ ಅಥವಾ ಮೂರನೇ ಸ್ಥಾನ ಗಳಿಸಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಬಹುಶಃ ಮಿತವ್ಯಯ ನೀತಿಗಳ ವಿರುದ್ಧ ಅಷ್ಟು ಕಡು ವಿರೋಧ ತೋರಿಸದ್ದ ರಿಂದ ಹೆಚ್ಚಿನ ಮತ ಗಳಿಸಲಿಲ್ಲ.

ಈಗಿನ ಸ್ಥಿತಿ ನೋಡಿದರೆ ಸ್ಪೈನಿನಲ್ಲಿ ಸರಕಾರ ರಚನೆಯಾಗುವ ಸಂಭವ ಕಡಿಮೆ. ಸರಕಾರ ರಚನೆಯಾದರೂ ಅದು ಬಿದ್ದು ಹೋಗುವ ಸಾಧ್ಯತೆಯೇ ಹೆಚ್ಚು. ಮರುಚುನಾವಣೆ ನಡೆದ–ರೆ ಪೊದೆಮೋಸ್ ಅತ್ಯಂತ ದೊಡ್ಡ ಪಕ್ಷವಾಗಿ ಹೊಮ್ಮುವ ಸಾಧ್ಯತೆ ಇದೆ. ಅದು ಆದರೆ ಯುರೊ ಕೂಟದ ಮಿತವ್ಯಯ ನೀತಿಯ ಭದ್ರಕೋಟೆಯಲ್ಲಿ ತೀವ್ರ ಬಿರುಕು ಬರಬಹುದೆ? ಅಥವಾ ಗ್ರೀಸಿನ ಸಿರಿಝಾದ ಕತೆ ಪುನರಾವರ್ತನೆಯಾದೀತೆ? ಯುರೋಪಿನ ರಾಜಕೀಯದಲ್ಲಿ ಹೊಸ ಸಾಧ್ಯತೆಗಳ ಬಾಗಿಲು ತೆರೆಯುತ್ತಿದೆಯೆ? ಕಾದು ನೋಡಬೇಕು.

ವೆನೆಜುವೇಲಾ ಚವೇಝಿಸ್ತಾ ಪಕ್ಷಕ್ಕೆ ಸೋಲು

ಲ್ಯಾಟಿನ್ ಅಮೆರಿಕದಿಂದ ಪುನಃ ಕೆಟ್ಟ ಸುದ್ದಿ ಬಂದಿದೆ. ವೆನೆಜುವೇಲಾದಲ್ಲಿ ಚವೇಝಿಸ್ತಾ ಸೋಶಲಿಸ್ಟ್ ಪಕ್ಷ ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಸೋತಿದೆ. ಮಾತ್ರವಲ್ಲ, ಬಲಪಂಥೀಯ ವಿರೋಧ ಪಕ್ಷ ಗಳ ಕೂಟ ಮೂರನೇ ಎರಡು ಬಹುಮತ ಪಡೆದಿದೆ. ಕಳೆದ ಭಾನುವಾರ ನಡೆದ ಚುನಾವಣೆಯಲ್ಲಿ 1998ರ ನಂತರ ನಡೆದ ಚುನಾವಣೆಗಳಲ್ಲಿ ಕೇವಲ ಎರಡನೇ ಬಾರಿ ಚವೇಝಿಸ್ತಾ ಸೋಶಲಿಸ್ಟ್ ಪಕ್ಷದ ನಾಯಕತ್ವದ ಕೂಟ ಸೋತಿದೆ. ಇದು ಜನಪ್ರಿಯ ಅಧ್ಯಕ್ಷ ಚವೇಝ್ ಸಾವಿನ ನಂತರ ಮೊದಲ ಪಾರ್ಲಿಮೆಂಟ್ ಚುನಾವಣೆ. ಸೋಶಲಿಸ್ಟ್ ಕೂಟ ಶೆ. 7.3 ಮತ ಕಳೆದುಕೊಂಡು 99 ಸೀಟುಗಳಿಂದ 55ಕ್ಕೆ ಇಳಿದಿದೆ. ವಿರೋಧಿ ಬಲಪಂಥಿಯ ಕೂಟದ ಮತಗಳಿಕೆ ಶೆ. 9ರಷ್ಟು ಏರಿ 64 ಸೀಟುಗಳಿಂದ 109ಕ್ಕೆ ಏರಿದೆ. ಇದು ಚವೇಝಿಸ್ತಾ ಸೋಲಿನ ಗಂಭೀರತೆಯನ್ನು ತೋರಿಸುತ್ತದೆ.

ಇಂತಹ ಗಂಭೀರ ಸೋಲಿಗೆ ಏನು ಕಾರಣ? ಹಲವು ನಕಾರಾತ್ಮಕ ಬೆಳವಣಿಗೆಗಳು ಕೂಡಿಕೊಂಡು ಇದು ಆಗಿದೆ ಎಂದು ಹೇಳಬಹುದು. ಕಳೆದ ಕೆಲವು ವರ್ಷಗಳಿಂದ ಬೀಳುತ್ತಿರುವ ತೈಲ ಬೆಲೆಗಳಿಂದ ತೈಲ ರಫ್ತಿನ ಮೇಲೆ ಪ್ರಮುಖವಾಗಿ ಅವಲಂಬಿಸಿರುವ ವೆನೆಜುವೇಲಾದ ಆರ್ಥಿಕ ತೀವ್ರ ಬಿಕ್ಕಟ್ಟಿನಲ್ಲಿದೆ. ಇದ–ರಿಂದ ಸಾಮಾಜಿಕ ಕಾರ್ಯಕ್ರಮಗಳ ಮೇಲೆ ಖರ್ಚು ಮಾಡುವ ಸರಕಾರದ ಸಾಮರ್ಥ್ಯಕ್ಕೆ ತೀವ್ರ ಆಘಾತ ಆಗಿತ್ತು. ಇದಲ್ಲದೆ ಅಮೆರಿಕನ್ ಸಾಮ್ರಾಜ್ಯಶಾಹಿ ವೆನೆಜುವೇಲಾದ ಮೇಲೆ ಆರ್ಥಿಕ ದಿಗ್ಬಂಧನ ಹೇರಿ ಆರ್ಥಿಕ ಯುದ್ಧವನ್ನೇ ಸಾರಿತ್ತು. ಇದರ ಫಲವಾಗಿ ಜೀವನಾವಶ್ತಕ ವಸ್ತುಗಳ ಬೆಲೆಏರಿಕೆ ಮತ್ತು ಅಭಾವ ಜನತೆಯನ್ನು (ಚವೇಝ್ ಕಡು ಅಭಿಮಾನಿಗಳನ್ನು ಸಹ) ಕಂಗಾಲಾಗಿಸಿತ್ತು. ಜೀವನಾವಶ್ತಕ ವಸ್ತುಗಳ ಬೆಲೆಏರಿಕೆ ಮತ್ತು ಅಭಾವ ಎದುರಿಸುವಲ್ಲಿ ಸರಕಾರದ ಅದಕ್ಷತೆ, ನ್ಯೂನ್ಯತೆಗಳಿಂದಾಗಿಯೂ ಮದುರೊ ಸರಕಾರದ ಜನಪ್ರಿಯತೆಗೆ ಧಕ್ಕೆ ಬಂದಿತ್ತು.

ಆರ್ಥಿಕ ಬಿಕ್ಕಟ್ಟನ್ನು ಸರಕಾರದ ವಿರುದ್ಧ ರಾಜಕೀಯ ಅತೃಪ್ತಿಯಾಗಿ ಬದಲಾಯಿಸುವಲ್ಲಿ ಸಾಮ್ರಾಜ್ಯಶಾಹಿ ಕೃಪಾಪೋಷಿತ ಮಾಧ್ಯಮಗಳ ಪಾತ್ರ ಸಹ ಗಮನಾರ್ಹವಾಗಿತ್ತು. ಟೆಲಿಸುರ್ ನಂತಹ ಬದಲಿ ಮಾಧ್ಯಮಗಳ ಸ್ಥಾಪನೆ, ವಿರೋಧಿ ಮಾಧ್ಯಮಗಳ ಮೇಲೆ ನಿಬಂಧನೆಗಳ ಹೇರಿಕೆ ಮುಂತಾದ ಕ್ರಮಗಳನ್ನು ಕೈಗೊಂಡರೂ ಅವುಗಳ ಅಪಪ್ರಚಾರವನ್ನು ಹಿಮ್ಮೆಟ್ಟಿಸಿ ಜನತೆಯನ್ನು ಜನ–ವಿರೋಧಿ ರಾಜಕೀಯ ಶಕ್ತಿಗಳ ವಿರುದ್ಧ ಅಣಿ ನೆರೆಸುವುದು ಸಾಧ್ಯವಾಗಲಿಲ್ಲ. ಬೂರ್ಜ್ವಾ ಪ್ರಭುತ್ವ ಯಂತ್ರವನ್ನು ಬದಲಾಯಿಸದೆ ಜನತೆಯ ಹಿತ ಕಾಯಲು ಸಾಧ್ಯವಿಲ್ಲ ಎಂಬ ಚವೇಝ್ ತಿಳುವಳಿಕೆಯನ್ನು ಮುಂದೊಯ್ಯಲು ಸಾಧ್ಯವಾಗದ್ದೂ ಈ ಗಂಭೀರ ಹಿನ್ನಡೆಗೆ ಕಾರಣವಾಗಿದೆ.

ಅಧ್ಯಕ್ಷ ಮದುರೊ ಚುನಾವಣಾ ಫಲಿತಾಂಶಗಳ ಬಗೆಗೆ ಪ್ರತಿಕ್ರಿಯೆ ನೀಡುತ್ತಾ "ನಾವು ಒಂದು ಕಾಳಗ ಸೋತಿದ್ದೇವೆ. ಆದರೆ ಹೊಸ ಸಮಾಜವಾದದ ಯುದ್ಧ ಈಗಷ್ಟೇ ಆರಂಭವಾಗಿದೆ. .. ಈ ಸೋಲನ್ನು ನಾವು ಒಂದು ಎಚ್ಚರಿಕೆಯ ಗಂಟೆಯಾಗಿ ಸ್ವೀಕರಿಸಬೇಕು.. ಇದು ಅಳುವ ಸಮಯವಲ್ಲ. ಹೋರಾಟ ತೀವ್ರಗೊಳಿಸುವ ಸಮಯ.." ಎಂದಿದ್ದಾರೆ. ಈ ಸೋಲಿನ ಬಗ್ಗೆ ಮುಂದಿನ ಹೋರಾಟಗಳ ಸ್ವರೂಪದ ಬಗ್ಗೆ ಚರ್ಚೆ ನಡೆಸಿ ಒಂದು ಕಾರ್ಯಯೋಜನೆ ತಯಾರಿಸಲು, ಕೂಟದ ಎಲ್ಲಾ ಪಕ್ಷಗಳ ಸಾಮೂಹಿಕ ಸಂಘಟನೆಗಳ, ಜನತೆಯ ಚುನಾಯಿತ ಸಂಸ್ಥೆಗಳ, ಜನಬಲದ ಶಕ್ತಿಗಳ ಸಭೆ ಕರೆದಿದ್ದಾರೆ.

ವೆನೆಜುವೇಲಾ ಅಧ್ಯಕ್ಷೀಯ ಪದ್ಧತಿ ಹೊಂದಿದ್ದು ಈ ಫಲಿತಾಂಶದ ಪರಿಣಾಮ ತಕ್ಷಣ ಅಷ್ಟೇನೂ ತೀವ್ರವಾಗಿರುವುದಿಲ್ಲ. ಆದರೂ ಪಾರ್ಲಿಮೆಂಟಿನಲ್ಲಿ ಬಲಪಂಥೀಯ ಕೂಟಕ್ಕೆ ಮೂರನೇ ಎರಡು ಬಹುಮತ ಇರುವುದರಿಂದ ಹೊಸ ಸಾಮಾಜಿಕ ಕಾರ್ಯಕ್ರಮಗಳನ್ನು, ಇದಕ್ಕೆಬೇಕಾದ ಕಾನೂನುಗಳನ್ನು ಹೊಸ ಪಾರ್ಲಿಮೆಂಟು ತಡೆಯಬಹುದು. ಮಂತ್ರಿ, ಉಪಾಧ್ಯಕ್ಷರನ್ನು, ಸುಪ್ರೀಂ ಕೋರ್ಟಿನ ಮ್ಯಾಜಿಸ್ಟ್ರೇಟ್ ಗಳನ್ನು ತೆಗೆದುಹಾಕಬಹುದು. ಸಂವಿಧಾನವನ್ನು ಬದಲಾಯಿಸಬಹುದು.


ಈಗಾಗಲೇ ವಾಣಿಜ್ಯ ಫೆಡರೇಶನ್ ಬೆಲೆ ನಿಯಂತ್ರಣಗಳನ್ನು ತೆಗೆದು ಹಾಕಬೇಕು ಮತ್ತು ಕಾರ್ಮಿಕ ಕಾನೂನುಗಳ ಪುನರ್ ಪರಿಶೀಲನೆ ಮಾಡಬೇಕು ಎಂದು ಪಾರ್ಲಿಮೆಂಟಿಗೆ ಮನವಿ ಸಲ್ಲಿಸಿದೆ. ಇದರ ವಿರುದ್ಧ ಕಾರ್ಮಿಕ ವರ್ಗ ಮತ್ತು ದುಡಿಯುವ ಜನ ಬೀದಿಗಳಿದು ಹೋರಾಡ ಬೇಕಾಗುತ್ತದೆ. ವೆನೆಜುವೇಲಾದ ಕಾರ್ಮಿಕ ವರ್ಗ ಮತ್ತು ದುಡಿಯುವ ಜನ ಕಳೆದ 17 ವರ್ಷಗಳಲ್ಲಿ ಗೆದ್ದುಕೊಂಡ ಸವಲತ್ತುಗಳನ್ನು ವಿಜಯಗಳನ್ನು ಉಳಿಸಿಕೊಳ್ಳಲು ಹೋರಾಡುತ್ತದೆ ಎಂದು ನಿರೀಕ್ಷಿಸಬಹುದು.



ಬಿಜೆಪಿ ಸೋತರೆ ನಾನು ರಾಜಕೀಯ ಸನ್ಯಾಸ ತೆಗೆದುಕೊಳ್ಳುತ್ತೇನೆ ಎಂದು ಈಶ್ವರಪ್ಪ ಘೋಷಿಸಿದ್ದೇ ಬಿಜೆಪಿಗೆ ಮುಳುವಾಯಿತು. ಅವರ ಕೊಳಕು ಬಾಯಿಗೆ ಬೇಸತ್ತ ಸ್ಥಳಿಯ ಸಂಸ್ಥೆಯ ಮತದಾರರು ಈಶ್ವರಪ್ಪನವರಿಗೆ ರಾಜಕೀಯ ಸನ್ಯಾಸ ಕೊಡಿಸುವ ಸಲುವಾಗಿ ಬಿಜೆಪಿಯನ್ನು ಸೋಲಿಸಿ ಬಿಟ್ಟರು. ಆದರೆ ಈಗ ಈಶ್ವರಪ್ಪ ಸಿದ್ದರಾಮಯ್ಯ ನನ್ನ ಸವಾಲು ಸ್ವಿಕರಿಸದ ಕಾರಣ ರಾಜಕೀಯ ಸನ್ಯಾಸದ ಪ್ರಶ್ನೆಯೆ ಇಲ್ಲವೆಂದು ಸ್ಥಳಿಯ ಸಂಸ್ಥೆಯ ಮತದಾರರಿಗೆ ನೀಡಿದ ಬರವಸೆಯನ್ನು ಹುಸಿ ಗೊಳಿಸಿದ್ದಾರೆ. ಇವರನ್ನು 2015 ರ ವರ್ಷದ ವ್ಯಕ್ತಿಯಾಗಿ ಆಯ್ಕೆ ಮಾಡಲು ಮತದಾರರು ನಿರ್ದರಿಸಿದ್ದಾರೆ.

– ರಾಮಚಂದ್ರ ನಾವಡ

JANASHAKTHI KANNADA VARA PATRIKE JAN 10, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283





ಪ್ಯಾಲೆಸ್ಟೈನ್ ಪರ : ದಿ ಫ್ರೀಡಂ ಜಾತಾ 2015

ಇದೊಂದು ಎರಡು ದೇಶಗಳ ಜನರ ನಡುವಿನ ಸಾಂಸ್ಕೃತಿಕ ಸಹಯೋಗ. ಪ್ಯಾಲೆಸ್ತೈನಿನ ಜೆನಿನ್ ಪ್ರದೇಶದ (ನಿರಾಶ್ರಿತರ ಬಿಡಾರ) ದಿ ಫ್ರೀಡಂಥಿಯೇಟರ್ (ಟಿಎಫ್‌ಟಿ) ಮತ್ತು ಭಾರತದ ದೆಹಲಿಯಲ್ಲಿನ ಜನ ನಾಟ್ಯ ಮಂಚ್ (ಜನಮ್) ನಡುವಿನ ಸಹಯೋಗ.

ಟಿಎಫ್‌ಟಿ ಪ್ಯಾಲೆಸ್ತೈನಿನ ಪ್ರಮುಖ ರಂಗ ತಂಡ. 1989ರಲ್ಲಿ ಜನಮ್‌ನಸಫ್ದರ್ ಹಷ್ಮಿಹತ್ಯೆಯಾದಂತೆ ಟಿಎಫ್‌ಟಿಯ ಜ್ಯೂಲಿಯಾನೊ ಮೆರ್‌ಖಮಿಸ್ 2011 ರಲ್ಲಿ ಅವರ ರಂಗ ಮಂದಿರದ ಎದುರುಗಡೆಯೇ ಹತ್ಯೆಗೊಳಗಾದರು. ದಿ ಫ್ರೀಡಂಥಿಯೇಟರ್‌ಇಂದು ಜಗತ್ತಿನಲ್ಲೇ ಬಹುದೊಡ್ಡ ರೆಪರ್ಟರಿ (ಸಂಚಾರಿ ರಂಗ ತಂಡ) ಕಂಪನಿ. ವೃತ್ತಿಪರ ರೆಪರ್ಟರಿ ಕಂಪನಿಯಾಗಿ ಒಂದು ರಂಗಶಾಲೆ ಮತ್ತು ಶ್ರವಣ ಹಾಗೂ ದೃಶ್ಯ ತರಬೇತಿ ಕೇಂದ್ರವನ್ನು ದಿ ಫ್ರೀಡಂ ಥಿಯೇಟರ್ ನಡೆಸುತ್ತಿದೆ.

ಟಿಎಫ್‌ಟಿಯ ಎಂಟು ಕಲಾವಿದರು ನವಂಬರ್ 2015 ರಲ್ಲಿ ಭಾರತಕ್ಕೆ ಬಂದಿದ್ದಾರೆ. ರಂಗ ಪರಿಣಿತರ ಬಳಿ ರಂಗಕಮ್ಮಟದಲ್ಲಿ ತರಬೇತಿ. ಜನಮ್ ಜತೆ ಜಂಟಿಯಾಗಿ ಡಿಸೆಂಬರ್ 2015–ಜನವರಿ 2016 ರಲ್ಲಿ ಭಾರತದ 10 ನಗರಗಳಿಗೆ ಜಾಥಾದಲ್ಲಿ ಹೋಗಲಿದ್ದಾರೆ. ಲಕ್ನೊ, ಭೋಪಾಲ್‌ಗಳಲ್ಲಿ ಈಗಾಗಲೇ ಜಾತಾ ತಲುಪಿ ಪ್ರದರ್ಶನ ನೀಡಿದ್ದು, ದೆಹಲಿ, ಮುಂಬಯಿ, ಕೇರಳ (3 ಕಡೆ) ಗಳ ನಂತರ ಬೆಂಗಳೂರಿನಲ್ಲಿ ಜನವರಿ 13, 14 ಮತ್ತು 15ರಂದು ಜಾಥಾ ಬರಲಿದೆ. ಜಾಥಾದ ತಂಡದ ಕಾರ್ಯಕ್ರಮದಲ್ಲಿ ಜಂಟಿಯಾಗಿ ತಯಾರಿಸಿದ 40 ಮಿನಿಟುಗಳ ಬೀದಿ ನಾಟಕ, ಪ್ಯಾಲೆಸ್ಟೈನಿನ ಜಾನಪದ ನೃತ್ಯ ಮತ್ತು ಗೊಂಬೆಯಾಟ ಸೇರಿರುತ್ತವೆ. ಇದಲ್ಲದೆ ಸಮುದಾಯದ 'ಗೋಡೆಗೆ ಹೇಳಿದ ಕತೆ' ಬೀದಿ ನಾಟಕ ಇರುತ್ತದೆ. ಬೆಂಗಳೂರಿನಲ್ಲಿ ಕೆಲವು ಜಾಥಾ–ಪೂರ್ವ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿದೆ.

"ಸ್ವಾತಂತ್ರ್ಯ ಮತ್ತು ವಿಮೋಚನೆ ಬಗೆಗಿನ ತಮ್ಮ ಪರಿಕಲ್ಪನೆಗಳನ್ನು ಭಾರತದ ಪ್ರೇಕ್ಷಕರಜ–ತೆ ಹಂಚಿಕೊಳ್ಳುವುದೇ ಪ್ಯಾಲೆಸ್ತೈನಿನ ಯುವ ಕಲಾವಿದರಿಗೆ ಒಂದು ರೋಮಾಂಚಕಾರಿ ಅನುಭವ" ಎನ್ನುತ್ತಾರೆ ಫೈಸಲ್ ಅಬು ಅಲ್ಲಾಜ, ಟಿಎಫ್‌ಟಿಯ ಕಲಾ ಮುಖ್ಯಸ್ಥ. "ಭಾರತೀಯ ಸಂಸ್ಕೃತಿ, ಸಿನೆಮಾ ಮತ್ತು ರಂಗಭೂಮಿ ನಮಗೆ ದೊಡ್ಡ ಸ್ಪೂರ್ತಿ ಮತ್ತು ಇದು ನಮ್ಮ ಎರಡೂ ದೇಶಗಳ ನಡುವಿನ ಇನ್ನೂ ಹೆಚ್ಚಿನ ಸಾಂಸ್ಕೃತಿಕ ವಿನಿಮಯಕ್ಕೆ ದಾರಿ ಮಾಡಿಕೊಡಲಿದೆ." "ಅಚ್ಚರಿಯ ಈ ಪ್ರವಾಸ ಸಾಧ್ಯವಾಗಿಸಲು ಜನಮ್‌ಜತೆ ದೇಶದ ಇಪ್ಪತ್ತಕ್ಕೂ ಹೆಚ್ಚಿನ ಸಾಂಸ್ಕೃತಿಕ ಸಂಘಟನೆಗಳು ಕೈಜೋಡಿಸುತ್ತಿವೆ. ಹಲವಾರು ಕಲಾವಿದರು ಅನೇಕ ರೀತಿಯಲ್ಲಿ ಈ ನಾಟಕ ತಯಾರಿ ಮತ್ತು ಪ್ರವಾಸದಲ್ಲಿ ತೊಡಗಿಸಿಕೊಳ್ಳಲು ಮುಂದೆ ಬಂದಿದ್ದಾರೆ." ಎಂದು ಜನಮ್‌ನ ಮುಖ್ಯಸ್ಥ ಸುಧನ್ವ ದೇಶಪಾಂಡೆ ಹೇಳುತ್ತಾರೆ.

"ಪ್ರೀತಿ ವಿಶ್ವಾಸದಿಂದ ಕೂಡಿದ ಎರಡು ನಾಗರೀಕತೆಗಳ ಕಲಾವಿದರ ನಡುವಿನ ನೇರ ಸಂವಾದ ನಡೆಯುತ್ತಿರುವುದು ಸಂಭ್ರಮದ ಹಾಗೂ ಕುತೂಹಲಕಾರಿ ವಿಷಯ" ಎನ್ನುತ್ತಾರೆ ಬಾಲಿವುಡ್‌ನ ಹಿರಿಯತಾರೆ ಶರ್ಮಿಳಾ ಟ್ಯಾಗೋರ್. ಚಿತ್ರ ನಿರ್ಮಾಪಕರಾದ ಶ್ಯಾಮ್ ಬೆನೆಗಲ್, ಸಯೀದ್ ಮಿರ್ಜಾ, ಲೇಖಕಿಯರಾದ ಗೀತಾ ಹರಿಹರನ್, ನಯನ್‌ತಾರಾ ಸೈಗಲ್ ಮತ್ತು ಕಲಾವಿದರಾದ ವಿವಾನ್ ಸುಂದರಂ ಹಾಗೂ ಮುಖ್ಯಸ್ಥರಾದ ಪ್ರಬೀರ್ ಪುರಕಾಯಸ್ಥ ಅವರನ್ನು ಒಳಗೊಂಡ ಪ್ಯಾಲೆಸ್ತೈನ್ ಸೌಹಾರ್ದ ಸಮಿತಿ ಜಾತಾಕ್ಕೆ ಪೂರ್ಣ ಬೆಂಬಲ, ಸಹಕಾರ ನೀಡುತ್ತಿದೆ.

ಈ ಪ್ರವಾಸವನ್ನು ಮುಂಬಯಿಯ ಜುನೂನ್ ಮತ್ತು ಬೆಂಗಳೂರಿನ ಸಮುದಾಯವನ್ನೂ ಒಳಗೊಂಡಂತೆ ಹಲವಾರು ಸಂಘಟನೆಗಳು ಬೆಂಬಲಿಸಿವೆ ಹಾಗೂ ಅಲ್ಲಲ್ಲಿಯ ಪ್ರದರ್ಶನಗಳನ್ನು ಸಂಘಟಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತಿವೆ.

ಬೆಂಗಳೂರಿನ ಕಾರ್ಯಕ್ರಮಗಳು

ಜನವರಿ 2 ಮತ್ತು 10 ರಂದು ಅನುಕ್ರಮವಾಗಿ ಬಾದಾಮಿ ಹೌಸ್ ಹಾಗೂ ಕೆ ವಿ ಸುಬ್ಬಣ್ಣರಂಗ ಮಂದಿರಗಳಲ್ಲಿ ಪ್ಯಾಲೆಸ್ತೈನಿ ಯನ್ ಫಿಲಂ ಪ್ರದರ್ಶನ / ಸಂವಾದ; ಜನವರಿ 9 ರಂದು ನೇಮಿಚಂದ್ರ ಅವರಿಂದ 'ಯಾದವಶೇಮ್' ಓದು ಮತ್ತು ಪ್ಯಾಲೆಸ್ಟೈನ್ ಕವಿಗೋಷ್ಠಿ ಮತ್ತು ಹಾಡುಗಳು; ಜನವರಿ 13, 14 ಮತ್ತು 15ರಂದು ಸಂಜೆ ಜಾಥಾ ತಂಡದ ಕಾರ್ಯಕ್ರಮಗಳು ಅನುಕ್ರಮವಾಗಿ– ಚಿತ್ರ ಕಲಾ ಪರಿಷತ್, ಐ.ಐ.ಎಚ್.ಎಸ್., ರಂಗ ಶಂಕರ/ಪೀಣ್ಯ – ಗಳಲ್ಲಿ ಇರುತ್ತವೆ. ಇದಲ್ಲದೆ ಜಾತಾ ತಂಡದೊಂದಿಗೆ ಮೂರೂ ದಿನ ವಿವಿಧ ಸಂಸ್ಥೆಗಳಲ್ಲಿ ಸಂವಾದ ಇರುತ್ತದೆ.

ಸಮುದಾಯ ರೆಪರ್ಟರಿಯ 'ಬಿಡುಗಡೆ ರಂಗಸಂಚಾರ'



ಸಮುದಾಯ ತನ್ನದೇ ಆದ ರೆಪರ್ಟರಿ ತಂಡ ಆರಂಭಿಸಿದ್ದು, ಡಿಸೆಂಬರ್ 30ರಂದು ಹಾವೇರಿ ಬಳಿಯ ಶೇಷಗಿರಿಯಿಂದ ತನ್ನ 'ಬಿಡುಗಡೆ ರಂಗ ಸಂಚಾರ' ಆರಂಭಿಸಿದೆ. ಇದು 40 ವರ್ಷ ತುಂಬಿದ ಸಮುದಾಯಕ್ಕೆ ಹಲವು ವರ್ಷಗಳ ಕನಸು ನನಸಾಗುವ ಚಾರಿತ್ರಿಕ ಕ್ಷಣ. ರಂಗ ಸಂಚಾರ ಡಿಸೆಂಬರ್ 30ರಂದು ಶೇಷಗಿರಿಯಿಂದ ಆರಂಭವಾಗಿ ಸುಮಾರು ಒಂದು ತಿಂಗಳ ಕಾಲ ರಾಜ್ಯಾದ್ಯಂತ ಸಂಚರಿಸಿ ಜನವರಿ 29ರಂದು ಬೆಂಗಳೂರಿನಲ್ಲಿ ಸಮಾರೋಪಗೊಳ್ಳಲಿದೆ. ರಂಗ ಸಂಚಾರದ ಮೊದಲು ಹಾವೇರಿ ಬಳಿಯ ಶೇಷಗಿರಿಯಲ್ಲಿ ನಡೆದ ಶಿಬಿರದಲ್ಲಿ ರೆಪರ್ಟರಿಯ ಕಲಾವಿದರನ್ನು ರಂಗಸಂಚಾರಕ್ಕೆ ತರಬೇತಿಗೊಳಿಸಲಾಗಿದೆ. ತರಬೇತಿ ಶಿಬಿರದಲ್ಲಿ 'ಮೃತ್ಯುಂಜಯ' ರಂಗನಾಟಕ, 'ಗೋಡೆಗೆ ಹೇಳಿದ ಕತೆ' ಬೀದಿ ನಾಟಕ ಹಾಗೂ ಆಯ್ದ ಕವನಗಳ ದೃಶ್ಯ ರೂಪಕ 'ಕಾವ್ಯರಂಗ'ವನ್ನು ತಯಾರಿಸಲಾಗಿದೆ.

ರಾಜ್ಯದ 22 ನಗರ/ಪಟ್ಟಣಗಳಲ್ಲಿ ಇವುಗಳ ಪ್ರದರ್ಶನ ನೀಡುವುದಲ್ಲದೆ, ಕೇರಳದ ಕಾಸರಗೋಡನ್ನೂ ರಂಗಸಂಚಾರ ಮುಟ್ಟಲಿದೆ. ಹಾನಗಲ್, ಶಿರಸಿ, ಕುಂದಾಪುರ, ಮಂಗಳೂರು, ಉಡುಪಿ, ಮಾರ್ಗವಾಗಿ ಕಾಸರಗೋಡನ್ನು ಜನವರಿ 11ರಂದು ರಂಗಸಂಚಾರ ತಲುಪಲಿದೆ. ಕೆ.ಜಿ.ಎಫ್.ನಲ್ಲಿ ಪ್ರದರ್ಶನ ನೀಡಿ ಜ. 13ರಂದು ಬೆಂಗಳೂರಲ್ಲಿ ಪ್ಯಾಲೆಸ್ಟೈನ್ ಜಾಥಾದ ಜತೆ ಸೇರಿಕೊಳ್ಳಲಿದೆ. ಜನವರಿ 14ರಿಂದ ಶಿವಮೊಗ್ಗ, ಚಿತ್ರದುರ್ಗ, ದಾಂಡೇಲಿ, ಧಾರವಾಡ, ಸಿಂಧನೂರು, ರಾಯಚೂರು, ಕಲಬುರ್ಗಿ, ಹಂಪಿ, ಹೊಸಪೇಟೆ, ಹಗರಿಬೊಮ್ಮನ ಹಳ್ಳಿ, ಹಾಸನ, ಹುಣಸೂರು, ಮೈಸೂರುಗಳಲ್ಲಿ ಸಂಚರಿಸಿ ಜ.27 ರಂದು ಬೆಂಗಳೂರು ತಲುಪಲಿದೆ. ಬೆಂಗಳೂರಿನಲ್ಲಿ 3 ಪ್ರದರ್ಶನಗಳಿದ್ದು ಸಮಾರೋಪವೂ ನಡಯಲಿದೆ.

'ಮೃತ್ಯುಂಜಯ' ಮತ್ತು 'ಚಿರಸ್ಮರಣೆ'ಗಳ ಕೂಡು ರಂಗರೂಪ


ಕನ್ನಡ ಸಾಹಿತ್ಯ ಲೋಕದ ಪ್ರಗತಿಶೀಲ ಜನಪರ ಕಾದಂಬರಿಕಾರ ನಿರಂಜನರ 'ಮೃತ್ಯುಂಜಯ' ಮತ್ತು 'ಚಿರಸ್ಮರಣೆ' ಕಾದಂಬರಿಗಳನ್ನು ಒಂದುಗೂಡಿಸಿ ರಚಿಸಲಾದ 'ಮೃತ್ಯುಂಜಯ' ರಂಗರೂಪವು ರೆಪರ್ಟರಿಯ ಬಹುಮುಖ್ಯ ಆಕರ್ಷಣೆಯಾಗಲಿದೆ. ಡಾ.ಎಂ.ಜಿ.ಹೆಗಡೆಯವರು ಸಿದ್ಧಪಡಿಸಿರುವ ಈ ರಂಗರೂಪವನ್ನು ರಂಗಭೂಮಿಯಲ್ಲಿ ಈಗಾಗಲೇ ರಂಗ ನಿರ್ದೇಶಕನಾಗಿ ತನ್ನ ಛಾಪು ಮೂಡಿಸಿರುವ ಡಾ.ಶ್ರೀಪಾದ ಭಟ್ ನಿರ್ದೇಶಿಸಿದ್ದಾರೆ. ರಂಗ ವಿನ್ಯಾಸವನ್ನು ರಂಗಭೂಮಿಯ ಹಿರಿಯ ಚೇತನ ಎಂ.ಎಸ್.ಸತ್ಯು ಅವರು ಸಿದ್ಧಪಡಿಸಿದ್ದಾರೆ.

ಇದರ ಜತೆಯಲ್ಲೇ ಪ್ಯಾಲೆಸ್ತೈನ್ ಕುರಿತ ಒಂದು ಬೀದಿ ನಾಟಕ 'ಗೋಡೆಗೆ ಹೇಳಿದ ಕತೆ' ಸಹ ಕಾರ್ಯಾಗಾರದಲ್ಲಿ ಸಿದ್ಧವಾಗಿದೆ. ಪಂಪನಿಂದ ಹಿಡಿದು ಇತ್ತೀಚಿನವರೆಗಿನ ಕನ್ನಡ ಸಾಹಿತ್ಯ ಇತಿಹಾಸವನ್ನು ಹೇಳುವ ಆಯ್ದ ಕವನಗಳ ದೃಶ್ಯ ರೂಪಕ 'ಕಾವ್ಯರಂಗ' ಎಂಬ ನವೀನ ಕಲಾ ಪ್ರಕಾರ ಕೂಡ ರೆಪರ್ಟರಿಯ ಭಾಗವಾಗಿದೆ.

ರೆಪರ್ಟರಿ ಏಕೆ?

ರಂಗಭೂಮಿ ಇಂದು ಭವ್ಯ ಚಮತ್ಕಾರಗಳಲ್ಲಿ ಕಳೆದು ಹೋಗಿ ಕಾರ್ಪೊರೆಟ್ ತೆಕ್ಕೆಗೆ ಜಾರುತ್ತಿದೆ. ರಂಗಭೂಮಿಗೆ ಇದುವರೆಗಿನ ಶೋಕಿತನಕ್ಕಿಂತ ಬೇರೆಯದೇ ಆದ ಹೊಣೆಗಾರಿಕೆಯೂ ಇದೆ. ಈ ಹೊಣೆಗಾರಿಕೆಯನ್ನು ರಂಗ ಮುಖೇನ ನಿರ್ವಹಿಸಬೇಕಾದ ಜವಾಬ್ದಾರಿಯೂ ಸಮುದಾಯದ ಮೇಲಿದೆ. ಮುಖ್ಯವಾಗಿ ರಂಗಭೂಮಿ ರೈತರನ್ನೂ, ಶಾಲೆಯನ್ನೂ, ಕಾಲೇಜುಗಳನ್ನೂ, ಕಾರ್ಮಿಕರನ್ನೂ – ಹೀಗೆ ಸಾಮುದಾಯಿಕ ಬದುಕಿನ ಚಾಲನಾ ಶಕ್ತಿಯ ಎಲ್ಲ ಘಟಕಗಳನ್ನೂ ತಲುಪಲೇಬೇಕಿದೆ. ಈ ಕುರಿತು ಸಮುದಾಯ ಯೋಜನೆಯನ್ನು ಹಮ್ಮಿಕೊಳ್ಳಬೇಕಿದೆ. ಅದರ ಪ್ರಮುಖ ಅಂಗವಾಗಿ 'ರೆಪರ್ಟರಿ'ಯನ್ನು ಆರಂಭಿಸುತ್ತಿದೆ ಎನ್ನುತ್ತಾರೆ ಸಮುದಾಯದ ಪ್ರಧಾನ ಕಾರ್ಯದರ್ಶಿ ಟಿ. ಸುರೇಂದ್ರ ರಾವ್.

"ಈ ವರ್ಷದ ಜಾಗತಿಕ ರಂಗ ದಿನಾಚರಣೆಯ ಸಂದೇಶ ನೀಡಿದ **ದಾ–ರಿಯೋ ಪೋ** ನುಡಿದ ಮಾತು. **"ನಮ್ಮ ಕತೆಯನ್ನು ನಾವು ಹೇಳಬೇಕು. ಯುವಕರನ್ನು ಬಳಸಿಕೊಂಡು ಯುವಕರಿಗೆ ಹೇಳುತ್ತ ಹೋಗಬೇಕು. ಅವರಿಗೆ ನಾಟಕದ ಕಲೆ ಕಲಿಸುವದು ಅಂದರೆ ಅಂಗಾಂಗಗಳನ್ನು ಹೇಗೆ ಬಳಸೋದು, ಎಲ್ಲಿ ಉಸಿರು ಬಿಗಿ ಹಿಡಿಯೋದು, ಎಲ್ಲಿ ದನಿಯನ್ನು ಏರಿಳಿಸಬೇಕು ಎನ್ನುವದನ್ನು ಕಲಿಸುವದಷ್ಟೇ ಅಲ್ಲ. ನಮ್ಮ ಸುತ್ತ ಮುತ್ತ ಏನಾಗುತ್ತಿದೆ ಅನ್ನುವದನ್ನು ಹೇಳಿಕೊಡಬೇಕು. ಹಾಗೆ ಮಾಡಿದಾಗ ಅವರು ತಮ್ಮ ಕತೆಯನ್ನು ಹೇಳಬಲ್ಲ ಸಮರ್ಥರಾಗುತ್ತಾರೆ. ತನ್ನ ಕಾಲದ ಕುರಿತು ಹೇಳದ ಕತೆಯಾಗಲೀ, ನಾಟಕವಾಗಲೀ, ಕಲೆಯಾಗಲೀ ಸಮಕಾಲೀನ ಅಲ್ಲ."** 'ಸಮುದಾಯ' ಸದಾ ಸಮಕಾಲೀನ ಕಲೆಯಲ್ಲಿಯೇ ಬದುಕು ಕಂಡಿದೆ. ನಾವೀಗ ನಮ್ಮ ಕತೆ ಹೇಳಬೇಕಿದೆ. ಅದಕ್ಕೆ ನಮ್ಮ ಯುವಕರನ್ನು ಸಿದ್ಧಗೊಳಿಸಬೇಕಿದೆ. ನಾಡಿನ ತುಂಬ ಈ ಕಥನವನ್ನು ತಲುಪಿಸುವ ಜವಾಬ್ದಾರಿ ನಿರ್ವಹಿಸುವ ಸಲುವಾಗಿ 'ಸಮುದಾಯ' ರೆಪರ್ಟರಿ ಕಟ್ಟುತ್ತಿದೆ. ರಂಗಭೂಮಿಯನ್ನು ತನ್ನ ಸಾಂಸ್ಕೃತಿಕ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವನ್ನಾಗಿಸಲು ಹೊರಟಿದೆ." ಎಂದು ಸಮುದಾಯ ರೆಪರ್ಟರಿಯ ಬ್ರೋಶರ್ ತನ್ನ ಆಶಯವನ್ನು ಸಾರಿದೆ.



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**